ಪ್ರಚಾರ ಪುಸ್ತಕ ಮಾಲೆ–೩೩೧

ಬೇಂದ್ರೆಕಾವ್ಯ

ಡಾ. ಜಿ. ಕೃಷ್ಣಪ್ಪ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
2018

ಪ್ರಚಾರ ಪುಸ್ತಕ ಮಾಲೆ - ೩೩೧

ಬೇಂದ್ರೆಕಾವ್ಯ

ಡಾ. ಜಿ. ಕೃಷ್ಣಪ್ಪ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು
೨೦೧೮

ಮೊದಲನೆಯ ಮುದ್ರಣ - ೨೦೧೮

ಹಕ್ಕುಗಳನ್ನು ಕಾದಿರಿಸಲಾಗಿದೆ

ಬೆಲೆ : ರೂ. ೨೦

ಪ್ರಕಾಶಕರು

ಪ್ರೊ. ಎಂ.ಜಿ. ಮಂಜುನಾಥ
ನಿರ್ದೇಶಕರು
ಪ್ರಸಾರಾಂಗ, ಮಾನಸಗಂಗೋತ್ರಿ
ಮೈಸೂರು - ೫೭೦ ೦೦೬

ಮುದ್ರಕರು

ಶ್ರೀ ಎಸ್. ಸತೀಶ್
ನಿರ್ದೇಶಕರು
ಮೈಸೂರು ವಿ.ವಿ. ಮುದ್ರಣಾಲಯ
ಮಾನಸಗಂಗೋತ್ರಿ
ಮೈಸೂರು - ೫೭೦ ೦೦೬

ಕುಲಪತಿಗಳ ನುಡಿ

ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪನೆಯಾಗಿ ಒಂದು ನೂರು ವರ್ಷಗಳು ಕಳೆದಿದ್ದು ಶತಮಾನೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದ ಸಂಭ್ರಮದಲ್ಲಿದ್ದೇವೆ. ಈ ವಿಶ್ವವಿದ್ಯಾನಿಲಯದ ಸಂಸ್ಥಾಪಕರಾದ ಕೀರ್ತಿಶೇಷ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸದಾಶಯಕ್ಕನುಗುಣವಾಗಿ ಉನ್ನತ ಶಿಕ್ಷಣವನ್ನು ನೀಡುತ್ತಾ ಜ್ಞಾನಪ್ರಸಾರದ ಕೆಲಸವನ್ನು ಮಹೋನ್ನತವಾಗಿ ಮಾಡುವಲ್ಲಿ ವಿಶ್ವವಿದ್ಯಾನಿಲಯವು ಯಶಸ್ವಿಯಾಗಿದೆ.

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಜನಸಾಮಾನ್ಯರಿಗೂ ಜ್ಞಾನಪ್ರಸಾರ ಮಾಡುವ ಉನ್ನತವಾದ ಧ್ಯೇಯೋದ್ದೇಶದಿಂದ ಸ್ಥಾಪನೆಯಾದ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಪ್ರಚಾರೋಪನ್ಯಾಸ ಮಾಲೆ ಹಾಗೂ ಪುಸ್ತಕ ಪ್ರಕಟಣೆಯ ಕ್ಷೇತ್ರದಲ್ಲಿ ಮಹತ್ಸಾಧನೆ ಮಾಡುತ್ತಿದೆ. ಇದುವರೆಗೂ ಪ್ರಸಾರಾಂಗದಿಂದ ಸುಮಾರು ಎರಡು ಸಾವಿರದ ಐದು ನೂರಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಪುಸ್ತಕಗಳು ಪ್ರಕಟವಾಗಿರುವುದು ಹೆಮ್ಮೆಯ ಸಂಗತಿಯಾಗಿದೆ.

ಪ್ರಚಾರೋಪನ್ಯಾಸಮಾಲೆಯು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅಪಾರ ಹೆಸರನ್ನು ತಂದುಕೊಟ್ಟಂತಹ

ಮಹತ್ವದ ಯೋಜನೆ. ಇದು ಮತ್ತೆ ಆರಂಭಗೊಂಡಿರುವುದು ಸಂತೋಷದ ಸಂಗತಿಯಾಗಿದೆ. ಇದಕ್ಕೆ ಕಾರಣಕರ್ತರಾದ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಎಂ.ಜಿ. ಮಂಜುನಾಥ ಅವರನ್ನು ಅಭಿನಂದಿಸುತ್ತೇನೆ. ಈ ಯೋಜನೆಯಲ್ಲಿ ಉಪನ್ಯಾಸಗಳನ್ನು ನೀಡಿ ಆ ಉಪನ್ಯಾಸಗಳು ಪ್ರಕಟಗೊಳ್ಳಲು ಹಸ್ತಪ್ರತಿಗಳನ್ನು ಸಿದ್ಧಪಡಿಸಿಕೊಟ್ಟ ವಿದ್ವಾಂಸರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

೦೬-೦೭-೨೦೧೮

ಪ್ರೊ. ಟಿ.ಕೆ. ಉಮೇಶ್
ಪ್ರಭಾರ ಕುಲಪತಿಗಳು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಪ್ರಕಾಶಕರ ನುಡಿ

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗಕ್ಕೆ ತನ್ನದೇ ಆದ ಮಹತ್ವದ ಸಾಂಸ್ಕೃತಿಕ ಪರಂಪರೆಯಿದೆ. ಪ್ರೊ. ಜಿ. ಹನುಮಂತರಾಯರಂತಹ ಹಿರಿಯ ದಾರ್ಶನಿಕ ತತ್ವಶಾಸ್ತ್ರಜ್ಞರಿಂದ ಪುಟ್ಟಸಸಿಯಾಗಿ ತದನಂತರ ರಾಷ್ಟ್ರಕವಿ ಶ್ರೀಕುವೆಂಪು, ನಾಡೋಜ ಪ್ರೊ. ದೇಜಗೌ ಮುಂತಾದ ಮಹನೀಯರ ಪ್ರೇರಣೆ, ಪ್ರೋತ್ಸಾಹ ಹಾಗೂ ದೂರದೃಷ್ಟಿಯ ಫಲವಾಗಿ ಪ್ರಸಾರಾಂಗವು ಬೃಹತ್ತಾಗಿ ಹೆಮ್ಮರವಾಗಿ ಬೆಳೆದು ನಿಂತಿದೆ.

ಇದುವರೆಗೂ ಸುಮಾರು ಎರಡು ಸಾವಿರದ ಆರುನೂರಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಪುಸ್ತಕಗಳು ನಮ್ಮ ಪ್ರಸಾರಾಂಗದಿಂದ ಪ್ರಕಟವಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಕಳೆದ ಎರಡೂವರೆ ವರ್ಷಗಳ ಅವಧಿಯಲ್ಲಿ ಸುಮಾರು ಇನ್ನೂರ ಅರವತ್ತು ಪುಸ್ತಕಗಳು ಪ್ರಸಾರಾಂಗದಿಂದ ಪ್ರಕಟವಾಗಿವೆ.

ಹಲವು ವರ್ಷಗಳಿಂದೀಚೆಗೆ ಕಾರಣಾಂತರಗಳಿಂದ ನಿಂತುಹೋಗಿದ್ದ ಪ್ರಚಾರೋಪನ್ಯಾಸ ಮಾಲೆಯನ್ನು ಪುನರಾರಂಭ ಮಾಡಿ ಹಲವಾರು ಉಪನ್ಯಾಸಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ, ಸ್ನಾತಕೋತ್ತರ ಕೇಂದ್ರಗಳಲ್ಲಿ ಹಾಗೂ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಏರ್ಪಡಿಸಿ ಆ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುತ್ತಿದೆ.

ಈ ಉಪನ್ಯಾಸ ಮಾಲಿಕೆಯನ್ನು ಮತ್ತೆ ಏರ್ಪಡಿಸಲು ಪ್ರೋತ್ಸಾಹ ನೀಡಿ ಮೊದಲ ಉಪನ್ಯಾಸ ಕಾರ್ಯಕ್ರಮವನ್ನು ಮಹಾರಾಜ ಕಾಲೇಜಿನ ಜ್ಯೂನಿಯರ್ ಬಿ.ಎ. ಹಾಲ್‌ನಲ್ಲಿ ಉದ್ಘಾಟಿಸಿದ ಅಂದಿನ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪ ಅವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಪ್ರಸಾರಾಂಗದ ಎಲ್ಲ ಕಾರ್ಯಗಳಿಗೆ ನೆರವನ್ನು ನೀಡುತ್ತಿರುವ ಪ್ರಭಾರ ಕುಲಪತಿಗಳಾದ ಪ್ರೊ. ಟಿ.ಕೆ. ಉಮೇಶ್ ಅವರಿಗೆ, ಕುಲಸಚಿವರಾದ ಪ್ರೊ. ಆರ್. ರಾಜಣ್ಣ ಅವರಿಗೆ ಈ ಪುಸ್ತಕವನ್ನು ರಚಿಸಿಕೊಟ್ಟಿರುವ ಹಿರಿಯ ವಿದ್ವಾಂಸರಾದ ಡಾ. ಜಿ. ಕೃಷ್ಣಪ್ಪ ಅವರಿಗೆ, ಪ್ರಸಾರಾಂಗದ ಸಿಬ್ಬಂದಿ ವರ್ಗದವರಿಗೆ, ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೆ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಡಾ. ಎಂ.ಜಿ. ಮಂಜುನಾಥ
ನಿರ್ದೇಶಕ

ಲೇಖಕರ ಮಾತು

ವರಕವಿ ದ.ರಾ. ಬೇಂದ್ರೆಯವರು ಕನ್ನಡದ ನವೋದಯ ಪರಂಪರೆಯನ್ನು ರೂಪಿಸಿದವರಲ್ಲಿ ಅಗ್ರಮಾನ್ಯರು. ಕನ್ನಡ ನವೋದಯ ಕಾವ್ಯಕ್ಕೆ ಇಂಗ್ಲಿಷ್‌ನ ರೊಮ್ಯಾಂಟಿಕ್ ಕಾವ್ಯ ಪ್ರೇರಣೆ ಎನ್ನುವ ತಿಳಿವಳಿಕೆಗೆ ಭಿನ್ನಮಾರ್ಗವನ್ನು ಬೇಂದ್ರೆಯವರ ಕವನಗಳು ಸೂಚಿಸಿದವು. ಇಂಗ್ಲಿಷ್ ಓದಿಕೊಂಡಿದ್ದರೂ ನಮ್ಮ ನೆಲದ ಜಾಯಮಾನ ಹಾಗೂ ಜಾನಪದದ ಸತ್ತ್ವವನ್ನು ಬಳಸಿಕೊಂಡು ಬೇಂದ್ರೆಯವರು ಕಾವ್ಯ ರಚಿಸಿದರು.

ಬೇಂದ್ರೆಯವರು ಕನ್ನಡ ನಾಡು ನುಡಿಯ ಚಿಂತನೆಯಿಂದ ೧೯೨೬ರಲ್ಲಿ 'ಗೆಳೆಯರ ಗುಂಪು' ಎಂಬ ಸಂಘಟನೆಯನ್ನು ಸ್ಥಾಪಿಸಿದರು. ಅದು ಉತ್ತರ ಕರ್ನಾಟಕದಲ್ಲಿ ನವೋದಯ ಕಾವ್ಯದ ಪ್ರಯೋಗಶಾಲೆಯಾಗಿತ್ತು. ಅವರು ಓರ್ವ ಆದರ್ಶ ವ್ಯಕ್ತಿಯಾಗಿ ತಾಯಿಯನ್ನು ಗೌರವಿಸುತ್ತ ತನ್ನ ಕಾವ್ಯನಾಮವನ್ನು 'ಅಂಬಿಕಾತನಯದತ್ತ' ಎಂದಿಟ್ಟುಕೊಂಡರು. ಅವರ ಕಾವ್ಯದಲ್ಲಿಯ ಜೀವನಮೌಲ್ಯಗಳು ಜನಾಂಗವನ್ನು ರೂಪಿಸುವ ಶಕ್ತಿವರ್ಧಕಗಳಾಗಿವೆ. ಅಂತಹ ಕವಿಯನ್ನು ಕುರಿತು ಪ್ರಚಾರೋಪನ್ಯಾಸ ಮಾಲೆಯಲ್ಲಿ ಉಪನ್ಯಾಸ ನೀಡಲು ಆಹ್ವಾನಿಸಿದ ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ ನಿರ್ದೇಶಕರಾದ ಪ್ರೊ. ಎಂ.ಜಿ. ಮಂಜುನಾಥ ಅವರ ಕಾವ್ಯ ಸಹೃದಯತೆ ನನಗೆ ಆಪ್ತವಾಗಿದೆ.

ಈಗ ಅದನ್ನು ಪ್ರಚಾರ ಪುಸ್ತಕ ಮಾಲೆಯಲ್ಲಿ 'ಬೇಂದ್ರೆಕಾವ್ಯ' ಎಂದು ಪ್ರಕಟಿಸುತ್ತಿರುವುದಕ್ಕೆ ಮೈಸೂರು ವಿಶ್ವವಿದ್ಯಾನಿಲಯ ಉಪಕುಲಪತಿಗಳಾದ ಪ್ರೊ. ಟಿ.ಕೆ. ಉಮೇಶ್ ಅವರಿಗೆ, ಪ್ರಕಾಶಕರಾದ ಪ್ರೊ. ಎಂ.ಜಿ. ಮಂಜುನಾಥ ಮತ್ತು ಮುದ್ರಕರಾದ ಶ್ರೀ ಎಸ್. ಸತೀಶ್ ಅವರಿಗೆ ನನ್ನ ಮನಃಪೂರ್ವಕ ನಮನಗಳು.

ಬೆಂಗಳೂರು — ಡಾ. ಜಿ. ಕೃಷ್ಣಪ್ಪ

೨೪-೦೭-೨೦೧೭

ಪರಿವಿಡಿ

೧. ಜೀವನ ಪರಿಚಯ

ದ.ರಾ. ಬೇಂದ್ರೆಯುವರು ೩೧-೧-೧೮೯೬ರಲ್ಲಿ ಧಾರಾವಾಡದಲ್ಲಿ ಹುಟ್ಟಿದರು. ಅವರ ತಂದೆ ರಾಮಚಂದ್ರ ಬೇಂದ್ರೆ, ತಾಯಿ, ಅಂಬವ್ವ (ಅಂಬಿಕೆ). ಅವರು ವೇದ ಪಾರಂಗತ ಚಿತ್ಪಾವನ ಬ್ರಾಹ್ಮಣರು. ಅವರ ಮೂಲ ರತ್ನಗಿರಿ ಜಿಲ್ಲೆಯ ಕೇಳಸಿಗ್ರಾಮ. ಅವರ ಮಾತೃಭಾಷೆ ಮರಾಠಿ. ಅವರು ತಮ್ಮ 'ಬೇಂದ್ರೆ' ಎಂಬ ಹೆಸರಿನ ಮೂಲದ ಬಗ್ಗೆ "'ಬೇಂದ್ರೆ' ಅಂದರೆ ನಾವು ಕೊಂಕಣದಿಂದ ಬಂದಿದ್ದೇವೆ. ವೇದ ಹೇಳುವವರು 'ವೇದ್ರೆ' ಆದರು. ಬರುಬರುತ್ತ ವೇದ್ರೆ, ವೇಂದ್ರೆ ಆದರು. ಆ ಮೇಲೆ ವೇಂದ್ರೆ ಬೇಂದ್ರೆ ಆದರು." ಎಂದು ಹೇಳಿಕೊಂಡಿದ್ದಾರೆ.

ಬಡತನದ ಬಾಳು ಸಾಗಿಸಲು ಖಾನಾವಳಿ ನಡೆಸುತ್ತಿದ್ದ ಗಟ್ಟಿಜೀವ ಅಜ್ಜಿ ಗೋದೂಬಾಯಿಯ ಮಮತೆಯಲ್ಲಿ ಅವರು ಬೆಳೆದರು. ಅವರ ೧೧ನೇ ವಯುಸ್ಸಿನಲ್ಲಿ ಅವರ ತಂದೆ ಗಂಡಮಾಲೆರೋಗದಿಂದ ತೀರಿಹೋದರು. ಅವರ ಬಾಲ್ಯ ಸ್ತ್ರೀ ಪೋಷಿತವಾಗಿತ್ತು. ಸ್ತ್ರೀಶೋಷಿತರಲ್ಲಿ ಶೋಷಿತಳು. ಅವರ ಬವಣೆಯು ಕವಿಯ ಮಾರ್ದವತೆಗೆ ಪ್ರತೀಕವಾಯಿತು. ಅವರಿಗೆ ತಾಯಿ ಪ್ರತ್ಯಕ್ಷ ದೇವತಾ ಸ್ವರೂಪವಾಗಿದ್ದು, ಸೃಜನಶೀಲ ವ್ಯಕ್ತಿತ್ವವೆಂಬುದೇ ತಾಯಿ ತತ್ವ ಎಂದು ತಿಳಿದರು.

'ಆ ತಾಯಿ ಮಾತಾಯಿ ಈ ಬಾಯಿ ತುತ್ತಲ್ಲ
ಅವಳನ್ನು ಸ್ತುತಿಸಲು ಎದೆಸಾಲದು'
(ಬಾಲ್ಯಕಾಂಡ: ಮತ್ತೆ ಶ್ರಾವಣಾ ಬಂತು)

ಎಂಬ ಎರಡು ಸಾಲುಗಳಲ್ಲಿ ತಾಯಿಯ ದಿವ್ಯತೆಯನ್ನು ವರ್ಣಿಸಿದ್ದಾರೆ. ಅವರು ಧಾರಾವಾಡ ಜಾನಪದ ಪರಿಸರದಲ್ಲಿ ಹುಟ್ಟಿ ಬೆಳೆದು, ಅದರ ದನಿಗೆ ಮೈಮನಕೊಟ್ಟು, ಅದರ ಸಹಜ ನಾದದಲ್ಲಿ ಉಲ್ಲಾಸಗೊಂಡು, ಅದರ ಸೊಗಡನ್ನು ಶಿಷ್ಟಕಾವ್ಯದಲ್ಲಿ ತಂದ ಕಾವ್ಯ ಗಾರುಡಿಗರು.

ಬೇಂದ್ರೆಯವರ ಅಜ್ಜಿ ಮತ್ತು ತಾಯಿಯವರು ದೈವಭಕ್ತರಾಗಿದ್ದರು. ಅವರು ಮನೆಯಲ್ಲಿ ಮಾಡುತ್ತಿದ್ದ ಚಿದಂಬರ ಭಜನೆ ಮತ್ತು ರಾಮಭಜನೆಗಳು ಬೇಂದ್ರೆಯವರನ್ನು ಭಕ್ತಿಪಥದತ್ತ ಕೊಂಡೊಯ್ಯುವ ದೀವಿಗೆಗಳಾದವು. ಅವರು ತಾಯಿ ಮತ್ತು ಅಜ್ಜಿಯರಿಗೆ ಬ್ರಹ್ಮಚೈತನ್ಯ, ಅಕ್ಕಲಕೋಟೆ ಮಹಾರಾಜರ ಚರಿತ್ರೆ, ಶಿವಲೀಲಾಮೃತ, ಜ್ಞಾನಸಿಂಧು, ಹರಿವಿಜಯ, ಪಾಂಡವ ಪ್ರತಾಪ ಮುಂತಾದ ಮರಾಠಿಗ್ರಂಥಗಳನ್ನು ಓದಿ ಹೇಳುತ್ತಿದ್ದರು. ಆ ಓದಿನ ಪ್ರಭಾವ ಅವರನ್ನು ಮಾತೃ ಆರಾಧಕರನ್ನಾಗಿ ಮಾಡಿತು. ಧಾರಾವಾಡದ ಜಾನಪದ ಹಾಗೂ ಭಕ್ತ ಪರಂಪರೆಯಲ್ಲಿ ಒಂದಾಗಿ ಬೆಳೆದ ಅವರು ಜಾನಪದವನ್ನು, ಭಕ್ತಿಯನ್ನು ತಮ್ಮ ಕಾವ್ಯದ ಒಂದು ಸಹಜ ಭಾವವಾಗಿಸಿಕೊಂಡರು. ಅವರಿಗೆ ಜನಪದ ಬದುಕು ಮತ್ತು ಭಾಷೆ ಒಂದು ಬುದ್ಧಿಪೂರ್ವಕ ಕಾವ್ಯ ಪ್ರಯೋಗವಾಗಿರಲಿಲ್ಲ. ಅದು ಸಹಜ ಸ್ಫೂರ್ತಿಯ ಜೀವಲಹರಿಯಾಗಿತ್ತು.

ಅವರು ವಾಸಿಸುತ್ತಿದ್ದ ಕಾಮನಕಟ್ಟಿಯಲ್ಲಿ ಸಾಹಿತ್ಯಿಕ, ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ಚಿಂತನೆಯನ್ನು ಹೊತ್ತ ಶಾಂತಕವಿ, ಕಾವ್ಯನಂದ (ನರಸಿಂಹಾಚಾರ್ಯ) ಪುಣೇಕರ,

ವೆಂಕಟರಂಗೋಕಟ್ಟಿ, ಗರಗಸಿದ್ಧಗಂಗಪ್ಪ, ಸೋಂಡಿಲಕ್ಷಾಧೀಶ, ರಾವಸಾಹೇಬ ಮಾಳಾಪುರ, ನಾ. ಶ್ರೀ.ರಾಜಪುರೋಹಿತ, ಕಡಪಾರಾಘವೇಂದ್ರರಾವ್ ಮುಂತಾದವರು ವಾಸಿಸುತ್ತಿದ್ದರು. ಅಲ್ಲಿಯೇ ವಿಕ್ಟೋರಿಯಾ ಹೈಸ್ಕೂಲು, ನೇಟಿವ್ ಜನರಲ್ ಲೈಬ್ರರಿ, ವಿದ್ಯಾವರ್ಧಕಸಂಘ, ಎರಡು ಥೇಟರುಗಳು, ಛಾಪಾಖಾನೆಗಳು ಇದ್ದು ಅದು ಆಲೂರು ವೆಂಕಟರಾಯರ ರಾಷ್ಟ್ರೀಯ ಚಳುವಳಿಯ ಕೇಂದ್ರವಾಗಿತ್ತು.

ಬೇಂದ್ರೆಯವರು ಚಿಕ್ಕಂದಿನಿಂದಲೂ ಕಷ್ಟದ ಜೀವನ ಸಾಗಿಸುತ್ತಿದ್ದಂತೆ ಅವರನ್ನು ಇನ್ನೂ ಹೆಚ್ಚು ಪರೀಕ್ಷೆಗೆ ಒಳಪಡಿಸುವಂತೆ ವಿಧಿ ಕಾಡುತ್ತಿತ್ತು. ಅವರು ಮ್ಯಾಟ್ರಿಕ್ ಪರೀಕ್ಷೆ ಮುಗಿಸಿ ಬಂದ ಸಂಜೆ ತಮ್ಮ ಕುಟುಂಬದ ಆಧಾರವಾಗಿದ್ದ ಅಜ್ಜಿಯನ್ನು ಕಳೆದುಕೊಂಡರು. ತಾಯಿ ಮತ್ತು ಮಕ್ಕಳು ದಿಕ್ಕು ತಪ್ಪಿದರು. ಆದರೆ ದೈವ ದೊಡ್ಡದು. ಅವರ ಚಿಕ್ಕಪ್ಪ ಬಂಡೋಪಂತ ಬೇಂದ್ರೆ ಪುಣೆಯಲ್ಲಿ ಉತ್ತಮ ಕೆಲಸದಲ್ಲಿದ್ದರು. ಅವರು ವಿಶಾಲ ಹೃದಯಿಗಳು. ಬೇಂದ್ರೆ ಪುಣೆಗೆ ಹೋಗಿ ೧೯೧೪ರಿಂದ ೧೯೧೮ರವರೆಗೆ ಅಲ್ಲಿ ಫರ್ಗುಸನ್ ಕಾಲೇಜುನಲ್ಲಿ ಬಿ.ಎ. ಕಲಿತರು. ಅವರು ಕಾಲೇಜು ವಿದ್ಯಾಭ್ಯಾಸದ ಅವಧಿಯಲ್ಲಿ 'ಶಾರದಾ ಮಂಡಲ' ಎಂಬ ಸ್ನೇಹಿತರ ಕೂಟ ನಿರ್ಮಿಸಿ ಸಾಹಿತ್ಯಾಧ್ಯಯನ ನಡೆಸಿದರು. ಚಿಕ್ಕಂದಿನಲ್ಲಿ ಕಂಠಪಾಠ ಮಾಡಿದ್ದ 'ಗಂಗಾಲಹರಿ', ಲಕ್ಷ್ಮೀಶನ ನಾದಮಾಧುರ್ಯ ಮತ್ತು ಸರ್ವಜ್ಞನ ಬಿಚ್ಚು ನುಡಿಗೆ ಅವರು ಪಕ್ಕಾಗಿದ್ದರು. ಪುಣೆಯ ವಾಸ್ತವ್ಯದಲ್ಲಿ ಕಾಳಿದಾಸನ 'ಶಾಂಕುತಲ', ಶಂಕರಾಚಾರ್ಯರ 'ಸೌಂದರ್ಯಲಹರಿ', ಜ್ಞಾನೇಶ್ವರರ 'ಜ್ಞಾನೇಶ್ವರಿ' ಅಭ್ಯಾಸ ಮಾಡಿದರು. ಶೇಕ್ಸ್‌ಪಿಯರ್,

ಶೆಲ್ಲಿ, ಕೀಟ್ಸ್, ಎಮರ್ಸನ್, ಮೆಟರ್ ಲಿಂಕರ ಆಂಗ್ಲ ಸಾಹಿತ್ಯವನ್ನು ಅಧ್ಯಯನ ಮಾಡಿದರು. ಬಾಬುರಾವ್ ಬಿಢೆಯವರಿಂದ ಹಿಂದಿ ಸಾಹಿತ್ಯ ಹಾಗೂ ಜ್ಯೋತಿಷ್ಯಶಾಸ್ತ್ರ ತಿಳಿದರು. ಹಿಂದಿ, ಮರಾಠಿ, ಇಂಗ್ಲಿಷ್, ಸಂಸ್ಕೃತ ಭಾಷೆಯ ಪಂಡಿತರಾದರು.

ಬೇಂದ್ರೆಯವರು ಕವಿ ರವೀಂದ್ರನಾಥ ಠಾಗೂರ್, ಯೋಗಿ ಶ್ರೀ ಅರವಿಂದ, ಐರಿಷ್‌ಕವಿ ಜಾರ್ಜ್‌ರಸಲ್(ಏ.ಈ), ಖಲೀಲ್ ಜಿಬ್ರಾನ್ ರನ್ನು ತನ್ನ ನಾಲ್ವರು ಗುರುಗಳೆಂದು ಕರೆದುಕೊಂಡಿದ್ದಾರೆ. ಮೊದಲ ಇಬ್ಬರು ಗುರುಗಳನ್ನು ಕುರಿತು 'ಉಭಯವು ಅಭಯವಾದುದನ್ನು ನನ್ನಿಬ್ಬರು ಗುರುಗಳಲ್ಲಿ ಕಂಡೆ. ಎರಡು ಕಣ್ಣು ಒಂದು ನೋಟ. ರವಿ ಉದಯದಿಂದ ಅರವಿಂದ ಅರಳಿತು' ಎಂದಿದ್ದಾರೆ.

ಅವರು 'ಏ.ಈ' ಮತ್ತು ಖಲೀಲ್ ಜಿಬ್ರಾನ್‌ರ ಕೃತಿಗಳನ್ನು ಓದಿ ಆ ಇಬ್ಬರು ಚಿಂತಕರ ಬಗ್ಗೆ ಗೆಳೆಯರ ಗುಂಪಿನ ಮಧುರಚೆನ್ನ, ವಿ.ಕೃ. ಗೋಕಾಕ್ ಮುಂತಾದವರೊಡನೆ ಆಳವಾದ ಚಿಂತನೆ ನಡೆಸಿದರು. ಅವರು ಮತ್ತು ಗೆಳೆಯರು ಅಯರಿಶ್ ಬ್ರಾಂಚ್ ಆಗಲಿಲ್ಲ. ಥಿಯಾಸೊಫಿ ಬ್ರಾಂಚ್ ಆಗಲಿಲ್ಲ. ಕನ್ನಡದ ಸ್ವಂತದ ಶಕ್ತಿ ಬೆಳೆಸುವುದೇ ಅವರ ಧ್ಯೇಯ ಧ್ಯಾನ ಆಗಿತ್ತು.

ಬೇಂದ್ರೆಯವರು ರಚಿಸಿದ ೧೯೧೮ರ, 'ಸ್ವಧರ್ಮ' ಪತ್ರಿಕೆಯಲ್ಲಿ ಬೆಳಕುಕಂಡ 'ಬೆಳಗು' ಕವನ ನೂತನ ಛಂದಃ ಪ್ರಯೋಗದಿಂದ ಕೂಡಿ ಹೊಸ ಕಾವ್ಯದ ಉದಯವನ್ನು ಕನ್ನಡದಲ್ಲಿ ಉಂಟು ಮಾಡಿತು. ಆ ಹೊಸತು ಜನಕ್ಕೆ ಮೆಚ್ಚುಗೆ ಆಗುವುದೊ ಇಲ್ಲವೊ ಎಂದು 'ಸದಾನಂದ ಜಂಗಮ' ಎಂಬ ಕಾವ್ಯನಾಮದಲ್ಲಿ ಅದನ್ನು ಬರೆದಿದ್ದರು. ಅನಂತರ ಅವರು ೧೯೧೮ರಲ್ಲಿ ಮೊದಲು

ಪ್ರಕಟವಾದ 'ತುತೂರಿ' ಮತ್ತು 'ಸರಸ್ವತಿ' ಕವನಗಳಲ್ಲಿಯ 'ಅಂಬಿಕಾತನಯದತ್ತ'ರಾಗಿಯೇ ಕನ್ನಡದಲ್ಲಿ ಮೆರೆದರು.

ಬೇಂದ್ರೆಯವರು ಬಿ.ಎ ಪರೀಕ್ಷೆಯ ಫಲಿತಾಂಶ ತಿಳಿಯುವ ಮೊದಲೇ ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನ ಶಿಕ್ಷಕರಾದರು. ಶಿಕ್ಷಕರಾಗಿ ಜೀವನಕ್ಕೆ ಒಂದು ಆಧಾರ ದೊರಕಿದ ಕಾರಣ ಪುಣೆಗೆ ಹೋಗಿ ತಾಯಿಯನ್ನು ಕರೆದುಕೊಂಡು ಬಂದು ಧಾರವಾಡದ ಕಾಮನಕಟ್ಟೆಯಲ್ಲಿ ಮತ್ತೆ ಮನೆಮಾಡಿದರು. ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಮೂರುವರ್ಷ, ಅನಂತರ ರಾಷ್ಟ್ರೀಯ ಶಾಲೆಯಲ್ಲಿ ಮೂರು ವರ್ಷ ದುಡಿದರು. ೧೯೧೯ರಲ್ಲಿ ತಾಯಿಯು ಒಪ್ಪಿತಂದ ರಂಗೂಬಾಯಿಯವರನ್ನು ಹುಬ್ಬಳ್ಳಿಯಲ್ಲಿ ವಿವಾಹವಾದರು. ಅವರು ಮಹಾರಾಷ್ಟ್ರೀಯರ ಸಂಪ್ರದಾಯದಂತೆ ಪತಿಯ ಮನೆಯಲ್ಲಿ ಲಕ್ಷ್ಮೀಬಾಯಿ ಎಂಬ ಹೊಸ ಹೆಸರಿನಿಂದ ಕರೆಯಲ್ಪಟ್ಟರು. ಲಕ್ಷ್ಮೀಬಾಯಿಯವರು 'ಸಖೀಗೀತ'ದ ನಾಯಕಿಯಾಗಿ ಬೇಂದ್ರೆಯವರ 'ನನಗೂ ನಿನಗೂ ಅಂಟಿದ ನಂಟಿನ ಕೊನೆಬಲ್ಲವರಾರು ಕಾಮಾಕ್ಷಿಯೇ!' ಎಂಬ ತಾತ್ವಿಕ ಚಿಂತನೆಗೆ ಕಾರಣರಾದರು.

ಬೇಂದ್ರೆಯವರ ದಾಂಪತ್ಯದ ಫಲವಾದ ಒಂಬತ್ತು ಮಕ್ಕಳಲ್ಲಿ ಉಳಿದವರು ಇಬ್ಬರು ಗಂಡು ಮಕ್ಕಳಾದ ಪಾಂಡುರಂಗ ಮತ್ತು ವಾಮನ, ಒಬ್ಬ ಹೆಣ್ಣು ಮಗಳು ಮಂಗಳ. ಇಂದು ಮಂಗಳ ಮಾತ್ರ ಉಳಿದಿದ್ದು ಅವರು ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿದ್ದಾರೆ. ಬೇಂದ್ರೆಯವರು ಕಳೆದುಕೊಂಡ ಮಕ್ಕಳನ್ನು ಕುರಿತು ಹಾಡಿದ 'ಕರುಳಿನ ವಚನಗಳು', 'ಹಾಡುಪಾಡು' ಹಾಗೂ ಪಲವಾರು ಕವನಗಳು ಮನುಜನ ವಾತ್ಸಲ್ಯ ಅರಳಿದ

ಲೋಕಗೀತಗಳಾಗಿವೆ.ಅವರು ತಮ್ಮ ಕಾವ್ಯದ ಕೇಂದ್ರ ಪ್ರತಿಮೆ ತಾಯಿಯಾದುದರಿಂದ ತಮ್ಮ ಕಾವ್ಯನಾಮವನ್ನು 'ಅಂಬಿಕಾತನಯದತ್ತ' ವೆಂದಿಟ್ಟುಕೊಂಡರು. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಓರ್ವ ಶ್ರೇಷ್ಠಕವಿಯಾಗಿ ತನ್ನ ತಾಯಿಯ ಹೆಸರಿನ ಕಾವ್ಯನಾಮವನ್ನಿಟ್ಟುಕೊಂಡ ಮೊದಲಿಗರು ದ.ರಾ. ಬೇಂದ್ರೆ 'ಅಂಬಿಕೆ' ಅವರಿಗೆ ತನ್ನ ತಾಯಿಯಂತೆ ವಿಶ್ವಮಾತೆಯೂ ಆದುದರಿಂದ ಆ ಶಕ್ತಿ ತನ್ನನ್ನೂ ಈ ಜಗತ್ತನ್ನೂ ನಡೆಸುತ್ತಿದೆ ಎಂದು ಭಾವಿಸಿದರು. ಅವರು ನಮ್ಮ ಭಾರತೀಯ ಕಾವ್ಯಪರಂಪರೆಯ ಭಕ್ತಕವಿಗಳಾದ ಶರಣರು, ದಾಸರು ತಮ್ಮ ಕಾವ್ಯನಾಮದಲ್ಲಿ 'ಅಂಕಿತನಾಮ'ವನ್ನು ಬಳಸಿದಂತೆ 'ಅಂಬಿಕಾತನಯದತ್ತ' ವನ್ನು ಅಂಕಿತವಾಗಿಯೂ ಬಳಸಿದರು. ಅವರು 'ಅಂಕಿತ'ವಾಗಿ ಸೂಚಿಸಿರುವ ಕಾವ್ಯದಲ್ಲಿ ಅನುಭಾವದ ಸ್ಪರ್ಶವಿದೆ.

ಅಂಬಿಕಾತನಯನ ಜಂಬದ ಪಾಡಳಿದು
ನಂಬಿಗೆಯ ಹಾಡಾಗಿ ಬಂತಿಲ್ಲಿಗೆ **(ಸಖೀಗೀತ)**

ಧೃಢವಾದ ನಂಬಿಕೆ, ಶ್ರದ್ಧೆ, ಸಮರ್ಪಣೆ ಮತ್ತು ನಿಷ್ಠೆ ಅರವಿಂದರ ತತ್ವಜ್ಞಾನದ ಪ್ರಮುಖ ಭಾವಗಳಾಗಿವೆ. ಭಗವಂತನಿಗೆ ಸಂಪೂರ್ಣ ಸಮರ್ಪಣೆ ಎಂದಾಗ ಬರಿದೇಹ, ಪ್ರಾಣ, ಮನಸ್ಸು, ಹೃದಯವಲ್ಲ. ಅವುಗಳನ್ನು ಪೂರ್ಣವಾಗಿ ಅರ್ಪಿಸುವುದು. ಅದು ಬೇಂದ್ರೆ ಕಾವ್ಯತತ್ವ.

ಬೇಂದ್ರೆಯವರದು ಸ್ವತಂತ್ರ ಪವೃತ್ತಿಯ, ನಿಷ್ಠುರ ಜೀವನ ಶೈಲಿಯಾಗಿತ್ತು. ಹಾಗಾಗಿ ಅವರು ಹಲವಾರು ಶಾಲೆಗಳಲ್ಲಿ ತಾತ್ಕಾಲಿಕವಾಗಿ ದುಡಿಯಬೇಕಾಯಿತು. ಅವರು 'ಗೆಳೆಯರ

ಗುಂಪು' ಕಟ್ಟಿ ಸಾಹಿತ್ಯಸೃಷ್ಟಿ, ಸಾಹಿತ್ಯ ಪ್ರಸಾರ ಮಾಡಿದರು. 'ಜಯಕರ್ನಾಟಕ' ಪತ್ರಿಕೆ ಸಂಪಾದಕರಾಗಿ ಸಾಹಿತ್ಯಾಸಕ್ತಿಯನ್ನು ಕನ್ನಡಿಗರಲ್ಲಿ ಬೆಳೆಸಿದರು. ಸಾಹಿತ್ಯದ ಆದರ್ಶದಡಿಯಲ್ಲಿ ವೈಯಕ್ತಿಕ ಸಂಸಾರದ ಸುಖ ದುಃಖಕ್ಕೆ ಜಾಣಕಿವುಡಾದರು.

೧೯೨೨ರಲ್ಲಿ ಅವರ 'ಕೃಷ್ಣಾಕುಮಾರಿ' ಷಟ್ಪದಿಕಾವ್ಯ ಪ್ರಕಟವಾಯಿತು. ೧೯೩೨ರಲ್ಲಿ ಅವರ ಪ್ರಥಮ ಕವನ ಸಂಕಲನ 'ಗರಿ' ಪ್ರಕಟವಾಯಿತು. ಆ ಸಂಗ್ರಹದೊಳಗಿನ ಸ್ವಾತಂತ್ರ್ಯ ಸ್ಫೂರ್ತಿಯ 'ನರಬಲಿ' ಕವನ ಅವರನ್ನು ಜೇಲಿಗೆ ಕಳಿಸಿತು. ಬ್ರಿಟೀಷ್ ಸರ್ಕಾರ ಅವರನ್ನು ಮೂರುತಿಂಗಳು ಬೆಳಗಾವಿಯ ಹಿಂಡಲಗ ಜೇಲಿನಲ್ಲಿಯೂ, ಒಂಬತ್ತು ತಿಂಗಳು ಧಾರಾವಾಡದ ಹತ್ತಿರ ಮುಗದ ಎಂಬ ಹಳ್ಳಿಯಲ್ಲಿ ನಜರ್‌ಬಂಧಿ ಶಿಕ್ಷೆಯಲ್ಲಿಯೂ ಇಟ್ಟಿತು. ಆ ನಜರ್‌ಬಂಧ್ ಶಿಕ್ಷೆಯ ಅವಧಿಯಲ್ಲಿ ಮುಗದದ ದುರ್ಗಾದೇವಿ ದೇವಾಲಯದಲ್ಲಿ ಕುಳಿತು ರಚಿಸಿದ 'ಭಾವಗೀತೆ' ಕಾವ್ಯ ಸೃಷ್ಟಿಯ ಬೆರಗನ್ನು ಕಂಡರಿಸಿದ ಶ್ರೇಷ್ಠ ಕವನ. ಆ ನಜರ್‌ಬಂದ್ ಸೆರೆಯಿಂದ ೧೯೩೩ರಲ್ಲಿ ಬಿಡುಗಡೆಯಾಗಿ ಧಾರವಾಡಕ್ಕೆ ಬಂದರು. ಇದ್ದ ಮೇಷ್ಟರ ಕೆಲಸ ಹೋಗಿ ಬೇರೆ ಯಾರೂ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬಾರದೆಂದು ಸರ್ಕಾರದ ಆದೇಶವಿದ್ದ ಕಾರಣ ಎಂ.ಎ. ಪರೀಕ್ಷೆಯ ಅಭ್ಯಾಸಕ್ಕಾಗಿ ೧೯೩೩ರಲ್ಲಿ ಅವರ ಚಿಕ್ಕಪ್ಪನ ಮನೆ ಪುಣೆಗೆ ಹೋದರು. ೧೯೩೫ರಲ್ಲಿ ಎಂ.ಎ ಪಾಸಾದರು. ಆದರೆ ವಿಧಿಯ ಆಟದಂತೆ ಆಶ್ರಯದಾತ ಚಿಕ್ಕಪ್ಪನನ್ನು ಅದೇ ವರ್ಷ ಕಳೆದುಕೊಂಡರು.

ಪುಣೆಯಿಂದ ಸಂಸಾರ ಸಮೇತ ಧಾರವಾಡಕ್ಕೆ ಬಂದಾಗ ಅವರಿಗೆ ನೌಕರಿ ಇರಲಿಲ್ಲ. ೧೯೩೬ರಿಂದ ೧೯೪೪ರವರೆಗೆ

ಸ್ಥಿರವಾದ ನೌಕರಿ ಇಲ್ಲದೆ ಅಲೆದಾಡಿದರು. ಆ ಅವಧಿಯಲ್ಲಿ ವಿಶಾಲ ಹೃದಯಿ ಮಾಸ್ತಿ ವೆಂಕಟೇಶಯ್ಯಂಗಾರ್ಯರು ಬೇಂದ್ರೆಯುವರನ್ನು ತಮ್ಮನಂತೆ ನೋಡಿಕೊಂಡರು. ಬೇಂದ್ರೆಯವರನ್ನು 'ಜೀವನ' ಪತ್ರಿಕೆಯ ಸಂಪಾದಕರನ್ನಾಗಿ ನೇಮಿಸಿದರು. ನೋವು ನಲಿವಿನ, ದ್ವಂದ್ವ ಸಂಘರ್ಷಗಳ ನೆಲೆರಹಿತ ಜೀವನ ಸ್ಥಿತಿಯಲ್ಲಿ ಒಂಬತ್ತು ಮಕ್ಕಳು ಹುಟ್ಟಿ ಮೂರು ಜನ ಮಾತ್ರ ಉಳಿದರು. ಆ ಸಂಕೀರ್ಣ ಮನಸ್ಥಿತಿಯಲ್ಲಿ 'ಮೂರ್ತಿ ಮತ್ತು ಕಾಮಕಸ್ತೂರಿ'(೧೯೩೪), 'ಸಖೀಗೀತ' (೧೯೩೭), ಉಯ್ಯಾಲೆ(೧೯೩೮), ನಾದಲೀಲೆ (೧೯೩೮) ಕವನ ಸಂಕಲನಗಳು ಹಾಗೂ ಕಾಳಿದಾಸನ ಮೇಘದೂತಮ್‌ನ ಕನ್ನಡ ಅನುವಾದ 'ಕನ್ನಡ ಮೇಘದೂತ' (೧೯೩೮) ರಚಿಸಿದರು. ಆ ಅವಧಿಯ ಕಾವ್ಯವೆಲ್ಲವೂ ಅತಿ ಸ್ವಾಭಾವಿಕವಾಗಿ ಕವಿ ಜೀವನದಿಂದ ಹಸಿಹಸಿಯಾಗಿ ಹೊಮ್ಮಿಬಂದ ಚಿಗುರಿನಂತಿವೆ.

ಅವರ ಎಂ.ಎ. ಅಭ್ಯಾಸಕ್ಕೆ ತಕ್ಕ ಉದ್ಯೋಗವನ್ನು ಪುಣೆ ಕಾಮರ್ಸ್ ಕಾಲೇಜಿನವರು ೧೯೪೨ರಲ್ಲಿ ನೀಡಿದರು. ಅವರು ಅಲ್ಲಿ ಅರೆಕಾಲಿಕ ಕನ್ನಡ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಅದೇ ವರ್ಷ ಶ್ರೀ ಅರವಿಂದ ಮತ್ತು ಶ್ರೀಮಾತೆಯವರ ದರ್ಶನ ಪಡೆದರು. ೧೯೪೩ರಲ್ಲಿ ಶಿವಮೊಗ್ಗದಲ್ಲಿ ನಡೆದ ೨೭ನೆಯ (ಇಪ್ಪತ್ತೇಳನೆಯ) ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ಅವರು ೧೯೪೪ ರಿಂದ ೧೯೫೬ ರವರೆಗೆ ಸೊಲ್ಲಾಪುರದ ಡಿ.ಎ.ವಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ದುಡಿದರು. ಅವರಿಗೆ ೧೯೫೯ರಲ್ಲಿ 'ಅರಳು ಮರಳು' ಕವನ ಸಂಗ್ರಹಕ್ಕೆ

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೭೪ರಲ್ಲಿ 'ನಾಕುತಂತಿ' ಕವನ ಸಂಗ್ರಹಕ್ಕೆ ಜ್ಞಾನಪೀಠ ಪ್ರಶಸ್ತಿ ದೊರಕಿತು. ಅವರು ತುಂಬು ಬಾಳನ್ನು ಸವಿದು ೨೯-೧೦-೧೯೮೧ ದೀಪಾವಳಿ ನರಕ ಚತುರ್ದಶಿ ದಿನ ಮಧ್ಯಾಹ್ನ ೧-೧೮ಕ್ಕೆ ನಿರ್ವಾಣ ಹೊಂದಿ ಬೆಳಕಲ್ಲಿ ಬೆಳಕಾಗಿ ಹೋದರು. ಆ ಜ್ಯೋತಿ ಕನ್ನಡ ಸಾಹಿತ್ಯಕ್ಕೆ ನೀಡಿದ ಬೆಳಕು ಕನ್ನಡಿಗರ ನುಡಿಯಲ್ಲಿ ಹೊಳಪಾಗಿ ಸದಾ ಬೆಳಗುತ್ತಿದೆ.

OOO

೨. ಮೊದಲ ಕೃತಿ : ಕೃಷ್ಣಾಕುಮಾರಿ

ದ.ರಾ. ಬೇಂದ್ರೆಯವರ ಮೊದಲ ಪ್ರಕಟಿತಕೃತಿ 'ಕೃಷ್ಣಾಕುಮಾರಿ'. ಅದನ್ನು ಅವರು ವಾರ್ಧಕ ಷಟ್ಪದಿಯಲ್ಲಿ ಖಂಡಕಾವ್ಯವಾಗಿ ರಚಿಸಿದರು. ಅದನ್ನು ಕನ್ನಡ ಕುಲ ಪುರೋಹಿತ ಆಲೂರ ವೆಂಕಟರಾಯರು ೧೯೨೨ರಲ್ಲಿ ಪ್ರಕಟಿಸಿದರು. ಕವಿ ಲಕ್ಷ್ಮೀಶನ ನಾದ ಮಾಧುರ್ಯದಲ್ಲಿ ಮಿಂದ ಬೇಂದ್ರೆಯವರು ಆ ಕೃತಿಯನ್ನು ಲಕ್ಷ್ಮೀಶನಿಗೆ ಅರ್ಪಿಸಿದ್ದಾರೆ. ಕೃಷ್ಣಾಕುಮಾರಿ ಉದಯಪುರದ ರಾಜ ರಾಣಾ ಭೀಮಸಿಂಹನ ಮಗಳು. ಅವಳು ರಜಪೂತ ರಮಣಿಯರ ಲಾವಣ್ಯ ಲತೆಗೆ ಬಿಟ್ಟ ಹೂವಿನಂತಿದ್ದಳು. ಅವಳು ಪ್ರೀತಿಸಿ ವರಿಸಬೇಕೆಂದಿದ್ದ ಜೋಧಪುರದರಸನು ಸಾಯುವನು. ಅನಂತರ ಅವಳನ್ನು ಜಯಪುರದ ಜಗತ್ಸಿಂಹನಿಗೆ ಕೊಡಲು ಭೀಮಸಿಂಹ ಒಪ್ಪುವನು. ಅಷ್ಟರಲ್ಲಿ ಜೋಧಪುರದ ಅರಸನಾಗಿ ಬಂದ ಮಾನಸಿಂಹನು ಕುಟೀಲ ನೀತಿಯಿಂದ ಭೀಮಸಿಂಹನನ್ನು ಸೋಲಿಸುವನು. ಭೀಮಸಿಂಹ ನಿಸ್ಸಹಾಯಕನಾಗುವನು. ಜಗತ್ಸಿಂಹ ಮತ್ತು ಮಾನಸಿಂಹರಲ್ಲಿ ಯುದ್ಧವಾಗಿ ಇಬ್ಬರೂ ನಂದಿದಂತಾಗುವರು. ಅದೇ ಸಮಯಕ್ಕೆ ವಿಧಿ ಅಮೀರಖಾನನನ್ನು ಅಲ್ಲಿಗೆ ಕಳುಹಿಸಲು ಅವನ ಕ್ರೌರ್ಯಕ್ಕೆ ರಜಪೂತರು ನಡುಗಿ ಹೋಗುವರು.

ಅಂತಹ ಪರಿಸ್ಥಿತಿಯ ಒಂದು ಅಮಾವಾಸ್ಯೆಯಲ್ಲಿ ಕೃಷ್ಣಾಕುಮಾರಿಯು ವಿಷಸೇವಿಸಿ ಕಾಳನಿದ್ರೆಗೆ ವಶವಾದಳು.

ಸಾವನ್ನು ಬರಮಾಡಿಕೊಂಡ ಮುಗ್ಧೆ ಕೃಷ್ಣಾಕುಮಾರಿಯ ಮನದ ಮಿಡಿತವು 'ಕೃಷ್ಣಾಕುಮಾರಿ' ಕಾವ್ಯವಾಗಿದೆ. ಬೇಂದ್ರೆಯವರು ಆ ಕಾವ್ಯಕ್ಕೆ ಮಂಗಳ ಹಾಡುತ್ತಾ ಹೀಗೆ ಪ್ರೇಮ ದರ್ಶನವನ್ನು ನೀಡಿದ್ದಾರೆ:

ಪ್ರೇಮಲತೆ! ಮೂರ್ತಿಮಾನ್ ಪ್ರೇಮಲತೆಯೇ! ನಿನ್ನ
ಕಾಮಲತೆಯೆಂದು ಕಾಮಿಸಿದರೌ ! ನಿನ್ನನ್ನು
ಹೋಮಿಸಿದರೌ ಕುಸುಮ ಸುಕುಮಾರ ಕುವರಿಯೆ! ಕಾಮಾಗ್ನಿ ಹೋತ್ರದಲ್ಲಿ
ಸೋಮಾನನೆ! ಪದ್ಮ-ಪಾದ-ರಜ-ಪೂತರೀ
ಭ್ರಾಮಿಸಿದ ರಜಪೂತರೀಗ ಬೀಳಲಿಯೆಂದು
ನೇಮಿಸಿದನೌ ವಿಧಿಯು, ದೇವಭುಕ್ತಳಿದಾಗು ಸೌಭಾಗ್ಯ ಭಾವೇ !

೦೦೦

೩. ಮೊದಲ ಕವನ ಸಂಕಲನ : ಗರಿ

ಬೇಂದ್ರೆಯವರ ಮೊದಲ ಪ್ರಕಟಿತಕವನ ಸಂಕಲನ 'ಗರಿ'. ಅದರಲ್ಲಿ ಅವರು ೧೯೧೮ರಿಂದ ೧೯೩೨ರ ಅವಧಿಯಲ್ಲಿ ರಚಿಸಿದ ಕವನಗಳಿವೆ. ಮಾಸ್ತಿ ವೆಂಕಟೇಶ ಅಯ್ಯಂಗಾರರು ೧೯೩೨ರಲ್ಲಿ 'ಗರಿ'ಯನ್ನು ಪ್ರಕಟಿಸಿದರು. 'ಸಹೃದಯರಿಗೆ' ಎಂಬ ನುಡಿಯಲ್ಲಿ ಬೇಂದ್ರೆಯವರು 'ಇವು ನನ್ನವಲ್ಲ; ಕನ್ನಡದ ಕವನಗಳು' ಎಂದು ಹೇಳಿದ್ದಾರೆ. ಆ ಕನ್ನಡದ ಕವನಗಳು ಇಂದಿಗೂ ಜನಪ್ರಿಯವಾಗಿದ್ದು ಕನ್ನಡಿಗರ ಮನಸ್ಸನ್ನು ಆಹ್ಲಾದಗೊಳಿಸುತ್ತಿವೆ. ಅದರಲ್ಲಿರುವ ೫೫ ಕವನಗಳು ಹೊಸ ಭಾವ, ಛಂದ, ವಿಷಯ ವೈವಿಧ್ಯತೆಯಿಂದ ಕೂಡಿ ನವೋದಯಕಾವ್ಯ ಮಾರ್ಗ ಸೃಷ್ಟಿಸಿದವು.

ಕಾವ್ಯವೆಂಬುದು ಸುಂದರ ಭಾವ ಸಾಮ್ರಾಜ್ಯ. ಅದು 'ಎಲ್ಲೆ ಕಟ್ಟು ಇಲ್ಲದಾ ಬಾನಬಟ್ಟೆ'ಯಂತೆ ವಿಸ್ತಾರವಾದದ್ದು, ಅಲ್ಲಿ ಭೂತದ ಪರಂಪರೆಯಲ್ಲಿ ವರ್ತಮಾನದ ಬದುಕು ತಿಳಿದು, ಭವಿಷ್ಯತ್ತನ್ನು ಹಸನು ಮಾಡಿಕೊಳ್ಳುವ-ಕ್ರಿಯಾತ್ಮಕ ಜೀವ ಚೇತನ ಭಾವರೂಪಿಯಾಗಿ 'ಹಕ್ಕಿಗಾಳಿ' ಪ್ರವಹಿಸುತ್ತಿದೆ. ಆ 'ಹಕ್ಕಿಗಾಳಿ'ಯೇ ಕವಿ. ಅವನು ಹಾರಿದ ಜಾಡಿನಲ್ಲಿ ಉದುರಿದ ಗರಿಗಳೆ ಕವನಗಳು.

'ಅದರ ಹಾಗೆ ಸಾಗಿದಾ
ಹಾರುವಂಥ ಹಕ್ಕಿಯ
ಜಾಡು ಹಿಡಿದು ನಡೆದಿವೆ
ಉದುರಿದಂಥ ಗರಿಗಳು'

ಗಾಳಿ ಪಕ್ಕದಲ್ಲಿ ಕ್ರೀಡೆಯಾಡುವ ಗರಿಗಳು ಭೂಮಿಯ ಸೆಳೆತದಿಂದ ಪೃಥ್ವಿಗಿಳಿದರೆ –ಆ ಕವನಗಳು ಅರ್ಥವಾಗಲಿಲ್ಲವೆಂದು, ಅದರ ಬಣ್ಣಕ್ಕೆ ಆಶ್ಚರ್ಯಪಟ್ಟು ಮುಚ್ಚಿಡಬೇಡ. ಅದರ ರೋಮ ಕೀಳಿ ಭಾವಬಂಧದ ಸೌಂದರ್ಯ ಕಾಣದಾಗದ ಅರಸಿಕನಾಗಬೇಡ ಎಂದು ಬೇಂದ್ರೆ ಹೇಳಿದ್ದಾರೆ. ಅದರ ಸಮಗ್ರ ಚಿತ್ರವನ್ನು ನಿನ್ನ ರಸಿಕತನದಿಂದ ನಿನ್ನ ಚಿತ್ತದಲ್ಲಿ ಕಲ್ಪಿಸಿಕೊಂಡು 'ಊದಿ ತೂರಿಹಾರಿಸು.' ಅದು ನಿನ್ನ ರಸಿಕ ಸಹೃದಯತೆಯ ಗಾಳಿಯಿಂದ ಜೀವ ಭಾವ ತುಂಬಿ ಹಾರುತ್ತವೆ. ಅವು 'ಹಾರಲೆಂದು ಹುಟ್ಟಿದಾ! ಹಕ್ಕಿ ಮೈಯಗರಿಗಳು' ಎಂದಿದ್ದಾರೆ.

ಸಮಗ್ರಹಕ್ಕಿಯ ಸಂಕೇತಮಾತ್ರವಾದ ಗರಿಯಲ್ಲಿ ಆ ಹಕ್ಕಿಯ ಮಾಟ, ಆಟ ಕಂಡಾಗ ನೀನು 'ಹಿಗ್ಗಿಬೆಂಬತ್ತು ತಾ! ನವಿಲು ಆಗಿ ಕುಣಿಯುವೆ' ಎಂದು ರಸಿಕ ಸಹೃದಯನಿಗೆ ತಿಳಿಸಿದ್ದಾರೆ.

'ಅದುವು ಸೊಗಸದಿದ್ದರೂ
ಊದು ಗರಿಯ ಹಾರಿಸು
ಕಣ್ಣ ಮರೆಗೆ ಒಯ್ಯಲು
ಇದೆ ಸಮರ್ಥ ಗಾಳಿಯು'

ಗರಿಯ ಜೀವನ ವೈಭವದ ಹಾರುಶಕ್ತಿಯ ಕಾಣ್ಕೆ ಕಾಣಲು ನೀನು ಊದು. ಅಂದರೆ ನಿನ್ನ ಗಾಳಿಯಾದ ಜೀವಶಕ್ತಿಯು ಸಮರ್ಥವಾಗಿರುವುದನ್ನು –ನಿನ್ನ ಅಳಿವಿಗೆ ತರುತ್ತದೆ. ನಿನ್ನಲ್ಲಿ 'ಇದೆ ಸಮರ್ಥಗಾಳಿಯು' ಎಂದು ಭರವಸೆಯನ್ನು ನೀಡುತ್ತದೆ. ಇದು ಕವಿ ಸಹೃದಯರ ಸೂಕ್ಷ್ಮ ಭಾವಸಂಬಂಧ.

ಹಾಗೆ ಸಹೃದಯನಿಂದ ಹಾರಿದ ಕವನ 'ಗರಿ' ಇನ್ನೊರ್ವ ಸಹೃದಯನ ಮನ ಅರಳಿಸಿ ಕ್ರಿಯಾಶೀಲವಾಗುತ್ತ ಸಾಗುತ್ತಿರುತ್ತದೆ.

ಅದು ನಿತ್ಯಕವನಗಳ ಸಹಜ ಜೀವಂತಿಕೆಯು, ಬದುಕಿ ಉಳಿವ, ಸತ್ವತುಂಬಿದ ಸತ್ಯ.

ಶ್ರೀ ಅರವಿಂದರು 'ದೇವರು ರಹಸ್ಯವಾಗಿಯೇ ಉಳಿದಿದ್ದರೂ ಪ್ರಕೃತಿಯ ರಹಸ್ಯಗಳಲ್ಲಿ ವ್ಯಕ್ತವಾಗುತ್ತಿದ್ದಾನೆ' ಎಂದು ತಿಳಿಸಿದ್ದಾರೆ. ರವಿಯ ಉದಯ ನಿಸರ್ಗ ರಹಸ್ಯದ ಸತ್ಯ ಪ್ರಕಾಶ. ಅದನ್ನು ಧ್ಯಾನಿಸಿದ ಯುವಕವಿ ಬೇಂದ್ರೆ ಅಧ್ಯಾತ್ಮದ ಸೂಕ್ಷ್ಮತೆಯನ್ನು ಹೀಗೆ 'ಬೆಳಗು' ಕವನದಲ್ಲಿ ಕಡೆದಿಟ್ಟರು :

'ಅರಿಯದು ಅಳವು ತಿಳಿಯದು ಮನವು
ಕಾಣದೋ ಬಣ್ಣಾ
ಕಣ್ಣಿಗೆ ಕಾಣऽದೋ ಬಣ್ಣಾ' (ಬೆಳಗು)

ಅರಿವಿಗೆ ಸಿಗದ ಅಚಿಂತ್ಯಾನುಭವ 'ಕಾಣದೋ ಬಣ್ಣಾ' ಎಂಬ ಅಚ್ಚರಿ! ಸೂರ್ಯನು ಉದಯಿಸುತ್ತಾ-ಬಣ್ಣ ಬಣ್ಣವನ್ನು ಪ್ರಕೃತಿಗೆ ಹಂಚುತ್ತ, ಹೂದಳಗಳನ್ನು ಪ್ರೀತಿಯಿಂದ ತಬ್ಬುತ್ತಾನೆ. ಅವು ಶಾಂತವಾಗಿ ಅರಳಿ ಕಂಪು ಸೂಸುತ್ತವೆ. ಹಾಗೆ ಮನುಜರ ಮನದ ಹೂದಳಗಳು ಅರಳಿ ಆಧ್ಯಾತ್ಮಮುಖಿಯಾಗಿರಲಿ ಎಂದು ಬೇಂದ್ರೆ ಆಶಿಸಿ 'ಶಾಂತೀ ರಸವೇ ಪ್ರೀತಿಯಿಂದಾ! ಮೈದೋರೀತಣ್ಣಾ! ಇದು ಬರಿ-ಬೆಳಗಲ್ಲೋ ಅಣ್ಣಾ' ಎಂದು ಹಾಡಿದ್ದಾರೆ. ಇದು ಭಾರತೀಯ ತತ್ವಶಾಸ್ತ್ರದ ಹಿನ್ನಲೆಯ ವಿಶ್ವಾತ್ಮಕ ಭಾವಗೀತೆ.

* * *

ಜನಪದ ಹಾಡು, ಕುಣಿತ, ನಾಟಕಗಳ ಮೋಡಿಗೆ ಒಳಗಾಗಿ ಬೆಳೆದ ಬೇಂದ್ರೆಯುವರು ತಮ್ಮ ಕವನಗಳಲ್ಲಿ ಜನಪದ ಅಂಶಛಂದಸ್ಸನ್ನು ಹಲವು ವಿಧದಲ್ಲಿ ಪ್ರಯೋಗಿಸಿದ್ದಾರೆ. (ತ್ರಿಪದಿ,

ಕಿರಿಯಕ್ಕರ, ಛಂದೋ ವಸಂತ, ಮದನವತಿ). ಮಾತ್ರಾ ಛಂದಸ್ಸಿನಲ್ಲಿ ನವನವೀನ ಪ್ರಯೋಗಗಳನ್ನು ಮಾಡಿದ್ದಾರೆ. ಉತ್ಸಾಹ, ಮಂದಾನಿಲ, ಲಲಿತರಗಳೆಗಳಲ್ಲಿ ಕಾವ್ಯ ರಚಿಸಿದ್ದಾರೆ. ಶರ, ಕುಸುಮ, ವಾರ್ಧಕ, ಭಾಮಿನೀ ಷಟ್ಪದಿಗಳ ಪಾದಗಳನ್ನು ತಮ್ಮ ಭಾವ, ಲಯಕ್ಕೆ ತಕ್ಕಂತೆ ಮುರಿದು ಕಟ್ಟಿದ್ದಾರೆ. ಅದರ ಪಾದಗಳನ್ನು ದ್ವಿಪದಿ, ಚೌಪದಿಗಳಲ್ಲಿ ಹೊಸತಾಗಿ ಹೆಣೆದು ನವನವೀನ ಛಂದೋರೂಪಗಳನ್ನು ಸೃಷ್ಟಿಸಿದ್ದಾರೆ. ಮುಕ್ತ ಛಂದಸ್ಸಿನಲ್ಲಿಯೂ ಕವನಗಳನ್ನು ರಚಿಸಿದ್ದಾರೆ.

'ಅಷ್ಟ ಷಟ್ಪದಿಯಲ್ಲಿ ಉಯ್ಯಾಲೆಯಾಡುತಿದೆ ಕೌತುಕದ ಬಗೆ' ಎಂದು 'ಅಷ್ಟಷಟ್ಪದಿ' ಕವನದಲ್ಲಿ ತಿಳಿಸಿದ್ದಾರೆ. ಅಷ್ಟ ಷಟ್ಪದಿಗೆ ಇಂಗ್ಲಿಷ್ ಸಾನೆಟ್ ಮೂಲ. ಅದರ ಪ್ರಯೋಗ ಕುರಿತು 'ಉಯ್ಯಾಲೆ' ಯ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ : 'ಕೆಲವು ಅಷ್ಟ ಷಟ್ಪದಿಗಳಲ್ಲಿ ಪ್ರಾಸರಾಹಿತ್ಯ, ಪಾದಾಂತಯತಿಯ ನಿಯತರಾಹಿತ್ಯ ಮತ್ತು ತಿರುಪಿನ ವೈಚಿತ್ರ್ಯ ಎಂಬ ಹೊಸಲಕ್ಷಣಗಳನ್ನು ಕಾಣಬಹುದು'.

* * *

೧೯೧೯ ಮೇ ತಿಂಗಳಲ್ಲಿ 'ಆರ್ಯ' ಸಂಚಿಕೆಯಲ್ಲಿ ಶ್ರೀ ಅರವಿಂದರು ಬರೆದ ಕೀಟ್ಸ್ ಕವಿಯ ಕಾವ್ಯ ವಿಮರ್ಶೆ ಪ್ರಕಟವಾಗಿತ್ತು. ಕವಿಯು ಸೌಂದರ್ಯದ ನಾಲ್ಕು ನೆಲೆಗಳನ್ನು ಮುಟ್ಟಿದರೆ ಪೂರ್ಣತೆ ಬರುತ್ತದೆ ಎಂಬ ವಿಚಾರ ಆ ವಿಮರ್ಶಾ ಲೇಖನದಲ್ಲಿತ್ತು. ಪ್ರತಿಯೊಂದು ನುಡಿಯಲ್ಲಿ ಒಂದೊಂದು ನೆಲೆ, ನಾಲ್ಕು ನುಡಿ ನಾಲ್ಕು ನೆಲೆ. ಇದನ್ನು ನಾಲ್ವರಿ – ನಾಲ್ಕು

ಬಗೆಯ ತಿಳುವಳಿಕೆ, ಜ್ಞಾನ ಎಂಬುದಾಗಿ ಬೇಂದ್ರೆ ತಿಳಿದರು. ಈ ಜ್ಞಾನವನ್ನು ಚತುರ್ಮುಖ ಸೌಂದರ್ಯ ಎಂಬುದಾಗಿ ಸಿದ್ಧಪಡಿಸಿದರು. ಅವುಗಳು :

೧. Sensuous Beauty– ಐಂದ್ರಯಿಕ ಸೌಂದರ್ಯ

೨. Imaginative Beauty–ಕಾಲ್ಪನಿಕ ಸೌಂದರ್ಯ

೩. Intellectual Beauty– ಬೌದ್ಧಿಕ ಸೌಂದರ್ಯ

೪. Ideal Beauty– ಆದರ್ಶ ಸೌಂದರ್ಯ

ಬೇಂದ್ರೆಯವರ ಚತುರ್ಮುಖ ಸೌಂದರ್ಯ ಸಿದ್ಧಾಂತದಿಂದ 'ಚಂದ್ರ', 'ಗಂಡುಸು ಹೆಂಗುಸಿಗೆ', 'ಚತುರ್ಮುಖ ಸೌಂದರ್ಯ' ಮತ್ತು 'ಹಂಪೀ–ವಿಜಯನಗರ ದರ್ಶನ' ಎಂಬ ಕವನಗಳು ರೂಪಗೊಂಡವು. ಈ ಎಲ್ಲ ಕವನಗಳಲ್ಲಿ ಮೊದಲನೆಯ ನುಡಿ ಐಂದ್ರಯಿಕ ಸೌಂದರ್ಯ, ಎರಡನೆಯ ನುಡಿ ಕಾಲ್ಪನಿಕ ಸೌಂದರ್ಯ, ಮೂರನೆಯ ನುಡಿ ಬೌದ್ಧಿಕ ಸೌಂದರ್ಯ ಹಾಗೂ ಕೊನೆಯ ನುಡಿ ಆದರ್ಶ ಸೌಂದರ್ಯವನ್ನು ವಿವರಿಸಲು ಬೇಂದ್ರೆ ಮೀಸಲಿಟ್ಟರು. ಉದಾಹರಣೆಗೆ 'ಚತುರ್ಮುಖ ಸೌಂದರ್ಯ' ಕವನದ ಮೊದಲ ನುಡಿಯನ್ನು ಪರಿಶೀಲಿಸೋಣ.

ಮೈ ಮುಟ್ಟೆ ಮನಮುಟ್ಟ ಬರುವೆ, ರೂಪವ ನೋಡೆ
ನೀ ಮೂಡಿ ಬುದ್ಧಿಯೊಳು ನೆಡುವೆ, ರಸವನು ಸವಿಯೆ
ಧೀ ಮೂಢತೆಯನೊಡೆದು ನಿಲ್ಲಿಸುವೆ ಚಿತ್ತವನು
ಚಿತ್ರಿಸಿದ ಬೊಂಬೆಯಂತೆ!!
ಈ ಮಾತುಗಳ ಗಾಳಿ ಕಿವಿಯ ಗವಿಯಲ್ಲುಲಿಯೆ
ಸೀ ಮಾತುಗಳ ಸೊನೆಯ ಸುರಿಸಿ ಎದೆ ಮುಗುಳಿಂದೆ
ನಾ ಮೂಸೆ ಸೂಸಿದ್ಧೈ ಹಮ್ಮು ನೆಮ್ಮದಿಯಿಂದ
ಮೈ ಮರೆಯುವಂತೆ ಮಾಡಿ!!

ಈ ಷಟ್ಪದಿಯಲ್ಲಿ ಮೈ, ಮನ, ಬುದ್ಧಿ(ಧೀ), ನಾಲಿಗೆ, ಕಿವಿ, ಎದೆ, ಮೂಗು (ಮೂಸೆ) ಎಂಬ ಪದಾವಳಿ ಜ್ಞಾನೇಂದ್ರಿಯಗಳ ಜ್ಞಾನಗಮ್ಯತೆಯನ್ನು ವಿವರಿಸುತ್ತವೆ.

ಈ ಕವನ ಸಂಕಲನದ 'ನರಬಲಿ' ಕವನ ಬೇಂದ್ರೆಯವರಿಗೆ ಜೇಲುವಾಸ ತಂದಿತು. ಅದು ಅವರ ಬದುಕಿನಲ್ಲಿ ಉಂಟುಮಾಡಿದ ಪರಿಣಾಮ 'ಸಖೀಗೀತ' ದಲ್ಲಿ ಕಾವ್ಯವಾಗಿದೆ. ಏನೂ ಆಧಾರವಿಲ್ಲದ ನಿಸ್ಸಹಾಯಕನಾದ 'ರಾಷ್ಟ್ರಾಭಿಮಾನಿಕವಿ' ದೈವದ ಮೊರೆ ಹೋಗಿರುವುದು ಅಲ್ಲಿ ಕಂಡಿದೆ.

'ನರಬಲಿ' ಕವನವು ಬಲಿಮಾಡಿತೆನ್ನನು
ಹೆಳವನಿದ್ದಲ್ಲಿಗೆ ಹೊಳೆಬಂದಿತು.
ಮನೆಯನು ಮುರಿದಿತು ಹಾರು ವಿಹಂಗಮ!
ಜಂಗಮ–ದೀಕ್ಷೆಯು ನಿನಗೆಂದಿತು.

ಪ್ರಾಣದ ಒಗರಷ್ಟು ಹಿಂಡಿತು ಹಿಂಡಲಿಗೆ
ಮುಗದದ ಮಲೆಗಾಳಿ ಮುಂದೆಳೆದಿತು
ಆಳುವರ ಮೇಲೊಬ್ಬ ಆಳುವನಿರದಿರೆ
ಹಾಳಾಗಿ ಹೋಗಿತ್ತು ಈ ಜಗವು. (ಸಖೀಗೀತ)

ಸ್ವಾತಂತ್ರ್ಯದ ಸ್ಫೂರ್ತಿಯ 'ನರಬಲಿ' ಕವನದ ವೀರದನಿ ಕೇಳಿರಿ :

ನಿಂದಿಹರಿದೊ ಇಗೊ!
ಎಕ್ಕಡ ಮೆಟ್ಟಿಹ ಎಕ್ಕಲ ಬಂಟರು
ಉಕ್ಕಡಗಾತ್ರದ ಉಕ್ಕಡದವರು
ಕಕ್ಕಡಹೊತ್ತಿಸಿ ಕಣ್ಣುಗಳಲ್ಲಿ
ಮಾಡಿಸೆ ಕಣ್ಣೀರ್ ಜಳಕವನು

ಏರಿಸೆ ರುಂಡದ ಹೂವುಗಳ
ಹಾಕಲು ಮದ್ದಿನ ಧೂಪವನು
ಬಾರಿಸೆ ಗುಂಡಿನ ಗಂಟೆಗಳ
ಬಂದಿತು ಬಂದಿತು ನೈವೇದ್ಯ
ನೀತಿಯ ಭೂತವೆ ಹೊರಡಿಲ್ಲಿಂದ
ದಯೆಯ ದೆವ್ವವೆ ನೀ ಹೊರಡು
ಕರುಳಿನ ಮರುಳೇ ಓಡಿಲ್ಲಿಂದ
ನ್ಯಾಯರಾಕ್ಷಸನೆ ನೀನೋಡು
ಬಲಗಾಲ್ ಬುಡದಿಂ ಬಿಡುಗಡೆ ಬಿಡಿಸಲು
ನರಬಲಿಯೇ ಬೇಕು!
ಇದುವೇ ಕಾಳಿಯ ಪೂಜೆಯು ಶುದ್ಧ!
ಇದಕ್ಕೆ ಹುಂಬರು ಎಂಬರು ಯುದ್ಧ!

'ಗರಿ' ಕವನ ಸಂಕಲನದ ಕವನಗಳು ಇಂದಿಗೂ ಓದುಗನ ಆಲೋಚನೆಯನ್ನು ಜಾಗೃತಗೊಳಿಸುತ್ತ ಅವನನ್ನು ವಿಚಾರಶೀಲನನ್ನಾಗಿ ಮಾಡುತ್ತಿವೆ. ನೈತಿಕ ಪ್ರಜ್ಞೆಯನ್ನು ವಿಕಾಸಗೊಳಿಸುತ್ತಿವೆ. ಮಧುರ ಪ್ರೇಮದ ಸುಖ ನೀಡುತ್ತಿವೆ. 'ಬೆಳಗು' 'ಕರಿಮರಿನಾಯಿ' 'ಹಕ್ಕಿ ಹಾರುತಿದೆ ನೋಡಿದಿರಾ' 'ತುತ್ತಿನಚೀಲ' 'ನಗೀನವಿಲು' 'ರಾಗರತಿ' 'ಪಾತರಗಿತ್ತಿ ಪಕ್ಕ' ಬಿಸಿಲುಗುದುರೆ' 'ನನ್ನ ಕೈಯ ಹಿಡಿದಾಕೆ' 'ಚಳಿಯಾಕೆ' 'ಯುಗಾದಿ' ಮುಂತಾದ ಕವನಗಳು ಇಂದಿಗೂ ಜನಪ್ರಿಯವಾಗಿವೆ.

'ಲೀಲೆಯಲಿ ಯಾವುದೂ ವಿಫಲಮಲ್ಲ' (ಲೀಲೆ)

ನಿನ್ನೆ ದಿನವಿದ್ದಂತೆ ನಾಳೆ ಇಲ್ಲ
ನನ್ನಿಯೊಂದೇ ಮಾತ್ರ ಅಚಲವಿಹುದಲ್ಲ! (ದಿನದ ಹಾಡು)

ತುಸುವು ಕೇಳಲು ಕೂಡ ಸೊಲ್ಲ ಮರೆತಿರಬೇಕು (ಓ ಹಾಡೇ !)

ಆರದಂಥವನಾರು
ಕುಡಿದು ಪ್ರೀತಿಯ ನೀರು?
ಅಮೃತಫಲ ತಾನೆ ತಾನುಂಡಹಣ್ಣು.

* * *

ತನ್ನ ಮಾತಿನಲೆಲ್ಲು
ವಿಶ್ವ ಜೀವದ ಸೊಲ್ಲು
ನುಡಿಯುತಿರೆ ಜೀವಕ್ಕೆ ಮುಕ್ತಿಯಹುದು (ಕೀರ್ತಿ)

ಹುಸಿನಗುತ ಬಂದೇವ ನಸುನಗುತ ಬಾಳೋಣ
ತುಸು ನಗುತ ತೆರಳೋಣ
ಬಡ ನೂರು ವರುಷಾನ ಹರುಷಾದಿ ಕಳೆಯೋಣ
ಯಾಕಾರೆ ಕೆರಳೋಣ! (ನನ್ನ ಕೈಯ ಹಿಡಿದಾಕೆ)

ಆದರಿನ್ನು ತಿನ್ನುವದೇನನ್ನ?
ಅನ್ನವೆಲ್ಲವೂ ಆಯಿತು ಚಿನ್ನ! (ಕೆಲಸವಿಲ್ಲದವರ ಹಾಡು)

ಬೇವಿನ ಕಹಿ ಬಾಳಿನಲ್ಲಿ
ಹೂವಿನ ನಸುಗಂಪು ಸೂಸಿ
ಜೀವಕಳೆಯ ತರುತಿದೆ. (ಯುಗಾದಿ)

ರಸವೆ ಜನನ
ವಿರಸ ಮರಣ
ಸಮರಸವೇ ಜೀವನ (ನನ್ನ ಹಾಡು)

OOO

೪. ಮಾತೃ ಭಕ್ತ 'ಅಂಬಿಕಾತನಯದತ್ತ'

ಬೇಂದ್ರೆಯವರಿಗೆ ತಾಯಿಯೇ ಸರ್ವಸ್ವ. ಅವರು ತಮ್ಮ ಕಾವ್ಯನಾಮವನ್ನು ತನ್ನ ತಾಯಿಯ ಹೆಸರಿನಲ್ಲಿಟ್ಟುಕೊಂಡು ತಾಯಿಯ ಶ್ರೇಷ್ಠತೆಯನ್ನು ಮೆರೆದಿದ್ದಾರೆ. ಅವರು 'ಅಂಬಿಕಾತನಯದತ್ತ' ಎಂಬ ಕವನದಲ್ಲಿ ತಮ್ಮ ತಾಯಿಯನ್ನು ಕುರಿತು 'ನಿನ್ನ ತನುವಿನಿಂದ ಬಂದ ಮುದ್ದು ತನಯನೀತನು। ನೀನು ಈಯಲಿತ್ತನು' ಎಂದು ತನ್ನ ಸರ್ವವೂ ತಾಯಿಯದು ಎಂಬ ಸತ್ಯವನ್ನು ಕಾವ್ಯವಾಗಿಸಿದ್ದಾರೆ. ಅವರ ಕಾವ್ಯದ ಸ್ಥಾಯೀಭಾವ ಮಾತೃಪ್ರಜ್ಞೆಯಾಗಿದೆ.

'ಮೂರ್ತಿಗಾಗಿ ಮುಗಿದ ಕೈಯ್ಯು ಗುಡಿಗೆ ಸಲ್ಲುವಂತೆಯೇ ।
ಎರಡು ಒಂದೆಂಬಂತೆಯೇ ॥
ಹಾಡಾಲಾಗಿ ಕವಿಯು ಎಂದು ಜನವು ನನ್ನ ಕರೆದಿದೆ ।
ನಿನ್ನ ಹೆಸರು ಮರೆಗಿದೆ ॥
ನಿನ್ನ ಲಲ್ಲೆಯಲ್ಲಿ ಹುಟ್ಟಿ ಬೆಳೆದು ಬಂದ ಸೊಲ್ಲಿದು ।
ಬೇರೆ ಏನು ಬಲ್ಲದು ॥
ನಿನ್ನ ಉದರದೊಂದ ಹೂವ ಸರಸ್ವತಿಗೆ ಸಲಿಸಿದೆ ।
ಚುಕ್ಕಿಯಾಗಿ ನೆಲೆಸಿದೆ ॥
ಸಾವಿರದ ಮನೆಗಳಲ್ಲಿ ನನಗೆ ಮನೆಯ ಮಾಡಿದೆ ।
ತಾಯಿ ಆಟ ಹೂಡಿದೆ ॥
ನಿನ್ನ ಹೆಸರಿನಲ್ಲಿ ನಾನು ಬರೆವುದೇನು ಸೋಜಿಗ ।
ತಿಳಿಯಲಾರದೀ ಜಗ ॥

(ಅಂಬಿಕಾತನಯದತ್ತ : ಗಂಗಾವತರಣ)

ಅಂಬಿಕೆಯ ಉದರದ ಹೂ ದತ್ತಾತ್ರೇಯ. ಹಾಗೆಯೇ ತಾಯಿ ಅಂಬಿಕೆಯ ಹೆಸರನ್ನು ತನ್ನ ಕಾವ್ಯನಾಮವಾಗಿಸಿಕೊಂಡು ಆಕೆಯಿಂದ ಉದುರಿಹೋಗದ ಹೆಸರಾಗಿ ಸರಸ್ವತಿಗೆ ಸಲ್ಲಿಸಲ್ಪಟ್ಟವನು. ತಾಯಿಯ ವರದಿಂದ ಶ್ರೇಷ್ಠಕವಿಯಾಗಿ ಸಾಹಿತ್ಯಲೋಕದ ಶಾಶ್ವತ ಚುಕ್ಕೆಯಾಗಿ ನೆಲೆಸಿದವನು ಎಂದು ಕವಿ 'ಅಂಬಿಕಾತನಯದತ್ತ'ನನ್ನು ಬೇಂದ್ರೆಯವರು ಬಣ್ಣಿಸಿ ಸಂತಸಪಟ್ಟಿದ್ದಾರೆ. ಈ ಕವನದಲ್ಲಿ ಅವರು ಶ್ಲೇಷೆಯ ಸುಂದರ, ಸಾರ್ಥಕ ಪ್ರಯೋಗವನ್ನು ಮಾಡಿದ್ದಾರೆ. ಮಾತೃ ಪ್ರಜ್ಞೆಯಲ್ಲಿ ಭಾವದ ಜೀಕಾಟದೊಡನೆ ತಾತ್ವಿಕತೆ, ದಾರ್ಶನಿಕತೆ ಮೇಳೈಸಿ 'ಮೂರ್ತಿಗಾಗಿ ಮುಗಿದ ಕೈಯ್ಯು ಗುಡಿಗೆ ಸಲ್ಲುವಂತೆಯೇ! ಎರಡು ಒಂದೆಂಬತೆಯೆ' ಎಂಬ ಭಾವತನ್ಮಯತೆ ಹೊಂದಿದ್ದಾರೆ. ತನ್ನ ತಾಯಿಯನ್ನು ಸ್ತುತಿಸಲು ಎದೆ ಸಾಲದು. 'ಹೆಣ್ಣು ಎನ್ನುವ ಮಾತು ತಾಯಿ ಎನ್ನುವ ಮಾತು ಎರಡಲ್ಲ ಒಂದು' ಎಂಬ ಅಮೋಘ ಚಿಂತನೆಯನ್ನು ನೀಡಿದವಳು ತಾಯಿ ಅಂಬವ್ವ ಎಂದು ಸ್ತುತಿಸಿದ್ದಾರೆ. ಅವರ ನಾನು ಕವನದಲ್ಲಿ 'ವಿಶ್ವಮಾತೆಯ ಗರ್ಭಕಮಲ ಜಾತ–ಪರಾಗ! ಪರಮಾಣು ಕೀರ್ತಿ ನಾನು' ಎಂದು ಹೇಳಿರುವಲ್ಲಿ ವಿಶ್ವಚಿಂತನೆ ಇದೆ. ಅವರು ವಿಶ್ವಮಾತೆ, ಭೂಮಿತಾಯಿ, ಭರತಮಾತೆ, ಕನ್ನಡದತಾಯಿ, ಹೆತ್ತತಾಯಿ ಅಂಬಿಕೆ – 'ಈ ಐದು ಐದೆಯರೆ ಪಂಚಪ್ರಾಣಗಳಾಗಿ! ಈ ಜೀವ ದೇಹನಿಹನು' ಎಂದು ಹೇಳಿಕೊಂಡಿದ್ದಾರೆ. ಅವರು ತಮ್ಮ ಹೃದಯಾರವಿಂದದಲ್ಲಿರುವ ನಾರಾಯಣನೇ ನರರೂಪದ ಈ ದತ್ತಾತ್ರೇಯನಿಂದ ವಿಶ್ವದ ಅಂತರಂಗದ ಮಾತುಗಳನ್ನು ಕನ್ನಡಿಸುತ್ತಿರುವನು ಅಂದರೆ ಪ್ರತಿಫಲಿಸುತ್ತಿರುವನು ಮತ್ತು ಕನ್ನಡದಲ್ಲಿ ನುಡಿಯುತ್ತಿರುವನು ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

ಹೃದಯಾರವಿಂದದಲ್ಲಿರುವ ನಾರಾಯಣನೆ
ತಾನಾಗಿ ದತ್ತನರನು
ವಿಶ್ವದೊಳನುಡಿಯಾಗಿ ಕನ್ನಡಿಸುತಿಹನಿಲ್ಲಿ
ಅಂಬಿಕಾತನಯನಿವನು. (ನಾನು : ಗಂಗಾವತರಣ)

ಬೇಂದ್ರೆಯವರು 'ಗಂಡುಸು ಹೆಂಗುಸಿಗೆ' ಎಂಬ ವಾರ್ಧಕ ಷಟ್ಪದಿಯ ಕವನದಲ್ಲಿ ಇಡೀ ಸ್ತ್ರೀ ಸಮೂಹವನ್ನು 'ತಾಯಿ' ಎಂದು ಕರೆದಿದ್ದಾರೆ.

'ತಾಯೆ ಕನಿಮನೆಯೇ ನೀ, ಅಕ್ಕ ಅಕ್ಕರತೆಯೇ
ಭಾಯೆನ್ನ ತಂಗಿ ಮುದ್ದು ಬಂಗಾರವೇ
ನೀಯೆನ್ನ ಹೆಂಡತಿಯೊ ಮೈಗೊಂಡ ನನ್ನಿಯೋ
ಮಗಳೊ ನನ್ನೆದೆಯ ಮುಗುಳೊ?

ಈ ಎನ್ನ ಇರವಿಂಗೆ ಬೇವಸದ ಬಾಳ್ವಿಕೆಗೆ
ಈಯುತ್ತ ಕೈಮೈಗಳಂ ಜೀವಭಾವದಿಂ
ಸ್ತ್ರೀಯೆ, ಕಾಪಾಡಿದೌ ಪಾಡಾಗಿ ಮೂಢನನು
ತಕ್ಕೈಸಿ ನೂರು ತೆರದಿ.' (ಗಂಡುಸು–ಹೆಂಗುಸಿಗೆ : ಗರಿ)

ಎಂದು ಹೇಳಿರುವ ಚಿಂತನೆಯಲ್ಲಿ ಗಂಡಸಾಗಿ ತನ್ನೆಲ್ಲ ಪುರುಷ ಪ್ರಧಾನ ಭಾವನೆಗಳನ್ನು ಬದಿಗೊತ್ತಿ, ಸ್ತ್ರೀಶಕ್ತಿಯನ್ನು ಅರಿತು ಅಲ್ಲಿ ನೆಲೆಸಿರುವ ಕೋಮಲಾಂತಃಕರಣ ಮತ್ತು ಜೀವಪೋಷಕ ಸತ್ವದಿಂದ ತಾನು ಪೂರ್ಣನಾಗಲು ಪ್ರಯತ್ನಿಸಿರುವುದು ಕಂಡು ಬರುತ್ತದೆ. ಮಿಂಚಿನ ಹೊಳಪಿನ ಸೃಷ್ಟಿ ಹಾಗೂ ಜ್ಞಾನದ ನೆಲೆ ತಾಯಿ ಎಂದು ತಿಳಿದು 'ತಾಯೆ ಕನಿಮನೆಯೇ ನೀ' ಎಂದಿದ್ದಾರೆ. ಅವರಿಗೆ ತಾಯಿಯೆಂದರೆ ಬೆಳಕು ಮತ್ತು ಜ್ಞಾನ.

'ಬೆಳಕಿನ ಬಾಂಧವ್ಯದಿಂದ ತಾಯ ಸೆರಗ ಹಿಡಿದೆವು
ಬೆಳಕಿನಿಂದ ಬಂದೆವಣ್ಣ ಬೆಳಕಿನತ್ತ ನಡೆವೆವು.

(ವಚನಗಳು : ಚೈತ್ಯಾಲಯ)

೦೦೦

೫. ಪ್ರೇಮ ಗೀತೆಗಳು

ಪ್ರೀತಿ ಎಂಬುದು ಗಂಡು ಹೆಣ್ಣಿನ ಯೌವನ ಸಹಜವಾದ ಬಯಕೆ. ಅದು ಪ್ರೇಮವಾಗುವುದು ಪ್ರಿಯಕರ-ಪ್ರೇಯಸಿಯು ಪ್ರೀತಿಯ ಸ್ವಾರ್ಥವನ್ನು ಮೀರಿ ಪ್ರೇಮಾರಾಧಕರಾದಾಗ. ಅಂತಹ ಪ್ರೇಮದಲ್ಲಿರುವ ಕಾಮಕ್ಕೆ ಶುದ್ಧತೆ ಆವರಿಸುತ್ತದೆ. ಈ ಬಗೆಯ ಶುದ್ಧ ಒಲವಿನ ಕವನಗಳು ಬೇಂದ್ರೆಯವರವು. ಪ್ರೇಯಸಿ ಎಂದರೆ ಪ್ರಿಯೆಯೂ ಹೌದು. ಅವರು ಪ್ರಿಯೆಯನ್ನು ಕುರಿತು ರಚಿಸಿರುವ ಕವನಗಳು- ಪ್ರೇಮಾನುಭವವನ್ನುಂಟು ಮಾಡುತ್ತ ಆಹ್ಲಾದದಾಯಕವಾಗಿವೆ. ಅವು ಎಲ್ಲ ವಯೋಮಾನದ ಗಂಡು-ಹೆಣ್ಣುಗಳು ಒಲವಿನ ಸವಿ ಅನುಭವಿಸುವಂತೆ ಮಾಡುವ ಪ್ರೇಮಲಹರಿಗಳಾಗಿವೆ. ಬೇಂದ್ರೆಯವರು ರಚನೆಕಾರರಾದರೂ ಅವರು ಜಗದೆಲ್ಲ ರಸಿಕರಲ್ಲಿ ಒಬ್ಬರಾಗಿ ಆ ಪ್ರೇಯಸಿಯನ್ನು ನಿರ್ಮಲಾಂತಃಕರಣದಿಂದ ಆರಾಧಿಸುವ ಕಾರಣ-ಅದು ದೇಶಕಾಲಾತೀತವಾದ ಸಾರ್ವಕಾಲಿಕ ಹಾಡಾಗಿ ಮಧುರ ಭಾವವನ್ನು ಹರಡುವ ಗುಣ ಹೊಂದಿದೆ.

ಬೇಂದ್ರೆಯವರು 'ಗೆ' ಎಂಬ ಶೀರ್ಷಿಕೆಯಡಿಯಲ್ಲಿಯೇ ಹತ್ತು ಕವನಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು ಪ್ರೇಮಗೀತೆಗಳಾಗಿದ್ದರೆ, ಇನ್ನು ಕೆಲವು ಸೌಂದರ್ಯಾನುಭೂತಿಯ ಅನುಭಾವಗೀತಗಳಾಗಿವೆ. ಅವರ ಯೌವನ ಕಾಲದಲ್ಲಿ (೧೯೧೮)

ಬರೆದ –'ಗೆ' ಕವನ– ಪ್ರಕೃತಿ ಸಹಜ ಆಕರ್ಷಣೆಗೆ ಒಳಗಾದ ಪುರುಷ ಸುಂದರಹೆಣ್ಣಿಗೆ ಆಶಿಸಿರುವ ಚಿತ್ರಣವಿದೆ. ಆ ಆಸೆ ಈ ನೆಲದ ಮಣ್ಣಿನ ಸಹಜ ಗುಣ. ಆದರೆ ಅವನು ಮಾನವನಾಗಿ ಸಂಸ್ಕಾರಗೊಳ್ಳಬೇಕಾಗಿದೆ. ಸಂಸ್ಕೃತಿಯ ಪೋಷಕಭಾವದಲ್ಲಿ ಚಿಂತಿಸುವ ನೆಲೆಗೆ ಏರಬೇಕಾಗಿದೆ. ಕಾಮ ಮತ್ತು ಪ್ರೇಮದ ದ್ವಂದ್ವ ಮನವು ಆಂತರ್ಯದ ಒಳದನಿಗೆ ಒಳಗಾಗಬೇಕಾಗಿದೆ ಎಂಬುದನ್ನು ಈ ಕವನ ಸಾರುತ್ತಿದೆ. ಇದೊಂದು ನಾಟ್ಯಗೀತ.

ಆಕೃತಿಯನಡಗಿಸಿಹ ಆಕಾರವೇ! ಏಕೆ ಮಿಸುಗುಡದ ಲಿಂತು ನಿಂತೆ?
ಪ್ರಾಕೃತಗೆ ತಿಳಿಯದೀ ಮಾತು! ನಾಗರ ರಮಣಿ ಕಣ್ಸನ್ನೆ ಗೈಯುವಂತೆ.
(–ಗೆ : ನಾದಲೀಲೆ)

ಸೌಂದರ್ಯಾನುಭೂತಿಯ ಅಂತರಂಗದ ಅನುಭೂತಿಯಾಗಿ ಈ– 'ಗೆ' ಕವನವಿದೆ :

'ಹಾಳು ಮಾತುಗಳೇಕೆ? ಬೇರೆ ಲಕ್ಷಣ ಬೇಕೆ?
ನೀನೊಕ್ಕಲಾಗಿ ನಿಂತೆ.
ಬೀಳುಬಿದ್ದಿಹ ಹೊಲವ ಸಾಗು ಮಾಡೆನ್ನೊಡತಿ
ನನ್ನ ಒಕ್ಕಲಿಗನಂತೆ.'

(ಗೆ : ಸಂಚಯ)

ಬೇಂದ್ರೆಯವರು ಗಂಡು ಹೆಣ್ಣಿನ ಸಹಜ ಆಕರ್ಷಣೆಯನ್ನು 'ವಾರಿನೋಟ' ಕವನದಲ್ಲಿ ವಿಜೃಂಭಿಸಿರುವ ರೀತಿ ಅನನ್ಯವಾಗಿದೆ. ಯೌವನದ ಹೆಣ್ಣು ತನ್ನೆಲ್ಲ ಬೆಡಗು ಬಿನ್ನಾಣದಿಂದ ಹೋಗುವಾಗ ನೆಲದ ಮೇಲೆ ನಡೆದಂತಿರುವುದಿಲ್ಲ, ಅದೂ ಹೊಳೆಯ ದಂಡೆಯ ಮೇಲೆ ನಡೆವಾಗ ಹಾರಿದಂತಿರುತ್ತದೆ. ಅವಳಿಗೆ ಗಂಡಿನ ಬಗ್ಗೆ ಸಹಜ ಆಸಕ್ತಿಯಿದ್ದು ಅದು ಅವಳ 'ವಾರಿನೋಟ'ವಾಗಿರುತ್ತದೆ. ಹೆಣ್ಣಿನಿಂದ ಸೆಳೆಯಲ್ಪಟ್ಟ ಗಂಡು

ಏನೇ ಎಡರು ತೊಡರಿದ್ದರೂ ಅದನ್ನು ಈಸಿ ಜೈಸಿ ಪಡೆಯುವೆನೆಂಬ ಸಾಹಸ ಮನದವನಾಗಿರುತ್ತಾನೆ. ಈ ಈರ್ವರ ಮಧ್ಯೆ ಹೊಳೆಯಿದೆ. ಅದು ಪ್ರಕೃತಿ ಸಹಜ ಸೃಷ್ಟಿಯಾದ ಚಲನಶೀಲತೆಯ ಜೀವನ (ನೀರು)ದ ಪ್ರತೀಕವಾಗಿದೆ. ಅದು ಒಬ್ಬರಿನೊಬ್ಬರನ್ನು ಸೇರುವ, ಬೆರೆಯುವ ಕಾತರದ ಸಂಕೇತವೂ ಆಗಿದೆ. ಹೀಗೆ ಇಲ್ಲಿ ಹೊಳೆಯ ಮೇಲೆ ಮತ್ತು ಹೊಳೆಯಲ್ಲಿರುವ ಪ್ರೇಮಾಕಾಂಕ್ಷಿ ಹೆಣ್ಣು-ಗಂಡಿನ ಸೆಳೆತ ಮಿಡಿತವು ಕಾವ್ಯವಾಗಿದೆ.

ವಾರಿನೋಟ ಹಾರತಿತ್ತೋ ಹೊಳಿಮ್ಯಾಗ
ಹೊಸಾ ಹರೆ ಈಸತಿತ್ತೋ ಹೊಳಿಯಾಗ

* * *

ಸೂಜಿಗಲ್ಲು ತಿರುಗತಿತ್ತೋ ಹೊಳಿಮ್ಯಾಗ
ಸೂಜಿಯೊಂದು ತೇಲತಿತ್ತೋ ಹೊಳಿಯಾಗ

(ವಾರಿನೋಟ : ಮೂರ್ತಿ ಮತ್ತು ಕಾಮಕಸ್ತೂರಿ)

ಬೇಂದ್ರೆಯವರು ಬಡತನ ಸಿರಿತನವನ್ನು ಮೀರಿದ ಒಲವು ಹೆಣ್ಣು-ಗಂಡಿನ ದೇಹದಲ್ಲಿ ಮೂಡಬೇಕು. ಅದಿಲ್ಲದಿದ್ದರೆ ಒಲವಿನ ದೀಪ ಬೆಳಗುವುದಿಲ್ಲ ಎಂದಿದ್ದಾರೆ.

'ದೇಹದಾಗs ಸ್ನೇಹ ಇರದಿದ್ದರs
ಮನದ ಮನಿಯೊಳಗ ದೀಪ ಎಲ್ಲೀದು?'

(ಕವಿಗಳ ಕಾಣಿಕೆ : ಶ್ರೀಮಾತಾ)

* * *

'ರಾಗರತಿ' ಕವನವು- ಪ್ರಕೃತಿಯನ್ನು, ಗಂಡು ಹೆಣ್ಣನ್ನು, ಕವಿಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡು; ಸಹೃದಯನ ಹೃದಯಕ್ಕೂ ಲಗ್ಗೆ ಇಡುವಷ್ಟು ಭಾವತೀವ್ರತೆಯನ್ನು ಹೊಂದಿದೆ.

ಕವಿಯು ನೇರವಾಗಿ 'ರಾಗರತಿ'ಯನ್ನು ಬಣ್ಣಿಸುವುದರಲ್ಲಿಯೇ ಅದರ ತೀವ್ರ ಭಾವಾಭಿವ್ಯಕ್ತಿ ಕಾಣುತ್ತದೆ. ಕವಿ 'ಮುಗಿಲ ಮಾರಿಗೆ ರಾಗರತಿಯ ನಂಜ ಏರಿತ್ತ' ಎಂದು ಪ್ರಾರಂಭಿಸುವಾಗಲೇ ಓದುಗನನ್ನು ತನ್ನತ್ತ ಸೆಳೆದುಕೊಂಡು ಆಕರ್ಷಣೆಯನ್ನು ಅವನಲ್ಲುಂಟು ಮಾಡುವುದು ಈ ಕವನದ ಶ್ರೇಷ್ಟಗುಣವಾಗಿದೆ. ಪ್ರಕೃತಿಯಲ್ಲಿ 'ಇರುಳು ಮಬ್ಬಿನ್ಯಾಗ ಹಗಲಿನ ಬೆಳಕು ಕರಗು'ತ್ತಿದ್ದಂತೆ ಆಗಸದಲ್ಲಿ 'ಬಿದಿಗಿ ಚಂದ್ರ'ನು 'ಬೆಳ್ಳಿನ' ಕೂಡಿದ ಚಿತ್ರವಿದೆ.

ಮುಗಿಲ ನಂತರದ ಚಿತ್ರಣ ನೆಲದ ರಾಗರತಿಯದಾಗಿದ್ದು, 'ಬೊಗಸಿಗಣ್ಣಿನಾ ಬಯಕೆಯ ಹೆಣ್ಣು ನೀರಿಗೆ ಹೋಗಿತ್ತs। ತಿರುಗಿ ಮನೀಗೆ ಸಾಗಿತ್ತ' ಎಂದಿದೆ. ಅಲ್ಲಿ ಕಾಮಿಬೆಕ್ಕಿನ ರೀತಿ ಅವಳನ್ನು ಹಿಂಬಾಲಿಸುವ ಬಯಕೆಯ ಗಂಡಿನ ಚಿತ್ರವಿದೆ. ಅವನ ರಾಗ ಭಾವವು ಹೆಚ್ಚುವಂತೆ ಪ್ರಕೃತಿಯು ಹೆಣ್ಣನ್ನು ಆಡಿಸುವ ಚಿತ್ರ ಅತಿಸಹಜವಾಗಿ ಮೂಡಿಬಂದು ಕಚಗುಳಿಯ ಭಾವವನ್ನುಂಟು ಮಾಡುತ್ತದೆ.

> **'ಮಳ್ಳಗಾಳಿ–ಸುಳಿ ಕಳ್ಳ ಕೈಲೆ ಸೆರಗನು ಹಿಡಿದಿತ್ತs**
> **ಮತಮತ ಬೆರಗಿಲೆ ಬಿಡತಿತ್ತ'** (ರಾಗರತಿ : ಗರಿ)

* * *

ಚಂದ್ರ ಸೂರ್ಯರಲ್ಲಿರುವ ಆಕರ್ಷಣೆಯನ್ನು ಆಧರಿಸಿ ಅದನ್ನು ಹೆಣ್ಣುಗಂಡಿನ ಪ್ರೀತಿಯಾಗಿಸಿ ಒಂದು ನಿರಂತರ ರೂಪಕವಾಗಿ ಬೇಂದ್ರೆ ಬಣ್ಣಿಸಿದ್ದಾರೆ. ಇದೊಂದು ನವೀನ ಕಲ್ಪನೆಯಾಗಿ ಅವರ ಉಜ್ವಲ ಪ್ರತಿಭೆಗೆ ಸಾಕ್ಷಿಯಾಗಿದೆ. ಅವರು ಅದನ್ನು 'ಅನಂತಪ್ರಣಯ' ಎಂದು ಕರೆದಿದ್ದಾರೆ. ಕಾವ್ಯದ ಹೆಸರೇ ವಾಚ್ಯಾರ್ಥವನ್ನು ಹೊಂದಿ ಅದರ ಅನಂತತೆಯನ್ನು ಸಾರುತ್ತದೆ.

ಕವಿಯ ಕಲ್ಪನೆಯಲ್ಲಿ ಚಂದ್ರ ಪ್ರಿಯೆಯಾಗಿ ಸೂರ್ಯ ಪ್ರಿಯಕರನಾಗಿದ್ದಾನೆ. ನಿಸರ್ಗ ಸಹಜ ಗತಿಯಲ್ಲಿ ಬೀಸುವ ಗಾಳಿ ಅವರಲ್ಲಿ ಪ್ರೀತಿಯ ಪ್ರವಾಹ ಹರಿಸಲು ಕಾರಣವಾಗಿದೆ. ಸೂರ್ಯ ಚಂದ್ರರ ಮಧ್ಯೆಯಿರುವ ಭೂಮಿಯನ್ನು ಕವಿಯು ಪ್ರಿಯರ ಭೇಟಿಯ ಸಂಕೇತ ಸ್ಥಾನ ಅಭಿಸಾರವಾಗಿದ್ದಾರೆ. ಪ್ರಣಯಿಗಳು ಒಟ್ಟುಗೂಡಲು ನಿಶ್ಚಯಿಸುವ ಸ್ಥಳ–ಅಭಿಸಾರ ಸುಂದರ ಕಲ್ಪನೆ! ಇಲ್ಲಿ ಅರಳಿದ ಕಾವ್ಯ ಪ್ರೇಮಿಗಳ ಹೃದಯವನ್ನು ತಲ್ಲಣಗೊಳಿಸುವ ಚುಂಬಕ ಶಕ್ತಿಯನ್ನು ಹೊಂದಿದೆ.

ಉತ್ತರಧ್ರುವದಿಂ ದಕ್ಷಿಣಧ್ರುವಕೂ
ಚುಂಬಕ ಗಾಳಿಯು ಬೀಸುತಿದೆ.
ಸೂರ್ಯನ ಬಿಂಬಕೆ ಚಂದ್ರನ ಬಿಂಬವು
ರಂಬಿಸಿ ನಗೆಯಲಿ ಮೀಸುತಿದೆ. **(ಅನಂತ ಪ್ರಣಯ : ನಾದಲೀಲೆ)**

ಪ್ರಕೃತಿ ಸಹಜವಾಗಿ ಉತ್ತರ ಧ್ರುವದಿಂದ ದಕ್ಷಿಣಧ್ರುವಕ್ಕೆ ಮುದ್ದಿಡುವ ಲೋಹ ಚುಂಬಕದ ಗಾಳಿ ಬೀಸುತ್ತಿದೆ. ಅದರ ಬೀಸಿಗೆ ಅದರೊಡನೆ ಬರುವ ಸೂರ್ಯಮಂಡಲದ ಪ್ರಕಾಶದಲ್ಲಿ ಚಂದ್ರನ ಪ್ರತಿರೂಪ ಹೊಳೆದು ಅದನ್ನು ಪಡೆಯುವ ಆಸೆಯಿಂದ 'ನಗೆಯಲಿ ಮೀಸುತಿದೆ.' ಇದು ಹೆಣ್ಣಾದ ಚಂದ್ರ ಸೂರ್ಯನಿಗೆ ಆಕರ್ಷಿತವಾದ ಮೈ ಪುಲಕಗೊಂಡು ಅವನನ್ನು ಕೂಡಬೇಕೆಂಬ ಅಭಿಲಾಷೆಯನ್ನು ಹೊಂದಿರುವುದಾಗಿದೆ.

* * *

'ನಗೀನವಿಲು' ಕವನ 'ಜೀವನದೊಳಗಿನ ಜೀವಂತ ವಿರಹದ ಒಂದು ಪ್ರೇಮಗೀತ. ವಿರಹಿ ಕೋಕಿಲ; ಉಲ್ಲಾಸಿ ನವಿಲು' ಎಂಬ ಭಾವ ಸಂದರ್ಭವನ್ನು ಹೊಂದಿದೆ. ವಿರಹ ಕೆಲವು ಕಾಲ ಉಳಿದು,

ಮತ್ತೆ ಪ್ರೇಮ ಪಲ್ಲವಿಸಿದಾಗ ಆ ವಿರಹಕ್ಕೆ ಅರ್ಥವಿದೆ. ಆದರೆ ವಿರಹ ಜೀವಂತ ವಿರಹವಾದಾಗ ಅಂತಹ ವಿರಹವನ್ನು ಜನಪ್ರಿಯ ಪ್ರೇಮಗೀತೆಯಾಗುವಂತೆ ರಚಿಸುವುದು ಸಮರ್ಥ ಕವಿಗೆ ಮಾತ್ರ ಸಾಧ್ಯ. ಅಂತಹ ಅಪರೂಪದ ಕವನ ಇದಾಗಿದೆ. ಬೇಂದ್ರೆಯವರು ಅವಳ ದೇಹವನ್ನು ಉಲ್ಲಾಸದ ಕುಣಿತದ ನಗೆಯ ಸಂಕೇತವಾದ ನವಿಲಿಗೆ ಹೋಲಿಸಿರುವುದರಿಂದ ಮತ್ತು ಅದು :

'ಮಿನ ಮಿನ ಮಿನ ಮಿಂಚತಿತ್ತ
ಮೂಡತಿತ್ತ ಮುಳಗತಿತ್ತ
ಮುಳಗತಿತ್ತ ತೊಳಗತಿತ್ತ
ನೆಲಾ ಜಲಾ ಬೆಳಗತಿತ್ತ.' **(ನಗೀನವಿಲು : ಗರಿ)**

ಎಂದು ಮಿನುಗುಟ್ಟಿ ಪ್ರಕಾಶಮಾನವಾಗಿರುವುದರಿಂದ ಈ ವಿರಹ ಪ್ರೇಮ ಅಂಕುರಿಸಿದ ನಂತರದ ಪ್ರಾರಂಭದ ವಿರಹಾವಸ್ಥೆ ಎಂದು ಹೇಳಬಹುದು. ಅವಳ ತುಂಬು ಶರೀರವನ್ನು ಹೀಗೆ ನವಿಲಿನಂತೆ ಬಣ್ಣಿಸಿ ಅವಳ ಮನಸ್ಸನ್ನು ಮೌನದ ಸಂಕೇತವಾದ ಕೋಗಿಲೆಯಾಗಿಸಿದ್ದಾರೆ. ಹೀಗೆ ಮೌನದ ಸಂಕೇತವಾಗಿ ಕೋಗಿಲೆಯನ್ನು ಬಣ್ಣಿಸಿ ಹಾಡಿ ತನ್ನ ಮಧುರ ಕಂಠದಿಂದ ಪ್ರೇಮರಸ ಹರ್ಷ ಹರಿಸುವ ಕೋಗಿಲೆಯನ್ನು – ಮೌನವಾಗಿರಿಸಿರುವಲ್ಲಿಯೇ ಅವಳ ಎಲ್ಲ ವಿರಹ ಭಾವವನ್ನು ಕಾವ್ಯಕಲೆಯಲ್ಲಿ ಸಮರ್ಥವಾಗಿ ಧ್ವನಿಸಿದಂತಾಗಿದೆ.

ಬೇಂದ್ರೆಯವರು ಹೀಗೆ ಅವಳ ಯೌವನ, ಶರೀರ ಮತ್ತು ಮುದುಡಿದ ಮನಸ್ಸನ್ನು ನವಿಲು ಮತ್ತು ಕೋಕಿಲವಾಗಿಸಿ ಇಡೀ ಕವನವನ್ನು ಒಂದು ರೂಪಕ ಕಾವ್ಯವಾಗಿಸಿದ್ದಾರೆ.

* * *

'ಜನುಮದ ಜಾತ್ರಿ' ಎಂಬ ಜನಪದ ನುಡಿಯೆ ಕುತೂಹಲಕಾರಿಯಾಗಿದ್ದು, ನಲ್ಲನಲ್ಲೆಯರ ಬದುಕು ಸಂತಸ ಸಂಭ್ರಮದಿಂದ ಕೂಡಿರುವುದನ್ನು ಸಂಕೇತಿಸುತ್ತದೆ. ನಲ್ಲೆಯು ತನ್ನ ನಲ್ಲನ ಒಲುಮೆಯ ಕಣ್ಣಿನ ಸೂತ್ರಕ್ಕೆ ಕಣ್ಣಿಯುವ ಗೊಂಬೆ ತಾನು ಎಂದು ಹೇಳಿಕೊಂಡಿರುವುದರಲ್ಲಿ ಅವಳು ಪ್ರೀತಿಯ ಸೂತ್ರದಲ್ಲಿ ಬಂಧಿತಳಾಗಿ ಸುಖಿಯಾಗಿರುವುದು ಕಂಡು ಬರುತ್ತದೆ. ಆದಕಾರಣ ಅವಳಿಗೆ 'ದಿನದಿನ ಜಾತ್ರಿಯೆನಿಸಿತ್ತ ಜನುಮವು' ಆಗಿದೆ. ಗೆಳತಿಗೆ ಜಾತ್ರೆಯ ವೈಭವದಂತೆ ತನ್ನ ನಲ್ಲನನ್ನು ಬಣ್ಣಿಸಿ ಹೇಳುವ ರೀತಿ ಅವಳ ಒಲವಿನ ಪ್ರದರ್ಶನವಾಗಿದೆ. ಅವಳಿಗೆ ನಲ್ಲನ ಜೊತೆಯ ಬದುಕು ಸಫಲತೆಯನ್ನು ತಂದಿದೆ. ಆದಕಾರಣ ನುಡಿಯುತ್ತಾಳೆ :

'ಹುಬ್ಬು ಹಾರಿಸಿದಾಗ ಹಬ್ಬ ಎನಿಸಿತು ನನಗ
'ಅಬ್ಬ' ಎನಬೇಡಃ ನನ ಗೆಣತಿ ಸಾವಿರಕ
ಒಬ್ಬ ನೋಡವ್ವ ನನ ನಲ್ಲ'

(ಜನುಮದ ಜಾತ್ರಿ : ಮೂರ್ತಿ ಮತ್ತು ಕಾಮಕಸ್ತೂರಿ)

* * *

ಬೇಂದ್ರೆಯವರ ಬಡತನದ ನೋವು ಮತ್ತು ದಾಂಪತ್ಯದ ಎದೆಯಾಳದ ಪ್ರೀತಿ 'ನಾನು ಬಡವಿ ಆತ ಬಡವ' ಕವನದಲ್ಲಿ ಅಮರತ್ವವನ್ನು ಪಡೆದಿದೆ. ಇದು ಪತ್ನಿಯ ಮನದ ಭಾವಲಹರಿಯನ್ನು ಸೂಚಿಸುವ ಕವನವಾಗಿ ರಸಿಕರ ಮನಸ್ಸನ್ನು ಆರ್ದ್ರಗೊಳಿಸುವ ಮಧುರಭಾವದಿಂದ ಕೂಡಿದೆ. ಇಲ್ಲಿ ಪ್ರೀತಿಯ ಸಿರಿತನ ತನ್ನೆಲ್ಲ ಭಾವ ವೈಭವದೊಡನೆ ಮೆರೆದು ಸಹೃದಯ ಹೃದಯಕ್ಕೆ ಲಗ್ಗೆಯಿಟ್ಟು ಅಲ್ಲಿ ಗೂಡುಕಟ್ಟುವ

ಸತ್ತ್ವವನ್ನು ಹೊಂದಿದೆ. ಬೇಂದ್ರೆಯವರು ಬಡವರ ಹಾಡನ್ನು ಹಾಡುತ್ತ ಅವರ ಸರಳ ಸಹಜ ಆಡುನುಡಿಯನ್ನು ಬಳಸಿ ಅದು ಜನರ ಮನಸ್ಸನ್ನು ಹೊಗುವಂತೆ ಮಾಡಿರುವುದು ವೈಶಿಷ್ಟ್ಯಪೂರ್ಣವಾಗಿದೆ.

'ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು.
ಬಳಸಿಕೊಂಡೆವದನೆ ನಾವು
ಅದಕು ಇದಕು ಎದಕು.' **(ನಾನು ಬಡವಿ : ನಾದಲೀಲೆ)**

ಈ ನಾಡಿನ ಬಡವರು ಆರ್ಥಿಕ ಸಿರಿತನದಿಂದ ವಂಚಿತರಾದರೂ, ಮಾನಮರ್ಯಾದೆಗಳಿಗೆ ಅಂಜಿ ನ್ಯಾಯ, ಧರ್ಮ, ನೀತಿಯಿಂದ ಬದುಕುವ ಜನರಾಗಿದ್ದಾರೆ. ಅವರೆಲ್ಲರ ಧ್ವನಿಯಂತೆ ಈ ಹಾಡಿದೆ. ಇಲ್ಲಿ ಬಡವಿಯು ತನ್ನ ಅಂತರ್ಯದ ಸವಿಯನ್ನು ಹಾಡಾಗಿ ಹಾಡಿದ್ದಾಳೆ. ಅವಳು ಹೇಳುವ ದಾಂಪತ್ಯದ ಸಿರಿತನ ದಂಪತಿಗಳಿಗೆ ತುಂಬಾ ಪ್ರಮುಖವಾದುದು. ತಾತ್ವಿಕವಾಗಿ ಚಿಂತನೆ ನಡೆಸಿದರೂ ಹಣ ಒಡವೆ ದಾಂಪತ್ಯದ ಬಾಂಧವ್ಯವನ್ನು ಬಿಗಿಗೊಳಿಸದೆ ಪ್ರೀತಿಯೊಂದು ಬಂಧನದ ತಂತುವಾಗಿರುವುದು ಸತ್ಯ ಸಂಗತಿಯಾಗಿದ್ದು, ಅದು ಇಲ್ಲಿ ಕಾವ್ಯವಾಗಿದೆ. ಈ ಕಾವ್ಯದ ಬಡವಿ ಜಗದೆಲ್ಲ ಜನರ ಬದುಕಿನ ಅರ್ಥವನ್ನು 'ಒಲವೆ ನಮ್ಮ ಬದುಕು' ಎಂದು ಹಾಡಿದ್ದಾಳೆ.

* * *

೧೯೩೫ರಲ್ಲಿ ಬೇಂದ್ರೆಯವರು ರಚಿಸಿದ 'ಹುಬ್ಬಳ್ಳಿಯಾಂವಾ' ಕವನ ಇಂದಿಗೂ ನಾಡಿನ ಯುವಕ ಯುವತಿಯರನ್ನು, ಹಿರಿಯರನ್ನು, ಆಲೋಚನಾಪರರನ್ನಾಗಿಸುತ್ತಿದೆ. ಅದು ಓರ್ವ

ಜೋಗಿತಿ ತನ್ನನ್ನು ಪ್ರೀತಿಸಿದ ಗಂಡನ್ನು ನೆನೆಸಿಕೊಂಡ ಪರಿ. ಅದು ಕವಿಯ ಭಾವ ಗ್ರಹಿಸಿ ವ್ಯಕ್ತಪಡಿಸಿದ ಹೆಣ್ಣಿನ ಅಮೂಲ್ಯ ಪ್ರೀತಿ.

ಲಿಂಗ ಭಿನ್ನತೆಯಲ್ಲಿ ಸ್ತ್ರೀ ಜೀವಿ ಆಶಿಸುವ ಸಹಜ ಒಲವು ಅವಳ ಆಂತರ್ಯದ ಹಸಿವು. ಅದು ಇನ್ನೊಬ್ಬರಿಂದ ವ್ಯಕ್ತವಾಗುವ ಮರುಕ ಮಮಕಾರವನ್ನು ಮೀರಿದ್ದು. ಶೋಷಣಾರಹಿತವಾದ, ಬಂಧನಕ್ಕೆ ಒಳಗಾಗದ–ತನ್ನದೇಹ ಮತ್ತು ಮನಸು ಆಶಿಸುವ ಪ್ರೀತಿ. ಅದನ್ನು ಪಡೆದ ಗಂಡಿನ ಭಾಗ್ಯ ಈ ನೆಲದ ಸುಖ.

ಮಾನವ ಚಾರಿತ್ರ್ಯದಲ್ಲಿ! ಎಷ್ಟೊ ಪ್ರಳಯವಾಗಿವೆ.
ಸ್ತ್ರೀಯ ಪ್ರೇಮ, ಪುರುಷ ಭಾಗ್ಯ! ಕಾದು ಕಾದು ಮಾಗಿವೆ.

(ಗಂಗಾವತರಣ)

'ಹುಬ್ಬಳ್ಳಿಯಾಂವ' ಕವನದ ಜೋಗತಿ ಯಲ್ಲಮ್ಮನ ಸೇವೆಗೆ ಮುಡಿಪಾದವಳು. ರಸಿಕನಾದ ಶೆಟ್ಟರ ಹುಡುಗನು ಅಂತಹವಳಲ್ಲಿ ಯಾವುದೋ ವಿಶಿಷ್ಟ ಲಕ್ಷಣವನ್ನು ಕಂಡು ಅನುರಕ್ತನಾಗಿದ್ದಾನೆ. ಅವರು ಸವಿಯುವ ಚಹಾ ಮತ್ತು ಚೂಡಾದ, ಕಣ್ಣಿನ ಗೊಂಬಿಯಾಗಿ ಒಂದಾದ ಎರಡು ಉಪಮಾನಗಳು ಒಂದಕ್ಕೊಂದು ಪೂರಕವಾದ ಕಾವ್ಯ ಲಾವಣ್ಯ. ಅದು ಕಾವ್ಯದ ನಾಯಕ–ನಾಯಕಿಯರಿಗಷ್ಟೆ ಅಲ್ಲ, ಸಹೃದಯರ ಎದೆಗೂ ಸರಿಯುವ ಒಲ್ಮೆ.

'ಚಾಹಾದ ಜೋಡಿ ಚೂಡಾಧಾಂಗ ನೀ ನನಗಂದಾಂವಾ
ಚೌಡಿಯಲ್ಲ ನೀ ಚೂಡಾಮಣಿಯಂತ ರಮಿಸಽಸ ಬಂದಾವಾ
ಬೆರಳಿಗುಂಗುರಾ ಮೂಗಿನಾಗ ಮುಗಬಟ್ಟಿಟ್ಟಾಂವಾ
ಕಣ್ಣಿನಾಗಿನ ಗೊಂಬೀ ಹಾಂಗ ಎದ್ಯಾಗ ನಟ್ಟಾಂವಾ.'

(ಸಖೀಗೀತ)

ಸಾಮಾಜಿಕ, ಆರ್ಥಿಕ, ಮಾನಸಿಕ ಹಿಂಸೆಯ ಭಾಗವಾಗಿ ಆಂತರಿಕ ಕ್ಷೋಭೆಗೆ ಒಳಗಾದ ಆಕೆ ತನ್ನ ಪರಿಸ್ಥಿತಿಗೆ ಹೇಸಿದ್ದರೂ ಅದನ್ನು ಪಕ್ಕಕ್ಕೆ ಸರಿಸಿದ್ದಾಳೆ. ಅದು ಅವಳ ಯುಕ್ತ ಆರೋಗ್ಯ ಲಕ್ಷಣ. ಹೊರ ಜಗತ್ತಿಗೆ ಅದು ಅತಿಯಾದ ವರ್ತನೆಯೆನಿಸಿದರೂ ಅದು ಅವಳ ಸ್ವಾಸ್ಥ್ಯ ಮನದಾಶೆಯ ಪ್ರಕಟರೂಪ. ಒತ್ತಡದ ಬಿರಿಭಾರದಿಂದ ಬಿಡುಗಡೆಗೊಂಡು, ಜಿಗಿದುಹಾರಿ, ಹಕ್ಕಿಯ ರೀತಿ ಮುಕ್ತವಾಗಿ ಆಗಸದಲ್ಲಿ ರೆಕ್ಕೆಯಾಡಿಸಿ ತೇಲುವ ಅದ್ಭುತ ಮಾನಸಿಕ ಲಹರಿ.

ವ್ಯವಹಾರ ಜಗತ್ತಿನ ಅಪೇಕ್ಷೆಗಳನ್ನು ಮೀರಿ ನಿಲ್ಲಬಲ್ಲ ಮನೋಸ್ಥೈರ್ಯದವಳು ಈ ಕವನದ ನಾಯಕಿ. ಆಕೆ ತನ್ನ ಕಿರಣದಲ್ಲಿ ಹಗಲನ್ನು ಕಾಣುವ ದೃಢ ಚಿತ್ತದವಳು. ಅವಳ ಹೆಣ್ತನ ಜೋಗಿತಿಯಾಗಿ ದೇವರ ಪ್ರತಿನಿಧಿಯಾಗಿ ಬಾಳಬಹುದು. ಸಂಸಾರಿ ಹೆಣ್ಣು ವೇಶ್ಯೆಯ ಮನಸ್ಥಿತಿ ಹೊಂದಿರಬಹುದಾದರೆ, ಜೋಗಿತಿ ಪ್ರೀತಿಯ ವೀಳ್ಯೆ ಮಡಿಚಿಕೊಟ್ಟು ಹುಡುಗನಲ್ಲಿ ಶುದ್ಧ ಪ್ರೀತಿ ಹೊಂದಿರಬಹುದು. ಈ ಕವನದ ಆಂತರ್ಯದಲ್ಲಿ ಮಿಡಿಯುವ ತೀವ್ರ ಪ್ರೇಮಾಕಾಂಕ್ಷೆ ಒಂದು ಅವರ್ಣನೀಯ ಭಾವಲೋಕವನ್ನು ಸೃಷ್ಟಿಸುತ್ತದೆ.

ಕವಿಯ ಸೂಕ್ಷ್ಮಾವಲೋಕನದ ಹಲವು ಆಯಾಮಗಳ ಚಿಂತನೆಯನ್ನು ತನ್ನಲ್ಲಿ ಅಡಗಿಸಿಕೊಂಡಿರುವ ವಿಶಿಷ್ಟ ಕವನ ಇದಾಗಿದೆ. ಕನ್ನಡ ಕಾವ್ಯ ಪ್ರಪಂಚದ ಈ ಅಮರ ನಾಯಕಿಯಲ್ಲಿ ಅಹಂ ಇಲ್ಲ. ಅನಂದಭಾವದ ಕೊಡುಕೊಳ್ಳುವ ಮಧುರ ಲಹರಿಯ ನೆನಪು, ಹಸಿರಾಗಿ ಕಾಡುವ ಉಲ್ಲಾಸ ಮಾತ್ರ ಇಲ್ಲಿದೆ. ಹೆಣ್ಣು ಗಂಡನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಅವಳಲ್ಲಿಯ ಅನೇಕ ಮಾನಸಿಕ ಪ್ರತಿಮೆಗಳು ಒಂದನ್ನೊಂದು ವಿರೋಧಿಸುತ್ತವೆ,

ಸಹಕರಿಸುತ್ತವೆ. ಆ ಸಂಘರ್ಷದಿಂದ ಹೊರಬಂದ ಹೆಣ್ಣು ಒಂದು ಗಂಡಿನ ಜೊತೆಗೂಡಿ ಹೊಸತನ್ನು ಸೃಷ್ಟಿಸಿ ಸೃಜನಶೀಲ ಪ್ರತೀಕವಾಗಿ ಹೋಗುತ್ತಾಳೆ. ಅಂತಹ ಹೆಣ್ಣಿನ ಸೃಷ್ಟಿಯನ್ನು ಬೇಂದ್ರೆ ಈ ಕವನದಲ್ಲಿ ನೀಡಿದ್ದಾರೆ.

ಯಾವುದೋ ಸಾಮಾಜಿಕ ಬಂಧದಿಂದ ಜೋಗಿತಿಯಾಗಿರಬಹುದಾದ ಆಕೆ ಅದನ್ನು ಮೀರಿದ ತನ್ನ ಅಂತಃಶಕ್ತಿಯಿಂದ ಒಲ್ಮೆಯ ಆರಾಧಕಳಾಗಿ ಮೀರಾಳ ಭಾವಲಹರಿಗೆ ಏರಿದ್ದಾಳೆ. ಅವಳ ಭಾವಾಭಿವ್ಯಕ್ತಿಯಲ್ಲಿ ಮಾನವೀಯತೆಯ ಪ್ರವಾಹವೇ ಧುಮ್ಮಿಕ್ಕಿದೆ. ಅದೊಂದು ಇಂದ್ರಿಯಂಗಳ ಹಂಗಿಲ್ಲದ ಭಾವಾನುಭಾವ. ಹಾಗಾಗಿ ಈ ಕವನ ಕನ್ನಡ ಭಾವಗೀತ ಪ್ರಕಾರದಲ್ಲಿಯೇ Master Piece ಆಗಿದೆ.

ಬೇಂದ್ರೆಯವರು 'ಪೋರಿಪೋರ' 'ಜೀವದ ಗೆಳತಿ' 'ಕಾಮಕಸ್ತೂರಿ' 'ನನ್ನವಳು' 'ಒಲುಮೆಯ ಕಿಚ್ಚು' 'ಗಿಣಿಹೇಳ'! 'ಚಿತ್ರ' 'ಮುಗ್ಧೆ' 'ಹೂ-ಊಂಹೂ' 'ರಾಧೆಯಪಾಡು' ಮುಂತಾದ ಹಲವಾರು ಪ್ರೇಮಕವನಗಳನ್ನು ರಚಿಸಿದ್ದಾರೆ. ಪ್ರಿಯಕರ-ಪ್ರೇಯಸಿಯರ ಜೀವನಧ್ಯೇಯ ಒಲವಿನ ಆರಾಧನೆ. ಒಲವೆಂಬ ಚೆನ್ನಮಲ್ಲಿಕಾರ್ಜುನನ ದರ್ಶನಕ್ಕಾಗಿ ಅಕ್ಕಮಹಾದೇವಿ; ಕೃಷ್ಣನ ಸಹವಾಸಕ್ಕಾಗಿ ರಾಧೆ ಹಾಗೂ ಮೀರಾಬಾಯಿ ಸಾಧನೆ ಮಾಡಿದಂತೆ ಪ್ರಿಯಕರ-ಪ್ರೇಯಸಿ ಸಂಕಲ್ಪ ಮಾಡಬೇಕಾಗುತ್ತದೆ. ಅವರು ಜೀವದ ಗೆಳೆಯ-ಗೆಳತಿ, ಸಖ-ಸಖಿ ಆಗುವುದು ಅವಶ್ಯ. ಇದಕ್ಕೆ ಸಿರಿತನ, ಬಡತನ ಅಡ್ಡಿಯೂ ಅಲ್ಲ, ಪೂರಕವೂ ಅಲ್ಲ. ಇವುಗಳನ್ನು ಮೀರಿ ಈ ಜನ್ಮದ ಜಾತ್ರಿಯ ಮರುಳರಾಗದ ಹುರುಳು ಬಲ್ಲವರಾಗಿ ಆದರ್ಶಮಯ ಬಾಳನ್ನು ಸಾಗಿಸುವುದು ಅವಶ್ಯ ಎಂಬುದು ಬೇಂದ್ರೆ ಪ್ರೇಮಗೀತೆಗಳ ತಿರುಳಾಗಿದೆ.

ooo

೬. ಸಖೀಗೀತ

ಬೇಂದ್ರೆಯವರು ದಾಂಪತ್ಯದ ಚಾಕಟ್ಟಿನಲ್ಲಿ ಪ್ರೀತಿಯನ್ನು ಅರಸುತ್ತ ಅದನ್ನು ಪ್ರೇಮಜ್ಯೋತಿಯನ್ನಾಗಿಸಿದ್ದಾರೆ. ಅವರು 'ಅಧರ್ಮ ಕಾಮವು ಸಂಹಾರಿ, ಧರ್ಮಕಾಮವು ಆತ್ಮವಿಹಾರಿ. ಆತ್ಮವಿಹಾರಕ ಕಾಮವು ಭಕ್ತಿ ಬೀಜ' ಎಂದು ಹೇಳಿದ್ದಾರೆ. ಅವರು ಮಗುವನ್ನು 'ಅರ್ಧನಾರಿ ನಟೇಶ್ವರ' ಎಂದು, ತನ್ನನ್ನು 'ಅರೆನಾರಿಯಾದವ' ಎಂದು ಕರೆದುಕೊಂಡು ಸ್ತ್ರೀ–ಪುರುಷ ಸಮಾನತೆಯನ್ನು ಪ್ರತಿಪಾದಿಸಿದ್ದಾರೆ.

ಬೇಂದ್ರೆಯವರು ತನ್ನ ಮತ್ತು ತನ್ನ ಪತ್ನಿ ಲಕ್ಷ್ಮೀಬಾಯಿಯ ಆಂತರಿಕವಾದ ಏಕಾಂತದ ಒಲುಮೆಯನ್ನು ಲೋಕಾಂತವಾಗಿ 'ಸಖೀಗೀತ' ಕಾವ್ಯವಾಗಿ ರಚಿಸಿದ್ದಾರೆ. ಅದನ್ನು ಒಂದು ಬಿಗುವಿನಲ್ಲಿ, ಸುಸಂಸ್ಕೃತ ರೀತಿಯಲ್ಲಿ, ಆಹ್ಲಾದಮಯವಾಗುವಂತೆ ರಚಿಸಿರುವುದು ಅವರ ಪರಿಣತ ಮನಸ್ಸಿಗೆ ಸಾಕ್ಷಿಯಾಗಿದೆ. ಇದು ೯೬೦ ಸಾಲುಗಳಿರುವ ಒಂದು ಖಂಡಕಾವ್ಯ. ಇದು ಒಂದು ಇತಿಹಾಸ. ಅದು ನಡೆದ ಕಾಲ ೧೯೧೯ರಿಂದ ೧೯೩೫. ಆ ಕಾಲಾವಧಿಯಲ್ಲಿ ನಡೆದ ಘಟನೆ ನಾಲ್ಕು ಪಾದಗಳ ನಡೆಯಲ್ಲಿ ಸಾಗುತ್ತ ಇಪ್ಪತ್ತನಾಲ್ಕು ಸಾಲುಗಳಿಗೊಮ್ಮೆ 'ನನಗೂ ನಿನಗೂ ಅಂಟಿದ ನಂಟಿನ! ಕೊನೆಬಲ್ಲವರಾರು ಕಾಮಾಕ್ಷಿಯೇ!' ಎಂಬ ಅಚ್ಚರಿಯನ್ನು ವ್ಯಕ್ತಪಡಿಸುತ್ತ ತನ್ನ ಜೀವನಾನುಭವವನ್ನು ಅನುಭಾವಿಯ ರೀತಿ ಚಿತ್ರಿಸುತ್ತ ಸಾಗಿದೆ.

ಬೇಂದ್ರೆಯವರು ಹೆಣ್ಣಿನ ಮೃದುಭಾವ ಮತ್ತು ಆಕೆಗೆ ಸಮಾಜದಲ್ಲಿ ನೀಡಬೇಕಾದ ಸ್ಥಾನವನ್ನು ಅರಿತವರಾಗಿ ಸಮಾಜಕ್ಕೆ ಆ ಮುಖದ ಸತ್ಯವನ್ನು ದರ್ಶಿಸುತ್ತ ದಂಪತಿಗಳ ಪರಸ್ಪರ ಅರಿವಿನೊಡನೆ ಸಮಾಜ ವಿಕಾಸವಾಗಬೇಕೆಂದು ಕನಸು ಕಂಡರು. ಆದಕಾರಣ ತಮ್ಮ ದಾಂಪತ್ಯದ ನೋವು ನಲಿವು, ಸ್ನೇಹ ಪ್ರೇಮ, ಸೋಲುಗೆಲುವು, ಆತಂಕ ಉಲ್ಲಾಸವನ್ನು ಸಖ–ಸಖಿ ಭಾವದಿಂದ 'ಸಖೀಗೀತ' ದಲ್ಲಿ ವಿಶ್ಲೇಷಿಸಿದರು. 'ವಿಧಿತಂದವಧು' ವನ್ನು ಸ್ನೇಹಿತಳನ್ನಾಗಿಸಿಕೊಂಡು ಬಾಳುವೆ ಮಾಡಿದ ಆತ್ಮಕಥೆಯನ್ನು ಕಾವ್ಯವಾಗಿ ಚಿತ್ರಿಸಿದರು. ಅವರು ವಿವಾಹ ಸಂದರ್ಭದಲ್ಲಿ ಅಂತಃ ಪಟದಾಚೆ ನಿಂತಿರುವ ವಧುವನ್ನು ಕಾಣುವುದು – ಆ ಮಧುರ ಭಾವದ ಆಹ್ಲಾದದಿಂದ ಪ್ರಕೃತಿ ಸಹಜವಾಗಿ 'ಬೆವರಿನ ಬಾಸಿಂಗ' ಕಟ್ಟಿಕೊಂಡ, ಬೆವರಿನ ಹನಿಯೊಂದನ್ನು ಮೂಗುಬಟ್ಟಾಗಿ ಧರಿಸಿದ ಸೌಂದರ್ಯದಲ್ಲಿ.

'ಮುತ್ತಿಗು ಮಿಗಿಲಾಗಿ ಹೂವೀಗು ಹಿರಿದಾಗಿ
ಬೆವರ್ಹನಿ ಬಾಸಿಂಗ ತುಳುಕುತಿರೆ
ನತ್ತನು ನಾಚಿಸಿ ಬೆವರಿನ ಹನಿಯೊಂದು
ಮೂಗು ಬಟ್ಟಿನ ಅಂದ ಮಿನುಗುತಿರೆ.'

ಹೀಗಾಗಿ ಕವಿಯು ತನ್ನ ಪ್ರಿಯ ಸಖಿಯು ಭೌತಿಕ ಒಡವೆಗಳಿಂದ ಶೃಂಗಾರಗೊಂಡಿರುವುದಕ್ಕಿಂತ ನಿಸರ್ಗ ಸಹಜ ಸೌಂದರ್ಯದಲ್ಲಿ ಪಲ್ಲವಿಸುತ್ತಿರುವುದನ್ನು ಕಂಡು ಬಣ್ಣಿಸಿರುವುದು ಅವರ ರೂಪಕ ಶಕ್ತಿಯು ಆ ಸಖ್ಯದಲ್ಲಿ ಅತಿ ಸಹಜವಾಗಿ ಮೂಡಿದುದಕ್ಕೆ ಪುರಾವೆಯಂತಿದೆ. ಅದು ವಿಕಾಸಗೊಂಡು ಈ ಕಾವ್ಯದಲ್ಲಿ 'ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ! ಕಣ್ಣಿಗು ಕಣ್ಣಾಗಿ

ಒಳಗಿಹುದು' ಎಂಬ ತಾತ್ವಿಕ ಚಿಂತನೆಯನ್ನು ನೀಡುತ್ತದೆ. ಸಖೀಗೀತ ಸೂಕ್ಷ್ಮ ಮನಸ್ಸಿನ ಮಡದಿಯನ್ನು ತಿಳಿಯಲು ಪ್ರಯತ್ನಿಸುವ ಪ್ರಯತ್ನದಂತೆ ಅದರ ಒಡಲಿನಲ್ಲಿ ಕಾವ್ಯದೇವತೆಯ ಉಪಾಸನೆಯಲ್ಲಿ ತೊಡಗಿಕೊಂಡ ಕವಿಯ ಸೃಜನಶೀಲತೆಯನ್ನೂ ಒಳಗೊಂಡಿದೆ. ಇದು ಈ ಕಾಲಮಾನದ ಬದುಕಿನ ಕಿರಿದಾದ ಮಹಾಕಾವ್ಯವಾಗಿದೆ. ಇದರಲ್ಲಿ ಅಂದಿನ ಸಮಾಜದ ಪತಿ-ಪತ್ನಿಯರು ಬಾಳಿದ ರೀತಿಯನ್ನು ತಿಳಿಯುವುದರ ಜೊತೆಗೆ ಅಂದಿನ ಸಮಾಜದಲ್ಲಿ ಓರ್ವ ಬೌದ್ಧಿಕ ಚಿಂತನಶೀಲ ವ್ಯಕ್ತಿ ಸರಳ ಸಾಮಾನ್ಯ ಜೀವನ ನಡೆಸುತ್ತ ಬದುಕಲು ಹೆಣಗುವ, ನೈತಿಕ ಆದರ್ಶಕ್ಕಾಗಿ ತಹತಹಿಸುವ ಪರಿಯನ್ನು ಕಾಣಬಹುದಾಗಿದೆ.

ಬೇಂದ್ರೆಯವರು 'ನರಬಲಿ' ಕವನ ಬರೆದು ಬೆಳಗಾವಿಯ ಹಿಂಡಲಗ ಜೇಲಿನಲ್ಲಿ ಸೆರೆವಾಸ ಮತ್ತು ಮುಗದ ಗ್ರಾಮದಲ್ಲಿ ನಜರಬಂದಿಯಾಗಬೇಕಾಯಿತು. ಜೀವನದಲ್ಲಿ ಹಲವಾರು ಆಸೆಗಳನ್ನು ಹೊತ್ತ ಹೆಣ್ಣು ಅದನ್ನು ಕೈಗೂಡಿಸಲಾಗದ ವಿದ್ಯಾವಂತ ಆದರ್ಶ ವ್ಯಕ್ತಿಯನ್ನು ಕಂಡು ವಿರಸಗೊಂಡದ್ದು ಸಹಜವೆನಿಸುತ್ತದೆ. ದಿನನಿತ್ಯದ ಜೀವನ ಹೆಣ್ಣಿಗೆ ಮುಖ್ಯವಾಗುತ್ತದೆ. ಆದರ್ಶದ ಕವಿಯು ಜೀವನವನ್ನು ತೂಗಿಸಲಾಗದೆ ಪಡುವ ಸೋಲು ಹೆಂಡತಿ ಮಕ್ಕಳ ಮೇಲೆ ತೀವ್ರ ಪರಿಣಾಮವನ್ನುಂಟು ಮಾಡುತ್ತದೆ. ಅದು ಕವಿಗೂ ಗೊತ್ತಿದೆ. ಅವನು ಆತ್ಮಶೋಧನೆಗೆ ತೊಡಗುತ್ತಾನೆ.

'ಹರಿವ ನೀರಿನ ಮೇಲೆ ಹರಗೋಲ – ಮನೆಕಟ್ಟಿ
ಗೊತ್ತಿಲ್ಲವೆ ನಲ್ಲೆ! ಹೊರಟಿಹೆವು?
ನೆಲವೆಂದು ಸ್ಥಿರವೆಂದು ಅಸ್ತಿವಾರವ ಹಾಕಿ
ನಾಡಾಡಿ ಜನ, ಮನೆಕಟ್ಟಿಹುದು.

ಪರಿಣಾಮಕ್ಕೆಡೆಗೊಟ್ಟು ಪರಿಣತಿಗೊಳ್ಳುವ
ಸೃಷ್ಟಿಗೆ ಸರಿ ನಮ್ಮ ಬಾಳುವೆಯು
ಕುದಿ ಎಸರು ಬರದಿರೆ, ಚಳಿ ಬಿಸಿಲು ಉಣದಿರೆ
ಪರಿಪಾಕವೆಂಬುದು ಎಂತಹುದು?'

ಆದರೆ ಅವರಿಬ್ಬರಲ್ಲಿಯ ಬದುಕಿನ ಹಾಗೂ ಆದರ್ಶದ ಸಂಘರ್ಷ, ಪ್ರೇಮದ ಸಂಘರ್ಷ, ವೈಚಾರಿಕ ಸಂಘರ್ಷ ವಿರಸವನ್ನುಂಟು ಮಾಡಲು ಕಾರಣವಾಗಿದೆ. ಅದನ್ನು ಎದುರಿಸಲು ಅವರು ತೊಡಗಿ ಜೀವನದಲ್ಲಿ ಸಹನೆ, ತಾಳ್ಮೆ, ಮೌನ, ಧಾರ್ಮಿಕನಂಬಿಕೆ, ಪ್ರೀತಿಯನ್ನು ಅಳವಡಿಸಿಕೊಂಡು ಯಶಸ್ವಿಯಾದ ರೀತಿ ಅಚ್ಚರಿಯನ್ನುಂಟು ಮಾಡುತ್ತದೆ. ಆ ವಿರಸದ ದಿನಗಳಲ್ಲಿ ಅವರು ಸಮತೋಲವನ್ನು ಕಾಯ್ದುಕೊಂಡ ರೀತಿಯನ್ನು ಕವಿ ಒಂದು ಅಪರೂಪ ಉಪಮೆಯಿಂದ ಹೀಗೆ ಚಿತ್ರಿಸಿದ್ದಾರೆ :

'ತ್ರಾಸು ತಕ್ಕಡಿ–ಮುಳ್ಳು ಏಕಾಗ್ರವಿರುವಂತೆ
ಧಾರಣೆಯಲಿ ಕೆಲದಿನ ಕಳೆದೆವೆ.'

ಆ ಬಗೆಯ ನಿಷ್ಠೆ, ಒಲವು, ಧೈರ್ಯಗೆಡದ ಸಾಹಸ ಮನಸ್ಸು ವಿರಸವನ್ನು ಗೆಲ್ಲುತ್ತದೆ ಎಂದು ಹೇಳಿದ್ದಾರೆ. ಗಂಡ ಹೆಂಡತಿಯ ವಿರಸ ಮಕ್ಕಳ ಮೇಲೆ ಪ್ರಭಾವ ಬೀರುತ್ತದೆ. ಅವರು ಅಸಹಾಯಕರಾಗಿ ಬರಿ ಬದುಕನ್ನು ಅಂದರೆ ನಿರಾಶೆಯನ್ನುಣ್ಣುತ್ತಾರೆ ಎಂಬುದನ್ನು ಕವಿ ಹೀಗೆ ತಿಳಿಸಿದ್ದಾರೆ :

'ಉರಿಮೋರೆ ಬಿರಿಗಣ್ಣು ಮನೆಯ ಹೊತ್ತಿಸುತಿರಲು
ಕಾಡ–ಬೇಗೆಗೆ ಸಿಕ್ಕ ಮರಿಗಳೊಲು
ಪಕ್ಕಗಳು ಬಲಿತಿಲ್ಲ, ಹಾರಿಕೆ ಕಲಿತಿಲ್ಲ
ಮುಗಿಲನ್ನೆ ಮೊರೆಹೊಕ್ಕು ನೋಡುವವು.'

ಹೀಗೆ ತಮ್ಮ ಸೋಲನ್ನು ಸ್ವ ವಿಮರ್ಶೆ ಮಾಡಿಕೊಳ್ಳುತ್ತ ಸತ್ಯಶೋಧನೆಯ ಜೊತೆಗೆ ಆತ್ಮಶೋಧವೂ ಆಗಿ ಈ ಕಾವ್ಯ ಸಾಗಿರುವುದು ಕಂಡು ಬಂದಿದೆ.

ಈ ಕಾವ್ಯ ಆ ಕಾಲಮಾನದ ಹೆಮ್ಮೆಯ ವಿಷಯವಾಗಿ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಮಾನತೆಯುನ್ನು ಸಾರಿದ ಆದ್ಯಕಾವ್ಯವಾಗಿದೆ. ಕವಿಯು

'ಅಂಬಿಕಾತನಯನ ಜಂಭದ ಪಾಡಳಿದು
ನಂಬಿಕೆಯ ಹಾಡಾಗಿ ಬಂತಿಲ್ಲಿಗೆ
ಪೂರ್ವಾನುರಾಗವೀ ಪರ್ವಕೆ ಸಂದಿತು
ಉತ್ತರೋತ್ತರವಿರಲಿ ಉತ್ತರಕೆ!'

ಎಂದು ಹೇಳಿದ್ದಾರೆ. ಸಖ ಸಖಿಯರ ಬದುಕು ಎಂದರೆ ಅದು ಒಂದು ಕುಣಿತವಿದ್ದಂತೆ. ಅದರ ಹಾಡಿಗೆ 'ಅಕ್ಕರ ಛಂದವು ಸಾಂಗತ್ಯ ಸಂಸ್ಕಾರ'ವಿದೆ. ಆದಕಾರಣ ಸಖೀಗೀತ– 'ಕುಣಿತದ ಹಾಡಿದು ಕುಣಿಯ ಹಚ್ಚಿತು ಜನಕೆ! ಕಲ್ಲಾದ ಮನಗಳ ಕರಗಿಸಿತು.' ಈ ಬಗೆಯ ಆಹ್ಲಾದವನ್ನು ತಂದ ಈ ಕಾವ್ಯದ ಗುರಿ : 'ಕಲ್ಯಾಣ-ಶಕ್ತಿಯ ಕೈಯ ಕುಶಲತೆಯಿಂದ ಪಾಕವಾಗಲಿ ಪ್ರೇಮ!'

ಕವಿಯು ಈ ಕಾವ್ಯದಲ್ಲಿ ಸಖಿ ಎಂಬುವಳು ಹೆಣ್ಣು ಮಾತ್ರವಾದ ಜೊತೆಗಾತಿಯಲ್ಲ. ಅವಳು ಬೌದ್ಧಿಕ ಮತ್ತು ಅಧ್ಯಾತ್ಮಿಕ ಜೊತೆಗಾತಿ ಎಂಬುದನ್ನು ಶೋಧಿಸಿದ್ದಾರೆ. ಇದು ಆತ್ಮಕತೆಯನ್ನು ಕಾವ್ಯಕಲೆಯಾಗಿ ಹೆಣೆದಿರುವ ಅಪೂರ್ವ ಕಾವ್ಯ. ಇಲ್ಲಿ ಆತ್ಮಕತೆ ಮತ್ತು ಕಲೆ ಸಖ ಸಖಿಯರಂತೆ ಒಂದುಗೂಡಿದೆ. ಹಾಗೆ ಒಂದಾದ ಕಾವ್ಯದ ಆತ್ಮ 'ಸಖೀಗೀತ.'

OOO

೭. ಬಾಲ್ಯಕಾಂಡ

ಬೇಂದ್ರೆಯವರು ಆಗಾಗ್ಗೆ ಬಾಳನ್ನು ಅವಲೋಕಿಸುತ್ತ, ಅದನ್ನು ಆತ್ಮಕಥನ ಶೈಲಿಯಲ್ಲಿ ಭಾವಗೀತಾತ್ಮಕವಾಗಿ ರಚಿಸಿದ್ದಾರೆ. ೧೯೩೭ರಲ್ಲಿ ಬರೆದ 'ಸಖೀಗೀತ', ೧೯೭೩ರಲ್ಲಿ ಸೃಷ್ಟಿಸಿದ 'ಮತ್ತೆ ಶ್ರಾವಣಾ ಬಂತು' ಕಾವ್ಯಭಾಗ ೧ರ 'ಬಾಲ್ಯಕಾಂಡ'ಗಳು ಅವರ ಪಂಚೇಂದ್ರಿಯ ಅನುಭವಿಸಿದ ಸುಖ, ರುಚಿ, ಆಹ್ಲಾದ, ಒಗರುಗಳನ್ನೊಳಗೊಂಡ 'ಜೀವ ಸಂಚಿತದಲ್ಲಿ ವಾಸನೆಯುದರದ ಸಂಸ್ಕಾರ' ಚಿತ್ರಗಳಾಗಿವೆ. ಅವರು ತಮ್ಮ ವೈಯಕ್ತಿಕ ನೋವು ನಲಿವಿನ ಜೀವನವನ್ನು 'ಪಟ್ಟ ಪಾಡೆಲ್ಲವು ಹುಟ್ಟು ಹಾಡಾಗುತ। ಹೊಸದಾಗಿ ರಸವಾಗಿ ಹರಿಯುತಿವೆ' ಎಂಬ ಹೊಸ ಸವಿಯಲ್ಲಿ, ನವನವೀನ ಶೈಲಿಯಲ್ಲಿ ರಚಿಸಿದ್ದಾರೆ. 'ಕನ್ನಡಿಯಲ್ಲಿ ನೋಡಿದಾಗ ಎಲ್ಲರಿಗೂ ತಮ್ಮ ತಮ್ಮ ಮುಖವೆ ಕಾಣುತ್ತದೆ.' ಎಂದು ತಮ್ಮನ್ನು ತಾವೇ ದೃಷ್ಟಿಸಿ ನೋಡಿದ್ದಾರೆ. ಕಂಡ ಅರೆಕೊರೆ, ತೇಜದ ಹೊಳಪು, ಆನಂದ, ಜೀವನೋತ್ಸಾಹಗಳನ್ನು ಕಾವ್ಯ ಭಾಷೆಯಲ್ಲಿ ಕುಂದಣಿಸಿದ್ದಾರೆ. ಈ ಬಗೆಯ ಆತ್ಮಗೀತಾತ್ಮಕವಾದ ಕಾವ್ಯ ಕನ್ನಡ ಕಾವ್ಯ ಪರಂಪರೆಯಲ್ಲಿ ಹೊಸತು.

'ಬಾಲ್ಯಕಾಂಡ'ದಲ್ಲಿ ಬೇಂದ್ರೆಯವರು ತಮ್ಮ ವ್ಯಕ್ತಿಗತ ಅನುಭವ, ಕುತೂಹಲ, ಆನಂದದ ಅರಿವುಗಳನ್ನು ಹೇಳುತ್ತಲೇ, ಅದರಿಂದ ನಿರಸನಗೊಳ್ಳುತ್ತ ಆ ಅನುಭವಗಳನ್ನು ಸಮಷ್ಟಿಯ

ನೆಲೆಗೆ ಕೊಂಡೊಯ್ಯುವಲ್ಲಿ ಯಶಸ್ವಿಯಾಗಿದ್ದಾರೆ. ಅವರು ಕಂಡ ಸಮಾಜದ ವೈರುಧ್ಯಗಳು, ಎದುರಿಸಿದ ಸಮಸ್ಯೆಗಳು ವೈಯಕ್ತಿಕ ನೆಲೆಯಲ್ಲಿಯೇ ನಿಲ್ಲದೆ ಮನುಕುಲದ ಕಗ್ಗಂಟಾಗಿ ಸಾರ್ವತ್ರಿಕತೆಯನ್ನು ಗಳಿಸಿಕೊಂಡಿವೆ. ಈ ಕಾವ್ಯವು ಅವರ ಸಾಮಾಜಿಕ, ನೈತಿಕ ಮತ್ತು ಅಧ್ಯಾತ್ಮಿಕ ದೃಷ್ಟಿಗೆ ಸಂವಾದಿಯಾಗಿ ಸತ್ಯದ ಆವಿಷ್ಕಾರದತ್ತ ಸಾಗಿದ ಆತ್ಮಕಥನವಾಗಿದೆ. ಬೇಂದ್ರೆಯವರು ತಮ್ಮ ಬದುಕಿನ ಘಟನಾವಳಿಗಳ ದಾಖಲಾತಿಗೆ ಮನಸ್ಸು ಕೊಡದೆ, ತಾವು ಕಂಡುಂಡ ಸತ್ಯ ಘಟನೆಗಳ ಹಿನ್ನೆಲೆಯಲ್ಲಿ ಜೀವನಮೌಲ್ಯಗಳನ್ನು ಶೋಧಿಸುತ್ತ ಕಾವ್ಯನುಭವವಾಗಿಸಿದ್ದಾರೆ.

'ಬಾಲ್ಯಕಾಂಡ'ದಲ್ಲಿ ನಮ್ಮ ಭಾಷೆಯ ಪ್ರಮುಖ ಕವಿಯ ಬಾಲ್ಯದ ಅರಿವಿನ ಹುಡುಕಾಟದ ಜೊತೆಗೆ, ಕಾವ್ಯದ ತಾತ್ವಿಕ ಚಿಂತನೆಯ ಶೋಧವಿದೆ. ಬೇಂದ್ರೆಯವರ ಬಾಲ್ಯವನ್ನು ರೂಪಿಸಿ, ಕವಿಯಾಗಿಸಿದ ಕಾಮನಕಟ್ಟೆಯ ಸಾಂಸ್ಕೃತಿಕ ಅಧ್ಯಯನವಿದೆ. 'ಸಖೀಗೀತ' ವಿವಾಹ ನಂತರದ ಸಾಧನಕೇರಿಯ ಸಿಂಹಾವಲೋಕನವಾದರೆ, 'ಬಾಲ್ಯಕಾಂಡ' ಕಾಮನಕಟ್ಟೆಯ ಸಿಂಹಾವಲೋಕನವಾಗಿದೆ. 'ಬಾಲ್ಯಕಾಂಡ' ದಲ್ಲಿ ಬೇಂದ್ರೆಯವರಲ್ಲಿ ಕಾವ್ಯ ಪ್ರವೇಶವಾದುದರ ಬೆಳಗು ಜಾವದ ಸುಮಧುರ ಸಕ್ಕರೆ ನಿದ್ದೆಯಿದೆ. ಅದನ್ನು ಚುಕ್ಕು ಬಡಿದು ಪೋಷಿಸಿದ ಕೌಟುಂಬಿಕ ಹಾಗೂ ಸಮುದಾಯದ ಪರಿಸರವಿದೆ. 'ಬೀದಿ ಮಕ್ಕಳು ಬೆಳದೊ, ಕೋಣೆ ಮಕ್ಕಳು ಕೊಳೆತೊ' ಎಂಬ ನಾಣ್ಣುಡಿಯಂತೆ ಬಡವರ ಮಕ್ಕಳು ಸಮುದಾಯದ ಭಾಗವಾಗಿ ಮುಕ್ತವಾಗಿ ಆಡುತ್ತ ಬೆಳೆದ ಕೌತುಕವಿದೆ. ಆ ಆಟ ಅವರನ್ನು ಚತುರಮತಿಯವರನ್ನಾಗಿಸಿ ರೂಪಿಸಿದ ವಿವರವಿದೆ. ಆ ಆಡಿದ ಆಟ ತನ್ನದೇ ಎನ್ನುವಷ್ಟರಲ್ಲಿ

ಕುಶಲಕಲೆಯಾದುದರ ಮಾಟವಿದೆ. ಧಾರಾವಾಡದ ಜನಪದರೊಡನೆ ಒಂದಾಗಿ ತನ್ನ ಬುದ್ಧಿಶಕ್ತಿಯನ್ನು ಚುರುಕುಗೊಳಿಸಿಕೊಂಡ ಉಲ್ಲಾಸವಿದೆ. ಎಚ್ಚರಿಕೆಯ ಆಟದಲ್ಲಿ ಅಪ್ರಯತ್ನವಾಗಿಯೇ ಹಲವಾರು ಸೂಕ್ಷ್ಮೇಂದ್ರಿಯಗಳು ವಿಕಾಸಗೊಂಡ ಅನುಭವವಿದೆ. ಧಾರವಾಡದ ಜಾನಪದ ಸಂವೇದನೆಯ ಸ್ಪರ್ಶದಲ್ಲಿ ಮಿಂದ ಸ್ವತಂತ್ರ ಸ್ವಚ್ಛಂದ ಬಾಲಕ ತನಗರಿವಿಲ್ಲದಂತೆ ಕಾವ್ಯಸಂವೇದನೆಗೆ ಒಳಗಾದ ಆಟವಿದೆ. ಆಟದ ಪ್ರತಿಮೆಗಳಲ್ಲಿಯೇ ಕಾವ್ಯ ವಿಕಸನಗೊಂಡ ಪರಿಮಳವಿದೆ. ಈ ಖಂಡ ಕಾವ್ಯವು ಬಾಲ್ಯದ ವಿರಾಟ್ ಸ್ವರೂಪವನ್ನು ದರ್ಶಿಸುವಲ್ಲಿ ಯಶಸ್ವಿಯಾಗಿದೆ.

ಈ ಕಾವ್ಯದಲ್ಲಿ ಬೇಂದ್ರೆಯವರು ಆಟದ ಅಂತರಂಗ ಅರಿತಂತೆ ತಮ್ಮ ಅಂತರಂಗದ ತೀವ್ರಾನುಭೂತಿಯನ್ನು ಕಾವ್ಯವಾಗಿ ಅಭಿವ್ಯಕ್ತಿಸಿದ್ದಾರೆ. ಆಟದ ಪರಿಣತಿ ಎಂದರೆ ಬುಗುರಿಯನ್ನು ಚಾವಟಿಯಲ್ಲಿ ಸುತ್ತಿ ಬಲಗೈನಿಂದ ಮೇಲೆ ಎಸೆದು; ಅದು ಅದೇ ಕೈಯಲ್ಲಿ ತಿರುಗುತ್ತ ನಿದ್ದೆಗೈಯುವುದನ್ನು ನೋಡುವ ಆನಂದ. ಅಂತಹ ಪರಿಣತ ಕಲೆಯಾಗಿ ಕಾವ್ಯವನ್ನು ಪ್ರಯೋಗಿಸಿ ಅನುಭವಿಸಿದ್ದು ಬೇಂದ್ರೆಯವರ ಆಹ್ಲಾದ. ಅವರ ಪ್ರತಿಭೆ ಗಾಳಿಪಟದಲ್ಲಿ ಅತಿ ಸಹಜವಾಗಿ ನಲಿದಂತೆ ಕಾವ್ಯದಲ್ಲಿ ವಿಕಾಸಗೊಂಡು ನೆಲದ ರುಚಿಯನ್ನು ಅನುಭವಿಸುತ್ತಲೇ ಗಹನವಿಹಾರಿಯಾಗಿದೆ. ವರ್ಗ, ವರ್ಣ, ಧರ್ಮ, ಜನಾಂಗದ ಸೋಂಕಿಲ್ಲದ ಆಟದ ಸ್ಪಂದನ ರವದಿ, ಕಡ್ಡಿ, ತಿಪ್ಪೆಯ ಬಸುರಿನ ಮಾವಿನ ನಾದವಾಗಿ ಬೇಂದ್ರೆಯವರಿಗೆ ದಕ್ಕಿದೆ. ಬಾಲ್ಯದ ಆಟವು ಅವರನ್ನು ಅಧ್ಯಾತ್ಮಿಕ ಶೋಧಕ್ಕೆ ತೊಡಗಿಸಿ 'ಲೀಲೆಯಲಿ ಯಾವುದೂ ವಿಫಲಮಲ್ಲ' ಎಂಬ ಸಿದ್ಧಾಂತಕ್ಕೆ ಕೊಂಡೊಯ್ದಿದೆ.

ತಿಂದು ತಿಪ್ಪೆಯಲ್ಲಿ ಎಸೆದ ಮಾವಿನ ಓಟೆಯನ್ನು ಹುಡುಕಿ ಅದರಲ್ಲಿ ನಾದ ಹೊಮ್ಮಿಸಿ ಬೇಂದ್ರೆ ಸುಖಪಡುತ್ತಿದ್ದರು.

'ತೆಯ್ದದ್ದೆ ತೆಯ್ದದ್ದು ತುಟಿಗೆರೆ ಬಿಚ್ಚಿರಲು
ಉಸಿರೆ ಆಗುವದಣ್ಣ ಸಾಕಾರವು !
ಯಾವ ತಿಪ್ಪೆಯ ಬಸಿರ ಬಿರಕಿಗೆ ಮೂಡಿತ್ತೊ
ಮಾವಿನ ಪೀಪಿಯ ಆಕಾರವು?'

ತಿಪ್ಪೆಯಲ್ಲಿ ಚಿಗುರಿದ ಮಾವನ್ನು ತಂದು, ಚಿಗುರಿದ ಕಡೆ ಹಾಗೆ ಬಿಟ್ಟು, ಬುಡದ ಕಡೆ ಓಟೆಯ ಮೇಲಿನ ಕರಟಕಿತ್ತು ಕಲ್ಲಿನ ಮೇಲೆ ತೆಯ್ದರೆ ಅದು ತುಟಿಯಂತೆ ಬಾಯಿ ಬಿಟ್ಟುಕೊಳ್ಳುತ್ತದೆ. ಅದನ್ನು ಊದಿದರೆ ಅದ್ಭುತ ನಾದ ಹೊಮ್ಮುತ್ತದೆ. ಅದು ಅವರ ನಾದ ಶೋಧದಲ್ಲಿ ಜಾಗೃತಗೊಂಡ ಸೃಜನ ಶಕ್ತಿಯಿರಬಹುದೇನೊ!

ಅಂತಹ ನಾದ ಮಾಧುರ್ಯವನ್ನು ಬಾಲ್ಯದಲ್ಲಿ ಸವಿದ ಬೇಂದ್ರೆಯವರು ನವೋದಯ ಕಾವ್ಯವನ್ನು 'ನಾದಲೀಲೆ' ಯಾಗಿ ರೂಪಿಸಿದರು. ಅವರ ಬಾಲ್ಯ ಕಂಡ ಸತ್ಯದ ವಿಕಸಿತರೂಪ ನವೋದಯಕಾವ್ಯ.

ವ್ಯಕ್ತಿ ಎಲ್ಲ ಕಷ್ಟ ಸುಖಗಳಲ್ಲಿ ಬದುಕನ್ನು ನಾದಿಕೊಂಡು ಹದಗೊಳ್ಳಬೇಕು.

ಹದಾ ಒಳಗs ಇಲ್ದs ತಮ್ಮಾ!
ಪದಾ ಹೊರಗs ಬರೂದಿಲ್ಲಾ
ಕದಾ ತೆರ್‍ಯೊದಿಲ್ಲಾ ಅಂತಃಕರಣಾ

(ಹದಾ ಇಲ್ದs ಪದಾ : ಮರ್ಯಾದೆ)

ಬೇಂದ್ರೆ ಕಾವ್ಯದ ಮುಖ್ಯ ಲಕ್ಷಣ ಹದ ಮತ್ತು ಅಂತಃಕರಣ ಅಂತಃಕರಣದ ಮಿಡಿತದಲ್ಲಿ ಹದಗೊಂಡ ವ್ಯಕ್ತಿ ತಾನೇ ನಾದವಾಗಿ

ಹೋಗುವವನು ಎಂಬ ಚಿಂತನೆಯನ್ನು 'ನಾದಬೇಕು' ಕವನದಲ್ಲಿ ಅವರು ನೀಡಿದ್ದಾರೆ.

ನಾದಬೇಕು ನಾದ ಬೇಕು
ನಾದಾನ ನಾದ ಬೇಕು
ನಾದಕ್ಕೆ ಪ್ರತಿನಾದ ಬೇಕು
ನಾದಾನಽನ ಆದ ಮ್ಯಾಲೆ ಬ್ಯಾರೆ ಯಾಕವಾದ ಬೇಕು.

* * *

ಅಂತರಂಗದಾ ಶೋಧಬೇಕು
ಪರಬ್ರಹ್ಮದಾ ಬೋಧಬೇಕು
ಎಂದಿಗು ಶ್ರೀ ಗುರುಪಾದ ಬೇಕು
ನಾದಬೇಕು ನಾದಬೇಕು ತುದಿಮುಟ್ಟಾನು ನಾದಬೇಕು.

(ನಾದಬೇಕು : ಜೀವಲಹರಿ)

ಬೇಂದ್ರೆಯವರು 'ಹೆಣ ಎತ್ತುವ ಮೊದಲು ಬಾರಿಸುವ ಹಲಗೆಯಲ್ಲಿಯೂ ನಮಗೊಂದು ಸಲಿಗೆಯಿತ್ತು.' ಎಂದು ಬಾಲ್ಯದ ಮುಕ್ತ ಲಹರಿಯನ್ನು ನೆನೆದಿದ್ದಾರೆ. ಅದರ ದನಿಯನ್ನು ಕಾವ್ಯದಲ್ಲಿ ಹೀಗೆ ನೀಡಿದ್ದಾರೆ :

'ಸತ್ತರೆಸತ್ತಿನೀ' ಇದ್ದವರ ಮೆರವಣಿಗೆ
ಹಲಿಗೆ ಸೊಲ್ಲಿಸುತಿತ್ತು ಕೊನೆಯರಿಣಾ.

ಅವರಿಗೆ ಬಾಲ್ಯದಲ್ಲಿ ಬ್ರಾಹ್ಮಣ ಹೆಣಗಳಿಗಿಂತ ಮುಸಲ್ಮಾನರ ಹೆಣದ ಮೆರವಣಿಗೆ ಬಗ್ಗೆ ತುಂಬಾ ಆಸಕ್ತಿಯಿತ್ತು.

ಹಾರವನು ಸತ್ತರೆ ಬೆನ್ನುಗಂಟ ಅತ್ತರೇ ?
ಹೊತ್ತವರ ಮುಖದಲ್ಲು ಪ್ರೇತಕಳೆ

ತಡೆರಹಿತ ಬಾಲ್ಯದಲ್ಲಿ ಕಂಪಿಗೆ, ಸತ್ಯಕ್ಕೆ, ಆನಂದಕ್ಕೆ ಮನಸ್ಸು ತೆರೆದುಕೊಂಡಿರುತ್ತದೆ. ಅಲ್ಲಿ ಜಾತಿ, ಮತ, ಪಂಥದ ಕೆಸರು ಅಂಟಿರುವುದಿಲ್ಲ. ಅಂತಹ ಬಾಲ್ಯದ ಅನುಭವವನ್ನು ಬೇಂದ್ರೆಯವರು ಇಳಿವಯಸ್ಸಿನಲ್ಲಿ ಮೆಲುಕು ಹಾಕುವಾಗ ಚಿತ್ರಿಸಿರುವುದು ಮುಸಲ್ಮಾನರಲ್ಲಿ ತುಂಬಾ ಹಿಂದುಳಿದ ಪಂಗಡದವರೆಂದು ಕರೆಯುವ ಪೆಂಡಾರಿ ಸಾಬನ ಮೆರವಣಿಗೆ.

ಅದು ಬೇಂದ್ರೆಯವರು ಸಾಧಾರಣರಲ್ಲಿ ಸಾಧಾರಣರನ್ನು ಪ್ರೀತಿಸುತ್ತಿದ್ದುದರ ದ್ಯೋತಕ. ಅವನ ಘೋರ ಬಡತನ, ಅಸಹಾಯ ಸ್ಥಿತಿಯ ಜೀವನ ರೀತಿ ಸಾವಿಗೆ ಕಾರಣವಾಗಿರುವುದನ್ನು ಬೇಂದ್ರೆಯವರು 'ಹ್ಯಾಂಗಾರೆ ಸತ್ತರು ಶೃಂಗಾರವಾಗಿದ್ದ ಪೆಂಡಾರಿಸಾಬನು ಕೊನೆಯದಿನ' ಎಂದಿದ್ದಾರೆ. 'ಹ್ಯಾಂಗಾರೆ ಸತ್ತರು' ಎಂಬ ನುಡಿಯಲ್ಲಿ ಅವನ ಜೀವನದ ಎಲ್ಲಾ ದೈನ್ಯ ಮಡುಗಟ್ಟಿದೆ.

ಅವರು ಹುಟ್ಟು ವೈದಿಕರಾದರೂ ಮಡಿ ಮೈಲಿಗೆಗೆ ಅಂಟಿಕೊಳ್ಳದೆ ಸಮುದಾಯದ ಬಾಲಕನಾಗಿ ಬೆಳೆದು ಜಾತ್ಯತೀತ ಮನೋಭಾವ ಬೆಳೆಸಿ ಕೊಂಡಿದ್ದರು. ಯಾವುದೇ ಮತಧರ್ಮದ ಕಟ್ಟುಪಾಡಿಗೆ ಒಳಗಾಗದೆ ಅನಂತಶಕ್ತ ಭಗವಂತನನ್ನು ಹೀಗೆ ಪ್ರಾರ್ಥಿಸಿದರು:

ನನ್ನ ಹರಣ
ನಿನಗೆ ಶರಣ
ಸಕಲ ಕಾರ್ಯಕಾರಣಾ
ನಿನ್ನ ಮನನ
ದಿಂದ ತನನ
ವೆನುತಿದೆ ತನು ಪಾವನಾ (ನನ್ನ ಹಾಡು: ಗರಿ)

೦೦೦

೮. ಪ್ರಕೃತಿ ಗೀತೆಗಳು

ಬೇಂದ್ರೆಯವರ ಪ್ರಕೃತಿ ಗೀತೆಗಳಲ್ಲಿ ಮೂಕ ನಿಸರ್ಗವೇ ತನ್ನ ಮೌನ ಮುರಿದಂತೆ ಕನ್ನಡದ ನುಡಿಯಾಗಿ ಹರಿದಿದೆ. ಪಂಚಭೂತಗಳಿಂದಾದ ನಿಸರ್ಗ ಕವಿಯನ್ನು ಪೋಷಿಸಿ ಅವನ ಪಂಚೇಂದ್ರಿಯಗಳನ್ನು ಜಾಗೃತಗೊಳಿಸಿ ಆನಂದಮಯವಾಗಿಸಿದೆ. ಅವನಿಗೆ ಆದ ಆನಂದ ಕಾವ್ಯೋದ್ಗಾರವಾಗಿದೆ. ಅವನು ತಾನೇ ಪ್ರಕೃತಿಯಾಗಿ ಅದರೊಂದಿಗೆ ನಲಿದ ವೈಶಿಷ್ಟ್ಯವಿದೆ. ಅವು ತನ್ನಂತೆ ಪಂಚಭೌತಿಕ ಶರೀರ ಹೊಂದಿವೆ. ಎಂದು ತಬ್ಬಿನಲಿದ ಆನಂದವಿದೆ. ಪ್ರಕೃತಿಯ ಅನುಭವ ಅವರಿಗೆ ವ್ಯಕ್ತಿಗತ ಸಂಬಂಧವಾಗಿ ಅದು 'ಬೆಳಗು' 'ಚಂದ್ರ' 'ಚಳಿಯಾಕೆ' 'ಯುಗಾದಿ' 'ಶ್ರಾವಣ ವೈಭವ'. 'ಋತುಗಾನ' 'ಬೆಳುದಿಂಗಳನೋಡ' 'ಮಲ್ಲಿಗೆ' 'ಹೂವೆ' 'ಮತ್ತೆ ಶ್ರಾವಣ ಬಂದ' ಮುಂತಾದ ಕವನಗಳಾಗಿವೆ. ಅವರಿಗೆ 'ಇಳೆ' ಎಂದರೆ 'ಬರಿಮಣ್ಣಲ್ಲ' ಅದು 'ಭೂಮಿತಾಯಿ', 'ಮೊದಲಗಿತ್ತಿ'.

ನಿಸರ್ಗಕವಿಗಳು ಸಾಧಾರಣವಾಗಿ ವಸಂತ ಋತುವಿನ ಆರಾಧಕರಾದರೆ ಬೇಂದ್ರೆಯುವರು ವರ್ಷ ಋತುವಿನ ಆರಾಧಕರಾಗಿದ್ದಾರೆ. ಅವರು ಶ್ರಾವಣವನ್ನು ಕುರಿತು 'ಶ್ರಾವಣ' 'ಪ್ರತಿವರ್ಷದಂತೆ ಬಂತು ಶ್ರಾವಣಾ, 'ಮಳೆಗಾಲ' 'ಚಿತ್ತಿಮಳೆಯ ಸಂಜೆ', 'ನೀರೆ' ಮುಂತಾದ ಕವನಗಳನ್ನು ರಚಿಸಿದ್ದಾರೆ. ಶ್ರಾವಣ

ಅವರ ಜೀವ ಚೈತನ್ಯದ ಭಾಗವಾಗಿದೆ. 'ನನ್ನ ಕಣ್ಣೇ ಕಿವಿಯು ಕವಿಯು ನಾನು' ಎಂದು ಹಾಡಿದ ಅವರಿಗೆ 'ಕಿವಿಯೆ ಕವಿ'. ಶ್ರಾವಣ ಕುತೂಹಲದ, ಜೀವದಾಧಾರ ಮಳೆಯನ್ನು ಹೊತ್ತು ತರುವ ಸುಂದರ ಪ್ರಕೃತಿಯ ಮಾಸ. ಅದು ಚೆಲುವು ಒಲವು, ನೆರೆ ಅಬ್ಬರಗಳಿಂದ ಅವರ ಸೃಜನಶೀಲತೆ ಮತ್ತು ಜಿಜ್ಞಾಸೆ ರೂಪುಗೊಂಡು ವಿಕಾಸಗೊಳ್ಳಲು ಕಾರಣವಾದ ಮಾಸ. ಅವರು ಶ್ರಾವಣದ ನಾದಮಾಧುರ್ಯಕ್ಕೆ ಶ್ರುತಿಗೊಂಡ ಕಿವಿಯನ್ನು ಕವಿಯಾಗಿಸಿದ 'ಶ್ರವಣ ಪ್ರತಿಭೆ' ಯ ಕವಿ. ಶ್ರಾವಣ ಮಾಸದಲ್ಲಿ ಧಾರವಾಡದ ಆಕರ್ಷಕ ನಿಸರ್ಗ ಸೌಂದರ್ಯವನ್ನು ಅನುಭವಿಸಿದ ಕವಿಯ ಆನಂದ – ಶ್ರಾವಣದ ಹಾಡುಗಳಾಗಿವೆ.

ಮಳೆಯು ಸುಖ–ದುಃಖ ಎರಡನ್ನೂ ಈ ನೆಲದ ಜನಕ್ಕೆ ಹೊತ್ತು ತರುತ್ತದೆ. ಬೆಳೆಗೆ ಜೀವರಸವಾದಂತೆ, ನೆರೆ ಹಾವಳಿಯುಂಟು ಮಾಡಿ ಬದುಕನ್ನು ಮೂರಾಬಟ್ಟೆ ಮಾಡುವ ಕ್ರೌರ್ಯವನ್ನೂ ಅದು ಹೊಂದಿದೆ. 'ಕತ್ತಲೆಯ ತುಟ್ಟತುದಿ ಹತ್ತಿರವೆ ಬೆಳಕು ಬದಿ ಎಂದು ಸಾರೋ ಶ್ರಾವಣಾ' ಆಗಿದೆ.

ಶ್ರಾವಣ ಬೇಂದ್ರೆಯವರಿಗೆ ಭಗವಾನ್ ಶ್ರೀ ಕೃಷ್ಣನ ಜನನ, ಮಹರ್ಷಿ ಅರವಿಂದರ ಜನನ; ತನ್ನ ಮಕ್ಕಳಾದ ವಾಮನ, ಮಂಗಲಾರ ಜನನದ ಸಂತಸದ ಮಾಸವಾಗಿದೆ. ಹಾಗೆಯೆ ಗೆಳೆಯ ಮಧುರಚೆನ್ನ (ಹಲಸಂಗಿ ಚೆನ್ನಮಲ್ಲಪ್ಪ), ಶಂಕರಗೌಡ ಪಾಟೀಲ, ತಾಯಿ ಅಂಬವ್ವ, ಪತ್ನಿ ಲಕ್ಷ್ಮೀಬಾಯಿ ತೀರಿಕೊಂಡ ನೋವಿನ ದುಃಖದ ಮಾಸವಾಗಿದೆ. ಅದು 'ಸಮರಸವೇ ಜೀವನ' ಎಂದು ಕವಿ ಭಾವ ಬೆಳಗುವಂತೆ ಮಾಡಿದೆ. ಅವರು ಶ್ರಾವಣಮಾಸವು ದೇಶಕ್ಕೆ ಸ್ವಾತಂತ್ರ್ಯವನ್ನು ತರುತ್ತದೆ ಎಂದು

ಕನಸು ಕಂಡಿದ್ದರು. 'ಬಂದಿಯೊಳಗಿದ್ದವರ ಬಂಧನವ ಬಿಡಿಸುವ/ ಬಂದಿಕಾರ ಶ್ರಾವಣಾ' ಎಂದು ಕಾವ್ಯರಚಿಸಿದ್ದರು (೧೯೪೨). ಅದರಂತೆ ದೇಶಕ್ಕೆ ಶ್ರಾವಣಮಾಸ – ಆಗಸ್ಟ್‌ನಲ್ಲಿ ಸ್ವಾತಂತ್ರ್ಯ ಬಂತು. ಅವರಿಗೆ ಶ್ರಾವಣ ಸ್ವಾತಂತ್ರ್ಯದ, ವ್ಯಕ್ತಿವಿಕಾಸದ, ಸರ್ವಸಮಾನತೆಯ, ಜಗದ ಏಳಿಗೆ ಸಾರುವ ಪವಿತ್ರ ತಿಂಗಳು. ಅವರಿಗೆ ಆ ಮಾಸದಲ್ಲಿ ಭೂಮಿತಾಯಿಯು ಹೂವಿನ ಹಡಲಿಗೆಯನ್ನು ಹೊತ್ತ ಜೋಗಿತಿಯಂತೆ ಮೈದುಂಬಿ ಕುಣಿಯುತ್ತಿದ್ದಾಳೆ.

'ಹೂವ ಹಡಲಿಗೆಯನ್ನು ಹೊತ್ತ
ಭೂಮಿತಾಯಿ ಜೋಗಿತಿ
ಮೈತುಂಬಿ ಕುಣಿಯುತಿಹಳ
ನಂತ ಕಾಲ ವೀಗತಿ.'

ಬೇಂದ್ರೆಯವರಿಗೆ ಶ್ರಾವಣ 'ಮಧುಮಾಸಕು ಹಿರಿದದು। ಮಧುರಮಾಸ ಸರಿಯದು' ಆಗಿದೆ. ಅವರು ಶ್ರಾವಣವನ್ನು ತುಂಟ ಹುಡುಗ ಎಂದು ಕರೆದು, ಗೆಳೆಯನಂತೆ ಕಂಡಿದ್ದಾರೆ.

ಬಾರೋ ಬಾ ಸಂಗಾಟ ॥ ಪ ॥
ಶೃಂಗೇರಿ ಶಿಖರಾ ಏರಿ, ತುಂಗಿಯ ಒಡಲಸೇರಿ
ಬಂಗಾರ ಮಲೆನಾಡ ಪೊಂಗಿಸಿ ಬಾ
ಬೆಳುವಲ ಬರಗಾಲ ಹಿಂಗಿಸಿ ಬಾ ॥

(ಬಾರೋ ಬಾ : ಶತಮಾನ)

ಅವರು ಶ್ರಾವಣದ ಮಳೆಯಲ್ಲಿ ನೆನೆದು, ಮೋಡಗಳ ಆಟ ನೋಡುವ ಉತ್ಸಾಹದಲ್ಲಿ ಸ್ನೇಹಿತರನ್ನು ಕರೆದು ಮಳೆಯಲ್ಲಿ ಕುಣಿದಿದ್ದಾರೆ.

'ಮಳೆಬರುವ ಕಾಲಕ್ಕ
ಒಳಗ್ಯಾಕ ಕೂತೇವೊ
ಇಳೆಯೊಡನೆ ಜಳಕ ಮಾಡೋಣ
ನಾವೂನು, ಮೋಡಗಳ ಆಟ ನೋಡೋಣ

(ಮಳೆ : ಉಯ್ಯಾಲೆ)

ಈ ಪೃಥ್ವಿಯ ಜೀವಸಂಕುಲ ಉಳಿದು ಬೆಳೆಯುವುದು ನೀರಿನಿಂದ ಮಾತ್ರವಾಗಿ ಗಂಗಾವತರಣಕ್ಕಾಗಿ ಪ್ರಾರ್ಥಿಸಿದರು : 'ಹರಣ ಹೊಸದಾಗೆ ಹೊಳೆದು ಬಾ । ಬಾಳು ಬೆಳಕಾಗೆ ಬೆಳೆದು ಬಾ.' ಈ ನೆಲದ ಜೀವಿಗಳ ಸೃಷ್ಟಿಗೆ ಕಾರಣವಾದ ಗಂಗೆಯನ್ನು 'ಹತ್ತು ಅವತಾರಕ್ಕು ಹಿರಿದೆಂಬೆ ಹಡೆದವ್ವ ನಿನ್ನ ಗಂಗಾವತಾರ' ಎಂದು ಮೈದುಂಬಿ ಹಾಡಿದರು. ಅವರು 'ಈ ತುಂಬಿ ಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು' ಎಂದು ಜನರಿಗೆ ತಿಳಿ ಹೇಳಿದರು. ಆ ಬಗೆಯ ಬಾಳು ಸಾಧ್ಯವಾಗಿಸುವ ಶ್ರಾವಣ 'ಪಡುವ ದಿಕ್ಕಿನಿಂದ ಹರಿವ ಗಾಳಿ-ಕುದುರೆಯನ್ನು ಏರಿ । ಪರ್ಜನ್ಯ ಗೀತವನ್ನು । ಹಾಽಡುತ್ತ ಬಂದಿತು.' (ಶ್ರಾವಣ : ನಾದಲೀಲೆ) ಎಂದು ಲೋಕಕ್ಕೆ ಸಾರಿದರು. ಶ್ರಾವಣ ಬರುವಾಗ ಪ್ರಕೃತಿಗೆ ಹೊಸಕಂಪು, ರಸ, ಮೃದುತನ ತಂದಿದೆ ಎಂದು ನಲಿದರು.

'ಬಾನ್ ತುಂಬಿದೆ, ಕೆರೆ ತುಂಬಿದೆ,
ಹೂ ತುಂಬಿದೆ ಬೇಲಿ.
ನೀರಲದಲಿ ರಸ ತುಂಬಿದೆ
ಮಿದುವಾಗಿದೆ ಜಾಲಿ.'

(ಮಳೆಗಾಲ : ಜೀವಲಹರಿ)

ಶ್ರಾವಣ ಮಾಸವೆಂದರೆ ಕುತೂಹಲದ, ಸ್ಪರ್ಶ ಚೇತನದ, ಬಣ್ಣ ಬೆಡಗಿನ, ಶಬ್ದ ಮೌನದ ಜಾತ್ರೆಯಿದ್ದಂತೆ. ಅದು ಭಾನು-

ಭುವಿಯ ನೇಹದ ಆಹ್ಲಾದ. ಇಡೀ ಪ್ರಕೃತಿ ಸೃಜನಕ್ರಿಯೆಗೆ ಒಳಗಾದ ಜೀವ ಸ್ಪಂದನದ ಅರಿವು.

'ಮಣ್ಣು ಹುಡಿಯ ಕಣಕಣವೂ
ಕಣ್ಣು ಪಡೆದ ಹಾಗಿದೆ ;
ಬಾನಿನಂಚಿನಲ್ಲಿ ಮೋಡ,
ನೋಡಲಿದನೆ ಕಾದಿದೆ.'

(ಶ್ರಾವಣದ ವೈಭವ : ಸಖೀಗೀತ)

ಬೇಂದ್ರೆಯವರಿಗೆ ಶ್ರಾವಣ ಕಂಪಿನ, ನಾದದ, ಸೃಷ್ಟಿಯಸೆಲೆ. ಅದರಲ್ಲಿ ಲೀನವಾದ ಅವರಿಗೆ 'ಶ್ರಾವಣಾ ಬಂದಾ ! ಕಿವಿ ತೆರಿ ಎಂದಾ'–ಎಂಬ ಧ್ಯಾನ. ಶ್ರವಣ ಪ್ರತಿಭೆಯ ಜಾಗೃತ ಸ್ಥಿತಿ. ಶ್ರಾವಣ ಮಾಸದಂತೆ ಕಾವ್ಯರಚನೆಗೆ ಒಳಗಾದ ಆಮೋದ.

'ಕೇದಗೆಯ ಹೊಡೆ ತೂರಿ ಊದು ನಿನ್ನ ತುತೂರಿ
ಮೋದಬೀರೋ ಶ್ರಾವಣಾ
ನಾದವಿದು ಯಾವುದೊ ಅಗಾಧ ತಳದಿಂ ಬಂತು,
ಉದೋದಿದೋ ಶ್ರಾವಣಾ.'

(ಬಂದಿಕಾರಾ ಶ್ರಾವಣಾ ! : ಗಂಗಾವತರಣ)

ಅವರಿಗೆ ಶ್ರಾವಣಮಾಸದ ವರ್ಷಧಾರೆ ಶ್ರೀಕೃಷ್ಣನ ಕೊಳಲ ನಾದ. ಭಾರತೀಯ ಭಾವಕೋಶದ ಪ್ರೀತಿ, ಶಾಂತಿ, ಸುಖ, ಸಮೃದ್ಧಿಯ ಸಂಕೇತ. ಶ್ರಾವಣ ಮತ್ತು ಶ್ರೀ ಕೃಷ್ಣ ಒಂದಾದ ಸಂಪತ್ತಿನ ಪ್ರತಿಮೆ.

ಶ್ರಾವಣಽನ ಗೆಜ್ಜೆ ಹೆಜ್ಜೆ
ಕುಣಿದು ಹೋದವೇನೊ ಇನ್ನೂ
ಅಲ್ಲು ಇಲ್ಲು ಎಲ್ಲು ಹಸಿರು
ಹುಲ್ಲೆ ಹುಲ್ಲು, ಹೂವೆ ಹೂವು ॥

(ಕೊಳಲನೂದಿದ : ಕಾಮಕಸ್ತೂರಿ)

ಶ್ರಾವಣದ ಧ್ಯಾನದಲ್ಲಿ ಒಂದಾಗಿ ಹೋಗಿ ಅದರ ಫಲವನ್ನು ಕಾವ್ಯವಾಗಿ ಹರಿಸಿದ 'ಅಂಬಿಕಾತನಯದತ್ತ' ರು ನುಡಿದಿದ್ದಾರೆ :

ಶ್ರಾವಣಕ ತಪ್ಪಿತಗ್ಯಾನಾ
ಎಲ್ಲಿದೋ ಧ್ಯಾನಾ
ಹುಚ್ಚು ಆಗ್ಯಾನಾ
ಮದೋನ್ಮತಾ,
ಅಂಬಿಕಾತನಯದತ್ತ.

(ಪ್ರತಿವರ್ಷದಂತೆ ಬಂತುs, ಶ್ರಾವಣಾ : ಸೂರ್ಯಪಾನ)

* * * *

'ಋತುಗಾನ' ಕವನದಲ್ಲಿ ಬೇಂದ್ರೆಯವರು ಋತುಗಳು ಬದಲಾದಂತೆ ನಿಸರ್ಗದಲ್ಲಿ ಉಂಟಾಗುವ ಏರಿಳಿತವನ್ನು ಬಣ್ಣಿಸುತ್ತ, ಅದರಲ್ಲಿಯ ಆಕರ್ಷಣೆಯತ್ತ ಗಮನಹರಿಸಿದ್ದಾರೆ. ಋತುಗಳಿಗೆ ಸ್ಪಂದಿಸಿದ ನೆಲ ಮತ್ತು ಮುಗಿಲಿನ ಬಾಂಧವ್ಯವನ್ನು ದಾಂಪತ್ಯದ ಸವಿಯಲ್ಲಿ ಬಣ್ಣಿಸಿದ್ದಾರೆ. ಮಳೆಗಾಲದ ಆ ಮಾಸವು ದ್ಯಾವಾ ಪೃಥ್ವಿಯ ಮಿಲನದ ಕಾಲ. ಅದರ ವೈಭವ ಸೃಷ್ಟಿ ಕ್ರಿಯೆ. ಅದು ಜನನ ಮರಣದ, ಸುಖ ದುಃಖದ ಅನುಭವದ ಮಾಸ. ಆಗ ಉಂಟಾಗುವ ಕಡಲ ಏರಿಳಿತ, ಬೀಜಮೊಳೆತ ಪ್ರತಿಮೆಗಳು ದಾಂಪತ್ಯದ ಸಂಕೇತಗಳಾಗಿವೆ.

'ನೆಲದಪ್ಪುಗೆಯುಕ್ಕಂದಕೆ ಕಡಲೇರಿಳಿವಾಟ
ಪಡುಮೂಡಲ ಕಾರ್ನೀರನು ಎರೆವೆಲರಿನ ತೀಟ;
ಬೀಳುವ ಬೀಜವೆ ಮೊಳೆತಿರೆ, ತೆನೆಹಿಡಿಯುವ ಮಾಟ,
ಇಗೊ ಮರಣವು, ಅಗೊ ಜನನವು, ಜೀವನದುಸಿರಾಟ.'

ಈ ಜೀವನವೂ ಒಂದು ಋತುಗಾನದಂತೆ. ಋತುಗಳ ಏರಿಳಿತ ಬದಲಾವಣೆಯಲ್ಲಿ ಹೊಸತನವಿದೆ. ಆ ನವನವೀನ

ಜೀವಂತಿಕೆಯನ್ನು ನಮ್ಮದಾಗಿಸಿಕೊಂಡು ಅದರ ಜೊತೆ ರಿಂಗಣಗುಣಿತಕ್ಕೆ ಹೆಜ್ಜೆ ಹಾಕಬೇಕು. ಆ ನಾದ ಲಯ ಕುಣಿತದ ತಾನದಲ್ಲಿ ಲೀನವಾಗಿ ಹೋಗಬೇಕು. ಆಗ ಬೇಂದ್ರೆಯವರು ನೀಡಿರುವ ಕವನದ ಭಾವ ಸಂದರ್ಭ ಸೂಚಿಯ 'ಋತುಗಳ ರಿಂಗಣಗುಣಿತದಲ್ಲಿ ಜೀವನದ ಅಮೃತ ಶ್ರುತಿಯೊಂದು ಕೇಳಿಸುವುದು.' ಪ್ರಕೃತಿಯ ಭಾಗವಾದ ಮಾನವ ಋತುಗಾನದ ಶ್ರುತಿಗೆ ಮನಸ್ಸುಕೊಟ್ಟು ಅದರ ಆಲಾಪನೆಯ ಲಹರಿಯಲ್ಲಿ ಸೇರಿದಾಗ ಬ್ರಹ್ಮಾಂಡದ ಮೌನ ತಲೆದೂಗಿ ಸಮ್ಮತಿಸುವುದು.

'ಕ್ಷಣ ಕ್ಷಣವೂ ಹೊಸ ಹೊಸದಿದು ಘನಗಗನ ವಿತಾನ
ದಿನ ದಿನ ಗ್ರಹಮಾಲೆಯ ರಿಂಗಣಗುಣಿತದ ತಾನ ;
'ತಿರುತಿರುಗಿಯು ಹೊಸತಾಗಿರಿ' ಎನುತಿದೆ ಋತುಗಾನ,
ಈ ಹಾಡಿಗೆ ಶ್ರುತಿ ಹಿಡಿದಿದೆ ಬ್ರಹ್ಮಾಂಡದ ಮೌನ.'

(ನಾದಲೀಲೆ)

* * *

ಶಿವಧ್ಯಾನಿಯಾದ ಬೇಂದ್ರೆಯವರು ಪ್ರಕೃತಿಯಲ್ಲಿ ಕಂಡ ಲಿಂಗ ವೈಭವ ಭಾರತೀಯ ಸಾಹಿತ್ಯದಲ್ಲಿಯೇ ವಿಶಿಷ್ಟವಾಗಿದೆ. ನಿಸರ್ಗದಲ್ಲಿರುವ ಸಮತಾತತ್ವ, ಅದರ ಅಮೃತ ಪೋಷಣೆಯಿಂದ ಬದುಕುವ ಸಕಲಜೀವರಾಶಿ, ಅಲ್ಲಿ ನಂಬಿಕೆಗೆ ಇಂಬಾದ ಶಿವನರೂಪು ಬೇಂದ್ರೆಯವರ ಶಿವಾನುಭವ. ಅವರ 'ದವನ ಹುಣ್ಣಿಮೆಯ ಜಾತ್ರೆಯ ರಾತ್ರಿ' ಕವನ ಶಿವನ ಪ್ರತೀಕ.

ಇಗೊ ಬಂತು ದವನದ್ಹುಣ್ಣಿವಿ ಬಿಚ್ಚಿ ಕಣ್ಣಿವಿ ಕುಡಿದು ಅಮೃತಾ
ಕಂಡವರಿಗುಣಿಸಿ ಅಮೃತಾ ॥ ಪ ॥

* * *

ಆಕಾಶ ಅನಸತದ ಗುಡಿಯ ಹಾಂಗ ಪ್ರಕಾಶ ಮಹಾಲಿಂಗ
ನೆಲ ಅಗಲ ಪೀಠಧಾಂಗ ॥

ಅವರು 'ಶ್ರಾವಣ' ಕವನದಲ್ಲಿ ಕಡಲಿನ ಮೇಲೆ ಸುರಿಯುವ ಮಳೆಯನ್ನು 'ಕುಣಿದ್ಹಾಂಗ ರಾವಣ' ಎಂದು ಹತ್ತು ತಲೆಯ ರಾವಣ ಕುಣಿದಂತ ವೈಭವದ ಅದ್ಭುತ ಪ್ರತಿಮೆಯಲ್ಲಿ ಬಣ್ಣಿಸಿದ್ದಾರೆ. ಆಗ ಬೀಸುವ ಗಾಳಿ 'ಭೈರವನ ರೂಪ ತಾಳಿ' ಭಯಂಕರ ಅಲ್ಲೋಲ ಕಲ್ಲೋಲವನ್ನುಂಟು ಮಾಡಿತ್ತು ಎಂದು ಮಳೆಯ ಆರ್ಭಟವನ್ನು ಶಿವೋಪಾಸಕ ರಾವಣ ಹಾಗೂ ಶಿವನ ಭೈರಾಗಿ ರೂಪದಲ್ಲಿ ನೀಡಿದ್ದಾರೆ. ಅವರು ತಮ್ಮ ಘನ ಶಿವಪೂಜೆಯಲ್ಲಿ ಪ್ರಕೃತಿ ಒಂದಾದಂತೆ ಪ್ರತಿಗುಡ್ಡವು ಸ್ಥಾವರಲಿಂಗವಾಗಿದ್ದು ಅದಕ್ಕೆ ಮಳೆಯ ಅಭ್ಯಂಜನ ನಡೆಯುತ್ತಿದೆ ಎಂದು ಸುತ್ತಮುತ್ತ ನೆರೆದ ಮೋಡ ನೋಡಿ ನಲಿದಿದ್ದಾರೆ.

ಶ್ರಾವಣಾ ಬಂತು ಕಾಡಿಗೆ । ಬಂತು ನಾಡಿಗೆ ।
ಬಂತು ಬೀಡಿಗೆ । ಶ್ರಾವಣಾ ಬಂತು ।
ಕಡಲಿಗೆ ಬಂತು ಶ್ರಾವಣಾ । ಕುಣಿದ್ಹಾಂಗ ರಾವಣಾ ।
ಕುಣಿದಾವ ಗಾಳಿ । ಭೈರವನ ರೂಪ ತಾಳಿ ॥

* * *

ಗುಡ್ಡ ಗುಡ್ಡ ಸ್ಥಾವರಲಿಂಗ
ಅವಕ ಅಭ್ಯಂಗ ।
ಎರಿತಾವನ್ನೊಹಾಂಗ ।
ಕೂಡ್ಯಾವ ಮೋಡ । ಸುತ್ತೆಲ್ಲ ನೋಡ ನೋಡ ॥

(ಶ್ರಾವಣ : ಹಾಡು-ಪಾಡು)

* * *

ಬೇಂದ್ರೆ ಅವರ ಸೂರ್ಯೋದಯದ 'ಬೆಳಗು' ಮತ್ತು ಚಂದ್ರೋದಯದ 'ಬೆಳದಿಂಗಳ ನೋಡs' ಕನ್ನಡ ಕಾವ್ಯಲೋಕದಲ್ಲಿ ಸದಾ ಹೊಳೆವ ನಕ್ಷತ್ರಗಳಾಗಿವೆ. 'ಬೆಳುದಿಂಗಳ ನೋಡs' ಹಾಡಾಗಿ ರಸಿಕರ ಹೃದಯೋಲ್ಲಾಸವಾಗಿದೆ. ಇದು ಲಾವಣಿಗತ್ತಿನ ಜಾನಪದ ನುಡಿ ಸೊಬಗಿನಿಂದ ಕೂಡಿದೆ.

ಈ ಕವನ 'ಬೆಳುದಿಂಗಳ ನೋಡs । ಬೆಳುದಿಂಗಳ ನೋಡು ।' ಎಂಬ ಪಲ್ಲವಿಯಿಂದ ಸಹೃದಯನನ್ನು ತನ್ನತ್ತ ಸೆಳೆದು ತನ್ನ ನಾದ, ಆಹ್ಲಾದದಲ್ಲಿ ಮುಳುಗಿಸಿದೆ. 'ಇದು ಮಾಯಕಾರರ ಬಿsೇಡs' ಎಂಬ ಕವಿಯ ನುಡಿಯ ಮಾಯಾಲೋಕದಲ್ಲಿ ತೇಲಿದ ಅನುಭವ ನೀಡಿದೆ. ಅವರು ಬೆಳುದಿಂಗಳ ಹುಟ್ಟನ್ನು ಸೂರ್ಯಾಸ್ತದ ಗೋಧೂಳಿ ಲಗ್ನದಿಂದ ಪ್ರಾರಂಭಿಸಿ, ಅದರ ವೈಭವ, ಸಂಪತ್ತು, ಸಮೃದ್ಧಿಯ ಜೊತೆಗೆ ಅದರ ಮಾಯಾಲೋಕದರ್ಶನ ಮಾಡಿಸಿದ್ದಾರೆ. ಅದರ ಗಂಧ ಸುಗಂಧದಿಂದ ಮನಕ್ಕೆ ಆಹ್ಲಾದವನ್ನುಂಟು ಮಾಡಿ ಸಮಾಧಿ ಸ್ಥಿತಿಯ ಏರುನೆಲೆಗೆ ಕೊಂಡೊಯ್ದಿದ್ದಾರೆ.

'ಚಂದಿರನ ನಗೆ'ಯ ಬಣ್ಣನೆಗೂ ಕವಿ ಆ ಮಂಗಳ ವಿವಾಹದ ಗುಂಗಿನ ಹೋಲಿಕೆಯನ್ನೇ ನೀಡಿದ್ದಾರೆ. ಅದು 'ಮದುಮಗಳ ಕಣ್ಣಿನ ನಗು' ಆಗಿದೆ. ಆ ನಗೆ ಸುತ್ತು ಹರಿದು ತನ್ನ ಆನಂದದಿಂದ ಕಂಡವರ ಬಾಳಿನ ನೋವನ್ನು ಮರೆಸಿ ಆಹ್ಲಾದದಿಂದ ತಂಪಾಗಿಸಿದೆ. ಹೀಗಾಗಿ 'ಇದು ಮಾಯಕಾರರ ಬೀಡು' ಎನಿಸಿದೆ.

ಮದುಮಗಳ ಕಣ್ಣಿನs ಬಗೀ
ಚಂದಿರನ ನಗಿ

ಸುತ್ತ ಹರಿದs ದs
ಸುತ್ತ ಹರಿದs ದ ॥
ಕಂಡವರ ಬಾಳು ಮರಿಸsದ
ತಣ್ಣಗಿರಿಸ್ಯsದ
ತಣ್ಣಗಿರಿಸ್ಯsದ
ಇದು ಮಾಯಕಾರರ ಬೀsಡs
ಬೆಳುದಿಂಗಳ ನೋಡs ॥

ಬೇಂದ್ರೆಯವರು ಮಾಯಕಾರರ ಬೀಡಿನಲ್ಲಿ ಅಮೂರ್ತವಾದ ಗಾಳಿಯನ್ನು ಹಕ್ಕಿಯಾಗಿಸಿದ್ದಾರೆ. ಗಾಳಿಯು ಆ ಬೆಳದಿಂಗಳ 'ಮರ ಮರದಗೊನೀಗೆ ಕೂತು, ಹಾರಿ' ನೋಡಿ ಆನಂದಿಸಿ ಮೈ ಸೋತು ತೆಪ್ಪಗಾಗಿದೆ. ಚಲಿಸದೆ ಸುಮ್ಮನೆ ಕುಳಿತುಕೊಳ್ಳಲು ಗಾಳಿಗೆ ಸಾಧ್ಯವಿಲ್ಲ. ಅದು ಜೀವ ಸಂಜೀವಿನಿ; ಸದಾ ಕ್ರಿಯಾಶೀಲ. ಅದಕ್ಕಾಗಿ ಕವಿ ಆ ಗಾಳಿಯನ್ನು

ತೂಕಡಸತsದ ತಾನೀಗ
ಜಂಪು ಬಂಧಾಂಗ
ಜಂಪು ಬಂಧಾಂsಗs
ಇದು ಅದರ ತುಪ್ಪಳದ ಗೂsಡs
ಬೆಳುದಿಂಗಳ ನೋಡs ॥

ಎಂದು ವರ್ಣಿಸಿದ್ದಾರೆ. ಬೇಂದ್ರೆಯವರು ಹಕ್ಕಿಯನ್ನು ತೂಕಡಿಸುವಂತೆ ಮಾಡಿ ಬೆಳದಿಂಗಳು ಅದಕ್ಕೆ ತುಪ್ಪಳದ ಗೂಡಾಗಿದೆ ಎಂದಿದ್ದಾರೆ. ಇದು ಅವರ ಉತ್ಪ್ರೇಕ್ಷೆಯ ಗಾರುಡಿಗತನ.

ಈ ಕವನದಲ್ಲಿ ಬೇಂದ್ರೆಯವರ ಪ್ರತಿಸೃಷ್ಟಿಯು ನವನವೀನ ಪ್ರತಿಮೆಗಳಿಂದ ಕಂಗೊಳಿಸಿದೆ. ಕಲ್ಪನಾ ಲಹರಿಗೆ ಚಿಂತನೆಯ ಮೆರುಗು ನೀಡಿದೆ. ಅದು ರಸಿಕನ ಕಣ್ಣು ಅರಳಿಸಿ, ಮನಸ್ಸನ್ನು

ಮುದಗೊಳಿಸಿದೆ. ಜನಪದ ಭಾಷೆಯ ಜಾಡಿನಲ್ಲಿ ಸಾಗುತ್ತ ಶಿಷ್ಟಕಾವ್ಯದ ಅರ್ಥವನ್ನು ಹಿಗ್ಗಿಸಿದೆ. ಹೊಸ ಧಾಟಿಯ ಲಯ, ಛಂದಸ್ಸನ್ನು ಸೃಷ್ಟಿಸಿದೆ. ಅದಕ್ಕೆ ಕವಿಯ ಉಸಿರ ಸವಿರಾಗ ಬೆರೆತಿದೆ. ಅದು 'ಅಂಬಿಕಾತನಯ' ನ ಹಾಡಾಗಿದೆ.

'ಅರೆ ಮರವು ಮಾಡುವೀ ಬಂಧ
ಯಾವುದೀ ಛಂದ
    ಯಾವುದೀ ಧಾಟಿ
    ಯಾವುದೀ ಧಾಟಿ? ॥
ಸವಿರಾಗ ಬೆರಸಿದ ಉಸಿರು
ಇದಕ ಯಾ ಹೆಸರು
ಇದಕ ಯಾ ಹೆಸರ?
    ಅಂಬಿಕಾತನಯನ ಹಾಡ
    ಬೆಳುದಿಂಗಳ ನೋಡ ॥

* * *

ಸೀಗೆ ಹುಣ್ಣಿಮೆಯಲ್ಲಿ ಸ್ವರ್ಗಸದೃಶ ಬೆಳದಿಂಗಳಿರುತ್ತದೆ. ಚಂದ್ರಮನ ಬೆಳಗು ಸೋಗಿನಂತೆ ಕಡಿಮೆಯಾಗುತ್ತಿರುವಾಗ ಅದನನ್ನುಸರಿಸಿ ಸೋಗಿನಲ್ಲಿ ಬಂದ ಚಳಿ ಧಾರವಾಡವನ್ನು ಆವರಿಸುತ್ತದೆ ಎಂದು ಬೇಂದ್ರೆಯವರು 'ಚಳಿಯಾಕೆ' ಕವನದಲ್ಲಿ ತಿಳಿಸಿದ್ದಾರೆ.

'ಸೀಗೆ ಹುಣ್ಣಿವೆ ಮುಂದೆ
ಸೋಗಿನ ಚಂದ್ರಮ
ಸಾಗಿಬರುವೊಲು ಬರುವ ಚಳಿಯಾಕೆ.'

ಒಂದು ಋತುಮಾನದ ಹೊರಳನ್ನು ಆ ನೆಲದ ಅಣುಗನಾಗಿ ಬೇಂದ್ರೆ ಸೂಕ್ಷ್ಮವಾಗಿ ಗ್ರಹಿಸಿ ಅಭಿವ್ಯಕ್ತಿಸಿರುವ ರೀತಿ ಕನ್ನಡ

ಕಾವ್ಯದ ಅಚ್ಚರಿ. ಅದು ಸೀಗೆಕಾಯಿಗಳು ಫಲಕ್ಕೆ ಬರುವ ಕಾಲ. ಆ ಬಳ್ಳಿಯಲ್ಲಿರುವ ಮುಳ್ಳುಗಳು ಗಟ್ಟಿಗೊಂಡು ಚುಚ್ಚಿ ನೋಯಿಸುವಂತೆ ಚಳಿ ಬಿಗುವುಗೊಂಡು ಕೊರೆಯುವ ಪ್ರತಿಮೆ ಒಂದು ವಿಶಿಷ್ಟ ಸ್ಪರ್ಶಾನುಭವ. ಈ ಕವನದಲ್ಲಿ ಬೇಂದ್ರೆಯವರು ಚಳಿಯನ್ನು ಹೆಣ್ಣಾಗಿ ಪರಿಭಾವಿಸಿ ಆಕೆ ನಿಸರ್ಗದಿಂದ ಪಡೆದ ಪರಿಕರಗಳಲ್ಲಿ ಚೆಲುವಾದುದನ್ನು ಚಿತ್ರಿಸಿದ್ದಾರೆ. ಆಕೆ ಸಕಲ ಜೀವಜಾಲವನ್ನು ಆಕರ್ಷಿಸಿ ತನ್ನ ತೆಕ್ಕೆಗೆ ತೆಗೆದುಕೊಂಡ ಅಮೂರ್ತಾನುಭವ ಇಲ್ಲಿ ಮೂರ್ತಗೊಂಡಿದೆ. ಬೇಂದ್ರೆ ತನ್ನ ಪಂಚೇಂದ್ರಿಯಗಳು ಅನುಭವಿಸಿದ ಚಳಿಯನ್ನು ಅಂಗೈಲಿ ಹಿಡಿದು ಆಡಿಸಿ ನೋಡಿದ್ದಾರೆ.

ನಡುಗಿಸಲು ಅಡಿಯಿಟ್ಟು ಬರುವ 'ಚಳಿಯಾಕೆ'ಯನ್ನು ಬೇಂದ್ರೆಯವರು ಆಕೆ ತೊಟ್ಟ ಆಭರಣಗಳ ಪ್ರತಿಮೆಯಲ್ಲಿ ಹಿಡಿದಿಟ್ಟಿದ್ದಾರೆ. ಮುಗಿಲ ಮಲ್ಲಿಗೆಯಂತಹ ಒಡವೆಯನ್ನು ಆಕೆ ಕಿವಿಯಲ್ಲಿ ಧರಿಸಿದ್ದಾಳೆ. ಅದು ಕಿವಿಯ ಹಾಲೆಯ ಮೇಲುಭಾಗದಲ್ಲಿ ನೇತಾಡುವಂತೆ ಇಟ್ಟುಕೊಳ್ಳುವ ಮುತ್ತು ಹರಳುಗಳನ್ನು ಜೋಡಿಸಿದ ಉಂಗುರದಂತಿರುವ ಆಭರಣ– 'ಬಾವಿಲಿ'. ಇನ್ನೊಂದು ಕಿವಿಗೆ ಒಪ್ಪುವ ಓಲೆಕೊಪ್ಪ. ಆ ಓಲೆಗೆ ಸೇರಿಸುವ ಜುಮುಕಿಯಂತಹ ಅಲ್ಲಾಡುವ 'ಚಳತುಂಬ'. ಅವೆಲ್ಲಾ ಚಳಿಯ ಮುಖ ಅಲುಗುತ್ತಿರುವುದರ ಸೂಚನೆ. ಅಂಥ ಒಡವೆಗಳನ್ನು ಧರಿಸಿದ ಹಲವಾರು ಮುಖಗಳನ್ನು ಚಳಿಯಾಕೆ ನಡುಗಿಸುತ್ತಿದ್ದಾಳೆ ಎಂಬುದು ಅನುಭವ ಗೋಚರ.

ಮುಗಿಲಲ್ಲಾಡುವ
ಬಾವಿಲಿ ಮಲ್ಲಿಗೆ

ಕಿವಿಗೊಪ್ಪು ಓಲೆಕೊಪ್ಪು ಚಳತುಂಬ.
ಹೊಳೆಹೊಂಡದುಸಿರನ್ನೆ
ನಯವಾಗಿ ನೆಯ್ದಂಥ
ಮಂಜಿನ ಮೇಲ್ಸೆರಗು ಮೈ ತುಂಬ

ಹೊಳೆಹೊಂಡದ ಉಸಿರನ್ನು ನಯವಾಗಿ ನೇಯ್ದು ಸಿದ್ಧಪಡಿಸಿದ ಮೇಲ್ಸೆರಗು ಅವಳುಟ್ಟ ರೇಷ್ಮೆ. ಹೊಳೆ ಹೊಂಡದ ಮೇಲೆ ಮಂಜು ಆವರಿಸಿ ನೀರಿನ ಎಳೆಗಳ ಮೂಲಕವೇ ಉಸಿರಾಡುತ್ತಿರುವಂತೆ ಕಾಣಿಸುತ್ತದೆ. ಆ ಉಸಿರಿನಿಂದಲೇ ನೇಯ್ದು ಸಿದ್ಧಪಡಿಸಿದ ಮೇಲ್ಸೆರಗನ್ನು ಚಳಿಯಾಕೆ ಮೈತುಂಬ ಹೊದ್ದಿದ್ದಾಳೆ ಎಂದು ಆಕೆಯ ಘನತೆ ಗಾಂಭೀರ್ಯವನ್ನು ಕವಿ ಸೂಚಿಸಿದ್ದಾರೆ. ಅದು ರೂಪಕಾತ್ಮಕವಾಗಿ ನಮ್ಮ ಮನದಲ್ಲೆಲ್ಲ ತುಂಬಿಕೊಳ್ಳುತ್ತದೆ.

ಚಳಿಯಾಕೆಯ ಬಿಂಕ ಬಿನ್ನಾಣ ಎಂಬುದು 'ಉಸುರುಸುರಿಗೆ ಮುರುಕ' ಗೊಳ್ಳುವುದರಲ್ಲಿ ಅನುಭವಕ್ಕೆ ಬರುತ್ತದೆ. ಆಕೆ ಮೆಲ್ಲಗೆ ಮುಂಗೈ ಹಿಡಿಯುವುದೇ ಒಂದು ಬೆರಗು. ಮುಂಗೈ ಹಿಡಿದ ಮೇಲೆ ಇಡೀ ಶರೀರ ಆಕೆಯ ವಶವಾಗುತ್ತದೆ. ಅದನ್ನು ಕವಿ ಹೀಗೆ ಚಿತ್ರಿಸಿದ್ದಾರೆ :

'ಯಾವ ಜಾತಿಯ ಹೆಣ್ಣೊ
ಹಾವ ಭಾವವೇ ಬೇರೆ
ಅಪ್ಪಿದ ಅಪ್ಪಿಗೆ ಬಿಡದಾಕೆ.' (ಗರಿ)

ಈ ಕವನದ ಪ್ರಕೃತಿಯಲ್ಲಿ ಪ್ರಣಯ ಹಾಸುಹೊಕ್ಕಾಗಿದೆ. ನಿಸರ್ಗದ ಎಲ್ಲ ಚಟುವಟಿಕೆಯಲ್ಲಿ ಮಾನವೀಯ ಸ್ಪರ್ಶವೂ ಇದೆ ಎಂಬುದನ್ನು 'ಚಳಿಯಾಕೆ' ಎಂಬ ಶೀರ್ಷಿಕೆಯಲ್ಲಿ ಕವಿ ಸೂಚಿಸಿದ್ದಾರೆ. ಅದು ಮಾಗಿಕಾಲದ ಚಿತ್ರ ಮಾತ್ರವಲ್ಲ ಕವಿಯ ಮಾಗಿದ ಮನಸ್ಸಿನ ಫಲವೂ ಆಗಿದೆ. ಅಲ್ಲಿ ಇರುವುದು ಸರಳ

ಸಹಜ ನುಡಿಚಿತ್ರ. ಹೊರಗಿನ ಕೃತ್ರಿಮತೆಯ ಸೋಗಿಲ್ಲದ 'ಚಳಿಯಾಕೆ' ಎಂಬ ಸುಂದರಿಯ ತೇಜ. 'ಅಪ್ಪಿದ ಅಪ್ಪಿಗೆ ಬಿಡದಾಕೆ'ಯ ಸಶಕ್ತ ಶೃಂಗಾರ. ತಣ್ಣನೆಯ ಗಾಳಿಯ ಬೀಸಿನಲ್ಲಿ ಧಾರಾವಾಡದ ಭಾಷೆ ಕಾವುಗೊಂಡು 'ಚಳಿಯಾಕೆ'ಯೆಂಬ ಕಾವ್ಯಪುಷ್ಪ ಅರಳಿದ ಕಂಪು.

೦೦೦

೯. ಸಾಮಾಜಿಕ ಪ್ರಜ್ಞೆಯ ಕವನಗಳು

ಬೇಂದ್ರೆಯವರ ಕಾವ್ಯದಲ್ಲಿ ಸಾಮಾಜಿಕ ವಸ್ತುಸ್ಥಿತಿ ಅಗಾಧವಾಗಿದೆ. ಅವರು ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವನ್ನು ತಾಳ್ಮೆ, ಸಹನೆ, ಮಾನವಪ್ರೀತಿ, ಮನಷ್ಯನ ಹೃದಯ ಪರಿವರ್ತನೆ ಮುಂತಾದ ಗುಣವಿಶೇಷಗಳ ಬಲದಿಂದ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಅವರ ಸಾಮಾಜಿಕ ಪ್ರಜ್ಞೆಯು ಸಮಾಜದಲ್ಲಿನ ಅಸಮತೋಲನಕ್ಕೆ ಕಾರಣವಾದ ಅನ್ನವನ್ನೂ, ಹಣವನ್ನೂ ಕಾವ್ಯ ಮೂಸೆಯಲ್ಲಿ ಹಿಡಿಯಲು ಪ್ರಯತ್ನಿಸಿ ಯಶಸ್ವಿಯಾಗಿದೆ. ಕೂಲಿ ಕಾರ್ಮಿಕ, ದೀನದಲಿತ, ಬಡ ಅಸಹಾಯಕರ ನೋವಿನ ಭಾವದಷ್ಟೇ ತೀವ್ರವಾದ ಭಾಷೆಯನ್ನು ಬಳಸಿ ಆ ಹಸಿದ ತಳಮಳವನ್ನು ಶಬ್ದಗಳಲ್ಲಿ ಹಿಡಿದಿಟ್ಟಿದ್ದಾರೆ. ಅವರು "ಅನ್ನ ಮತ್ತು ಹಸಿವು ಇವಕ್ಕೆ 'ಅರ್ಥ' ಮತ್ತು 'ಕಾಮ' ಎಂಬ ದೊಡ್ಡ ಹೆಸರುಗಳಿವೆ. ಅನ್ನ-ಹಸಿವುಗಳ ತೊಡಕನ್ನು ತೊಡಕಿಲ್ಲದೆ ಬಿಡಿಸುವ ಪ್ರಯೋಗಕ್ಕೆ 'ಧರ್ಮ' ಎಂದು ಹೆಸರು. ಪಾರ್ಥಿವ ಅನ್ನವಷ್ಟೆ ಅನ್ನವಲ್ಲ. ನೀರಿಲ್ಲದೆ ಮನುಷ್ಯ ಬಾಳಲಾರನು. ಬೆಳಕಿಲ್ಲದಿದ್ದರೆ ಬಾಡಿ ಹೋಗುವನು. ಗಾಳಿಯಿಲ್ಲದಿದ್ದರೆ ಉಸಿರಡಗಿ ಹೋಗುವನು. ನಿಜವಾಗಿಯೂ ಮನುಷ್ಯನು ಕ್ಷಣಕ್ಷಣಕ್ಕೂ ಬಾಳುವುದು ಈ ನಾಲ್ಕರಿಂದಲೂ ಅಹುದು. ಗಾಳಿ-ಬೆಳಕು-ನೀರು ಇವೂ ಅನ್ನಗಳೇ. ನಮ್ಮ ಬಾಳು-ಸಾವುಗಳೆರಡೂ ಈ ಮಹಾಭೂತಗಳ ಅಧೀನವಾಗಿವೆ... ಮಾನವನ ಅನ್ನದಿಂದ ಅವನ

ಮನವನ್ನೂ ಅಳೆಯ ಬೇಕಾಗಿದೆ. ಮನುಷ್ಯನ ಮೈಯು ಅನ್ನದ ಪರಿಣಾಮ. ಅದೇಕೆ ಮೈ ಕೂಡ ಅನ್ನವಲ್ಲವೇ ? ಅಂತೆಯೇ ಜನರ ಮೈಗಳನ್ನೂ ಆಳಿ ಅನ್ನವನ್ನು ಅಧೀನದಲ್ಲಿಟ್ಟುಕೊಳ್ಳಲು ಶಕ್ತಿ ಮದೋನ್ಮತ್ತರು ಹವಣಿಸುವುದುಂಟು. ಅವಷ್ಟೆ ಸ್ವತಂತ್ರವಾದರೆ ಸಾಲದು. ಮಾನವರ ಮೈಗಳು ಪರಾಧೀನ ಉಳಿದಿರುವವರೆಗೆ ಅನ್ನದ ಇನ್ನೊಂದು ಕಗ್ಗಂಟು ಬಿಡಿಸಲಾಗದು" ಎಂದು 'ವಿಚಾರ ಮಂಜರಿ'ಯಲ್ಲಿ ತಿಳಿಸಿದ್ದಾರೆ.

ಹಸಿವು-ಅನ್ನದ ಸಮಸ್ಯೆಯನ್ನು ಹಾಗೇ ಉಳಿಸಿಕೊಂಡು ವಿಜೃಂಭಿಸುತ್ತಿದ್ದ ಧರ್ಮ ಮತ್ತು ದೇವರನ್ನು ವಾಸ್ತವ ನೆಲೆಯಿಂದ ವಿಶ್ಲೇಷಿಸಿದ ಚಿಂತನೆ ಬೇಂದ್ರೆಯವರ ಕಾವ್ಯದಲ್ಲಿದೆ. ಸಾಮಾಜಿಕ ಸಮಸ್ಯೆಯ ಮೂಲಕಾರಣಗಳನ್ನು ವೈಚಾರಿಕವಾಗಿ ಆಲೋಚಿಸುತ್ತ ಮಾನವ ನೆಲೆಯಲ್ಲಿ ಶೋಧಿಸಿದ್ದು ಬೇಂದ್ರೆ ಕಾವ್ಯದ ವೈಶಿಷ್ಟ್ಯವಾಗಿದೆ. ಅವರ ಕಾವ್ಯದಲ್ಲಿ ಹೀಗೆ ಆಗಬೇಕಾಗಿತ್ತು ಎಂಬ ವಿಮರ್ಶೆಗಿಂತ; ಅವರ ಕಾಲಘಟ್ಟದಲ್ಲಿ, ಅವರು ಬದುಕಿದ ರೀತಿಯಲ್ಲಿ ಅವರ ಕಾವ್ಯಬದುಕು ಎಷ್ಟರಮಟ್ಟಿಗೆ ಸಮಾಜದ ಅರಿವನ್ನು ತನ್ನದಾಗಿಸಿಕೊಂಡಿದೆ ಎಂಬುದನ್ನು ತಿಳಿಯುವುದು ಮುಖ್ಯ.

'ಇದೋ ಬಾಳ
ಕರವಾಳ
ಎಂಟು ಎದೆಯ
ಬಂಟ ಬಡವ
ಇದನು ಅವನು
ಎಂತು ಪಿಡಿವ?' (ಗರಿ)

ಎಂದು 'ಬಾಳಕರವಾಳ' ದಲ್ಲಿ ಬಾಳನ್ನು ಕತ್ತಿಯಾಗಿಸಿಕೊಂಡು ಅದನ್ನು ಹಿಡಿಯಲಾಗದ ಬಡವನ ಚಿತ್ರ ನೀಡಿದ್ದಾರೆ. ಅದನ್ನು ಹಿಡಿಯದೆ ವಿಧಿಯಿಲ್ಲ, ಅದನ್ನು ಹಿಡಿವ ಗಂಡು ಹುಟ್ಟಿದ ದಿನ 'ಮುಗಿಲು ಭುಗಿಲು! ನೆಲಕೆ ದಿಗಿಲು' ಎಂಬ ಸತ್ಯವನ್ನು ಸಾರಿದ್ದಾರೆ. ಅನ್ನ ಚಿನ್ನವಾದ ವ್ಯವಸ್ಥೆಯನ್ನು ಕಂಡು ರೋಷಗೊಂಡ ಅವರು 'ಕೆಲಸವಿಲ್ಲದವರ ಹಾಡು' ಎಂಬ ಕವಿತೆಯಲ್ಲಿ ವ್ಯವಸ್ಥೆಯ ದಾರುಣತೆಯನ್ನು ಹೀಗೆ ಚಿತ್ರಿಸಿದ್ದಾರೆ.

ಆದರಿನ್ನು ತಿನ್ನುವದೇನನ್ನ?
ಅನ್ನವೆಲ್ಲವೂ ಆಯಿತು ಚಿನ್ನ!
ನಾನೇ ನನ್ನನ್ನು ತಿನ್ನುವ ಅನ್ನ!
ತಿನ್ನಲಿ ಏನು ನಾ ನನ್ನನ್ನ?
ಅನ್ನಃ ಅನ್ನಃ ಅನ್ನಃ ಅನ್ನಃ' (ಗರಿ)

'ಅನ್ನದೊರೆಯುದಕ್ಕಾಗಿ ಒಂದು ಹೊಟ್ಟೆಯೂ ಉರಿಯುತ್ತಿರುವವರೆಗೆ ಈ ಹಾಡು ತಪ್ಪಿಲ್ಲ' ಎಂಬ ಭಾವ ಸಂದರ್ಭ ಹೊಂದಿದ ಕವನ 'ತುತ್ತಿನ ಚೀಲ'. ಅದರಲ್ಲಿ ಬೇಂದ್ರೆಯವರು ದೇವರು ಧರ್ಮ ಕುರಿತು ಕ್ರಾಂತಿಯ ಕಿಡಿಕಾರಿ ಬಂಡಾಯ ಕವಿಯಾಗಿದ್ದಾರೆ.

'ದೇವರದೊಂದು
ಗೋರಿಯ ಕಟ್ಟಿ,
ಧರ್ಮದ ಧೂಪಕೆ
ಬೆಂಕಿಯ ನಿಕ್ಕಿ.
ಗಣಗಣ ಬಾರಿಸಿ
ಪ್ರಾಣದ ಗಂಟೆಯ,
ಸಾವಿನ ನೋವಿಗೆ

ಕಲಮಲವೆದ್ದು
ನೆಲವನ್ನೆಲ್ಲಾ
ತುತ್ತುವೆನೆಂದು
ಗದರುತ್ತಿಹುದು
ಗರ್ಜಿಸುತಿಹುದು
ಬಡವರ ಬಗ್ಗರ
ತುತ್ತಿನ ಚೀಲದ
ಒಳಗಿನ ಒಳಗಿನ
ಒಳದನಿಯೊಂದು.' (ಗರಿ)

ಪ್ರಾಣ ಪೋಷಕವಾದ ಅನ್ನವೇ ಈ ಜಗದ ಸಾಮಾಜಿಕ ಸಮಸ್ಯೆಯ ಮೂಲವಾಗಿದೆ. ಅದರ ಉತ್ಪಾದನೆ, ಶೇಖರಣೆ, ವಿತರಣೆ, ಹಿಡಿತಗಳಲ್ಲಿಯೇ ವರ್ಗಸೃಷ್ಟಿಯ ಜಾಲವಿದೆ. ದವಸಧಾನ್ಯಗಳನ್ನು ಬೆಳೆದು ಲೋಕಕ್ಕೆ ಹಂಚುವ ಭೂಮಿತಾಯಿಯ ಚೊಚ್ಚಿಲ ಮಗನಾದ ರೈತನನ್ನು ಕಾಡುವ ಮೊದಲ ಚಿಂತೆಯೂ ಅನ್ನವೇ ಆಗಿರುವುದು ಈ ಲೋಕದ ದುರಂತ. ಜನಸಾಮಾನ್ಯರಲ್ಲಿ ಒಂದಾಗಿ ಜನಪದರ ನಾಡಿ ಸ್ಪಂದನವನ್ನು ಅರಿತಿದ್ದ ಬೇಂದ್ರೆಯವರು ರೈತನ ಪರಕಾಯ ಪ್ರವೇಶ ಮಾಡಿದಂತೆ ಅವನ ವ್ಯಥೆ, ಬೇನೆಯನ್ನು ಕಾವ್ಯವಾಗಿಸಿದ್ದಾರೆ. ಸುಖ ಭೋಜನವನ್ನು ಸವಿದು ಸಂತೃಪ್ತರಾಗಿರುವ ಜನರನ್ನು ಬೇಂದ್ರೆ ಪ್ರಶ್ನಿಸಿದ್ದಾರೆ :

'ಭೂಮಿತಾಯಿಯಾ
ಚೊಚ್ಚಿಲ ಮಗನನು
ಕಣ್ತೆರೆದೊಮ್ಮೆ
ನೋಡಿಹಿರೇನು?'

ಆ ರೈತನಿಗೆ ಜೀವವಿರುವ ಜನುಮ ಕತ್ತಲೆಯಾಗಿದೆ; ಸಾವು ಬೆಳಕಾಗಿದೆ ಎಂಬ ಬೇಂದ್ರೆ ನುಡಿಯಲ್ಲಿ ಕಾಲದೇಶಾತೀತವಾದ ರೈತನ ಹೀನಾಯ ಬದುಕು ಚಿತ್ರಿತವಾಗಿದೆ. ೧೯೨೯ರಲ್ಲಿ ಬರೆದ ಕವನ ಇಂದಿಗೂ ಸತ್ಯವಾಗಿದ್ದು, ಇಂದಿಗೂ ಪ್ರಸ್ತುತವಾಗಿರುವುದು ಕವಿಯ ತೀವ್ರ ಸಾಮಾಜಿಕ ಪ್ರಜ್ಞೆಗೆ ಸಾಕ್ಷಿಯಾಗಿದೆ. ಯಾರೇ ಆಳಿದರೂ, ಏನೇ ಬದಲಾವಣೆಯ ಗಾಳಿ ಬೀಸಿದರೂ ರೈತನನ್ನು ಪ್ರಕೃತಿಯೇ ಪೊರೆಯಬೇಕಾಗಿದೆ!

‘ಜನುಮವೆಂಬುವಾ
ಕತ್ತಲೆಯಲ್ಲಿ
ಬಿದ್ದಿದೆ ಒಳಗೆ
ಹೇಗೋ ಬಂದು
ಸಾವಿನ ಬೆಳಕದು
ಕಾಣುವದೆಂದು?
ಎಂದೋ ಎಂದೋ
ಎಂದೋ ಎಂದು
ಕನವರಿಸುವದು
ತಳಮಳಿಸುವದು!’ (ನಾದಲೀಲೆ)

* * *

ಬೇಂದ್ರೆಯವರು ‘ಮನುವಿನ ಮಕ್ಕಳು’ ಕವನದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಹಗರಣಗಳನ್ನು ಸೃಷ್ಟಿಸಿ, ಅವುಗಳನ್ನು ಮುಚ್ಚಿ ಹಾಕುತ್ತ ತಮ್ಮ ಲಾಭವನ್ನೇ ದೃಷ್ಟಿಯಲ್ಲಿಟ್ಟುಕೊಂಡು ‘ಧರ್ಮಃ’ ಎಂದು ಕೂಗು ಹಾಕುವುದನ್ನು ಛೇಡಿಸಿದ್ದಾರೆ. ಅವು ಸೋಗಿನ ಕೂಗುಗಳು. ಮಾನವ ಧರ್ಮ, ಮಾನವತಾವಾದವೇ ಬೇರೆ. ಹಾಗಾಗಿ ಆ ಕೂಗಿಗೆ ಕಿವಿಗೊಡಬೇಡಿ. ಜನ ಸಾಮಾನ್ಯರ

ಸತ್ತ್ವವೇ 'ಜೀವದೇವ.' ಅದು ಮೈ ಕೊಡವಿ ಎಚ್ಚೆತ್ತು ತಲೆಯೆತ್ತಬೇಕಾಗಿದೆ. ವೇದಾಂತಿಯು ಹೇಳುವ ಇಲ್ಲದ ದೈವಕ್ಕೆ ಶರಣಾಗುವ; ಇರುವ ವಾಸ್ತವವನ್ನು ಎದುರಿಸಲಾಗದ ವರ್ತನೆಗೆ ಕನಿಕರ ಹುಟ್ಟುತ್ತಿದೆ ಎಂದು ವ್ಯಥೆಪಟ್ಟಿದ್ದಾರೆ. ಬೂಟಾಟಿಕೆ ಧರ್ಮವನ್ನು, ವೇದಾಂತಿಯನ್ನು ತೀವ್ರವಾಗಿ ಖಂಡಿಸಿ, ಧರ್ಮದ ಹೆಸರಿನಿಂದ ಸೃಷ್ಟಿಯಾಗಿರುವ ಹತ್ತು ಅವತಾರಗಳು ಹೇಡಿತನದ್ದು ಎಂದು ತಿಳಿಸಿದ್ದಾರೆ.

'ಜೀವದೇವನೇ ಮೈವೆತ್ತು
ನೀನೇ ತಲೆಯೆತ್ತು
ವೇದಾಂತಿಯ ಮುಖಮುದ್ರೆಯ ನೋಡಿ
ಕನಿಕರ ಹುಟ್ಟುವದು.

ಹತ್ತವತಾರದ ಹೇಡಿತನಕ್ಕೆ
ಮನಗೊಣಗುಟ್ಟುವದು
ಗಾಳಿಗೆ ಗಾಳಿಯು ಬಯಲಿಗೆ ಬಯಲು
ತಲೆ ರಣಗುಟ್ಟುವದು (ನಾದಲೀಲೆ)

ಈ ನೆಲದ ಜನರ ಅನ್ನ-ಹಸಿವು, ಉಳ್ಳವರು-ನಿರ್ಗತಿಕರು, ಪ್ರಾಣ-ಸಾವು ಮುಂತಾದ ಸಮಸ್ಯೆಗಳಿಗೆ ಮನುಷ್ಯನ ಸ್ವಾರ್ಥ, ದುರಾಸೆ, ದೌರ್ಜನ್ಯಗಳೇ ಕಾರಣವಾಗಿವೆ. ಅವನು ಮಾನಸಿಕವಾಗಿ ಬದಲಾಗದ ಹೊರತು ಈ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ಅವನು ತನ್ನವರನ್ನೇ ಬೇಟೆಯಾಡುತ್ತ; ಆಳುವವರ ಕೂಟದ ರಕ್ಷಣೆಗೆ ದೇವರು ಮತ್ತು ಧರ್ಮವನ್ನು ಚೆನ್ನಾಗಿ ಸೃಷ್ಟಿಸಿ ಕೊಂಡಿದ್ದಾನೆ. ಜನರಿಗೆ ಈ ಜಗದ ಸೃಷ್ಟಿಯ ಸತ್ಯವನ್ನು ತಿಳಿಸುತ್ತಾ, ಧರ್ಮ ಸೃಷ್ಟಿಸಿದ ಅವತಾರಗಳ ಮಿತಿಗಳನ್ನು ಹೇಳುತ್ತಾ;

ಪ್ರಾಣದ ತ್ರಾಣಕ್ಕೆ ಬೇಕಾದ ಅನ್ನದ ಅವತಾರವಾಗಬೇಕೆಂದು ಬೇಂದ್ರೆಯವರು 'ಅನ್ನಾವತಾರ' ಕವನದಲ್ಲಿ ತಿಳಿಸಿದ್ದಾರೆ. ಈ ಕವನ ಈ ಭೂಖಂಡದ ನೆಲ ಹಾಗೂ ನೀರಿನ ಸಂವಾದವಾಗಿ ನಾಟಕೀಯಗುಣವನ್ನು ಹೊಂದಿದೆ. ಬೇಂದ್ರೆಯವರು ಇದನ್ನು ಒಂದು ದೃಶ್ಯ ಕಾವ್ಯವಾಗಿ ರಚಿಸಿದ್ದಾರೆ. 'ಆ ಕಡೆಗೆ ರತ್ನಾಕರ (ಸಮುದ್ರ) ಈ ಕಡೆಗೆ ವಸುಂಧರಾ (ಭೂಮಿ) ಕುಳಿತಿದ್ದಾರೆ. ನಡುವೆ ನಿತ್ರಾಣವಾದ ಪ್ರಾಣದೇವನು ಬಿದ್ದುಕೊಂಡಿದ್ದಾನೆ.'

ನೀರದೇವ–ಮತ್ಸ್ಯ, ಕೂರ್ಮ ಅವತಾರ
ತೀರದೇವ–ವರಾಹ ಅವತಾರ.
ಕಾಡೋದೇವ–ನರಸಿಂಹ ಅವತಾರ
ಬೇಡೋದೇವ–ವಾಮನ ಅವತಾರಾ
ದುಡುಕುದೇವ–ಪರಶುರಾಮ ಅವತಾರಾ
ಮಿಡುಕುದೇವ–ರಾಮ ಅವತಾರ
ಯುದ್ಧ ದೇವ–ಕೃಷ್ಣ ಅವತಾರ
ಇನ್ನೆರಡು ದೇವ–ಬುದ್ಧ, ಕಲ್ಕಿ ಅವತಾರ

ಈ ದೇವರೆಲ್ಲ ಅವತರಿಸಿದರೂ ಆಹಾರ ತಾರದೆ, ಹೊಟ್ಟೆ ತುಂಬದೆ, ಬಡವರ ಹೊಟ್ಟೆ ತಣ್ಣಗಿರದೆ ಹಸಿವು ಹಾಗೇ ಉಳಿದಿದೆ. ಇದ್ದವರ ಇರು ಚಿಂತೆ ಬಗೆಹರಿಯದೆ ಬೆಳೆಯುತ್ತಿದೆ ಎಂಬುವುದು ಸಂವಾದದಲ್ಲಿ ತೀವ್ರವಾಗಿ ಅಭಿವ್ಯಕ್ತಗೊಂಡಿದೆ. ಸಂವಾದದ ಕೊನೆಯಲ್ಲಿ ಅದುವರೆಗೆ ಮೌನವಾಗಿದ್ದ 'ಪ್ರಾಣದೇವ' ಅನ್ನವಿಲ್ಲದೆ ನಿತ್ರಾಣನಾಗಿ ನುಡಿಯುತ್ತಾನೆ :

'ಅನ್ನ ದೇವರು ಮಾತ್ರ ಇನ್ನೂ ಬರಲಿಲ್ಲೋ
ಇನ್ನೂ ಬರಲಿಲ್ಲಾ.' (ನಾದಲೀಲೆ).

* * *

ಶಿವಭಾವದ ಕಲ್ಯಾಣಮುಖಿ ಚಿಂತನೆಯ ಬೇಂದ್ರೆಯುವರು 'ಕರಿಮರಿನಾಯಿ' 'ಯಜ್ಞ', 'ಬಾಳಗರುಡಿ', 'ಕೆಲಸವಿಲ್ಲದವರ ಹಾಡು', 'ಅನ್ನಯಜ್ಞ' ಮುಂತಾದ ಕವನಗಳನ್ನು ರಚಿಸಿದ್ದಾರೆ. ಅವರ ಸಾಮಾಜಿಕ ಪ್ರಜ್ಞೆಯ ಕವನಗಳಲ್ಲಿ ಅರ್ಥವ್ಯವಸ್ಥೆಯ ಹಿಡಿತ ಮತ್ತು ಕ್ರೌರ್ಯವು 'ಕುರುಡು ಕಾಂಚಾಣ'ದಲ್ಲಿ ತೀವ್ರವಾಗಿ ಬಿಂಬಿತವಾಗಿದೆ. 'ಕುರುಡುಕಾಂಚಾಣ' ನುಡಿಗಟ್ಟು ಹಣದ ಒಟ್ಟು ಲಕ್ಷಣವನ್ನು ಧ್ವನಿಸಿದೆ. ಅದರ ತುಳಿತಕ್ಕೆ ಒಳಗಾದ ಅಸಹಾಯಕ ಕೂಲಿ ಕಾರ್ಮಿಕರ, ದೀನದಲಿತರ ಆಂತರಿಕ ಪ್ರಜ್ಞೆಯ ದನಿಯಾಗಿ ಈ ಕಾವ್ಯಹೊಮ್ಮಿದೆ. ಇದೊಂದು ಬೇಂದ್ರೆಯವರ ಶ್ರೇಷ್ಠ ಕವನವಾಗಿದೆ.

'ಕುರುಡು ಕಾಂಚಾಣ ಕುಣಿಯುತಲಿತ್ತು!
ಕಾಲಿಗೆ ಬಿದ್ದವರ ತುಳಿಯುತಲಿತ್ತೋ'

ಎಂಬ ಪಲ್ಲವಿ ಅದರ ಕಾಲಿಗೆ ಬಿದ್ದವರನ್ನು ಕುಣಿದು ಆಕರ್ಷಿಸುತ್ತಲೇ ತುಳಿವ ದಾರ್ಷ್ಟ್ಯ ಮತ್ತು ಕ್ರೌರ್ಯವನ್ನು ಚಿತ್ರಿಸಿದೆ.

ಬೇಂದ್ರೆಯವರು ಮಹಾಲಕ್ಷ್ಮಿಯ ಉಪಾಸಕರಾದ ಗೊಂದಲಿಗರ ಜೊತೆ 'ಕುರುಡು ಕಾಂಚಾಣ' ವನ್ನು ರೂಪಕವಾಗಿ ಬಳಸಿದ್ದಾರೆ. 'ಕುರುಡು ಕಾಂಚಾಣ'ದ ಗೊಂದಲಿಗ ಕುಣಿಯುವಾಗ ಸಾಬೂನಿನ ಬಿಳುಪಿನಂತಾದ ಸತ್ತ ಬಾಣಂತಿಯರ ಎಲುಬನ್ನು ಕಾಣದ ಕಿರುಗೆಜ್ಜೆಯಾಗಿ ಕಟ್ಟಿಕೊಂಡಿದ್ದಾನೆ ಎಂದಿದ್ದಾರೆ. ಅದು ಮಾತಿನಿಂದ ವರ್ಣಿಸಲಾಗದ ಶೋಷಣೆಗೆ ನೀಡಿದ ಅದ್ಭುತ ಪ್ರತಿಮೆಯಾಗಿದೆ. ಶೋಷಣೆಗೆ ಒಳಗಾಗಿ ನಿರ್ಜೀವವಾದ ಬಾಣಂತಿ ಎಲುಬು ಸಾಬಾಣದ ಬಿಳುಪಿನ ಪ್ರತಿಮೆಯಲ್ಲಿ ಶೋಷಣಾ ದನಿಯಾಗಿ ಹರಿದಿದೆ.

‘ಬಾಣಂತಿಯೆಲುಬ ಸಾ
ಬಾಣದ ಬಿಳುಪಿನಾ
ಕಾಣದ ಕಿರುಗೆಜ್ಜೆ ಕಾಲಾಗ ಇತ್ತೋ’

ಅದು ತೊಟ್ಟ ತೊಡಿಗೆ ಹಾಲುಸಿಗದೆ, ಆರೈಕೆಯನ್ನೇ ಕಾಣದೆ ಸತ್ತ ಕಂದಮ್ಮಗಳ ಕಣ್ಣಿನ ಕವಡೆಯಾಗಿದೆ ಎಂದಿದ್ದಾರೆ. ಕವಡೆಯನ್ನು ಹಿಡಿದು ನೋಡಿದರೆ ಅದು ಕಣ್ಣಿನ ಆಕೃತಿಯಲ್ಲಿರುತ್ತದೆ. ‘ಕುರುಡು ಕಾಂಚಾಣ’ ದ ಕೊರಳಲ್ಲಿ ‘ಸಣ್ಣ ಕಂದಮ್ಮಗಳ। ಕಣ್ಣೀನ ಕವಡೀಯ। ತಣ್ಣನ್ನ ಜೋಮಾಲೆ ಕೊರಕೊಳಗಿತ್ತೋ।’ ಎಂಬ ರೂಪಕ ನೀಡುತ್ತ ‘ತಣ್ಣನ್ನ ಜೋಮಾಲೆ’ ಎಂಬ ಶಬ್ದದಲ್ಲಿ ಸಾವಿನ, ಸಾವಿಗೆ ಕಾರಣವಾದ ಕ್ರೂರತೆಯನ್ನು ಧ್ವನಿಸಿದ್ದಾರೆ.

‘ಕುರುಡು ಕಾಂಚಾಣ ಒಂದು ಅದ್ಭುತವಾದ ಪ್ರತಿಮಾ ಭಾವಗೀತೆ’ ಎಂದು ಹೇಳುತ್ತ ಪ್ರಭುಶಂಕರ ಅವರು ‘ಪಾಶ್ಚಾತ್ಯ ಸಾಹಿತ್ಯವನ್ನು ಬಲ್ಲವರು ಹೇಳುತ್ತಾರೆ, ಅಲ್ಲಿಯೂ ಇಷ್ಟು ಕಿರಿದರಲ್ಲಿ ಈ ತತ್ವ ಇಷ್ಟು ಶಕ್ತಿ ಪೂರ್ಣವಾಗಿ ರಸವ್ಯಂಜಕವಾಗಿ ನಿರೂಪಿತವಾಗಿಲ್ಲ’ ಎಂದು ‘ಕನ್ನಡ ಭಾವಗೀತೆ’ ಕೃತಿಯಲ್ಲಿ ನುಡಿದಿದ್ದಾರೆ.

ವಿಶ್ವದ ಹಲವಾರು ಬಂಡವಾಳಷಾಹಿ ಬ್ಯಾಂಕುಗಳು, ಕಂಪನಿಗಳು ಮೋಸ ವಂಚನೆಯ ವ್ಯವಹಾರದಿಂದ ಮನಸೋ ಇಚ್ಛೆ ಕುಣಿದು ವಿಶ್ವ ವಾಣಿಜ್ಯ ವ್ಯವಸ್ಥೆ ಕುಸಿಯಲು ಕಾರಣವಾದವು. ನಮ್ಮ ದೇಶದಲ್ಲಿ ಹೇಗಾದರೂ ಹಣ ಮಾಡುವ ಪ್ರವೃತ್ತಿಗೆ ಒಳಗಾದ ಸತ್ಯಂ ಕಂಪ್ಯೂಟರ್ ಕಂಪನಿಯು ‘ಹ್ಯಾಂಗರೆ ಕುಣಿಕುಣಿದು ಮಂಗಾಟ ನಡೆದಾಗ’ ಅದು ತಾನೇ ತಾನಾಗಿ ಕುಸಿದು ಅಂಗಾತ ಬಿತ್ತು. ಆಗ ಅದನ್ನು ಎತ್ತಿ ಒಗೆಯಬೇಕಾಯಿತು.

ಈ ಹಿನ್ನಲೆಯಲ್ಲಿ, ಹಸಿವು ಅನ್ನವನ್ನು ಹಿಡಿತದಲ್ಲಿಟ್ಟುಕೊಂಡ ಶೋಷಕರ ಮರ್ಮ ಅರಿತಿದ್ದ ವಿಶ್ವವ್ಯಾಪಕ ಚಿಂತನಶೀಲ ವ್ಯಕ್ತಿತ್ವವುಳ್ಳ ಬೇಂದ್ರೆಯವರು ಶೋಷಕರು ತಮ್ಮ ತೋಲತಪ್ಪಿದ ವರ್ತನೆಯಿಂದ ತಾವೇ ಕುಸಿದು ನಾಶವಾಗುವುದನ್ನು ಸಮರ್ಥವಾಗಿ ಈ ಕವನದ ಕೊನೆ ನುಡಿಯಲ್ಲಿ ಬಿಂಬಿಸಿದ್ದಾರೆ.

'ಹ್ಯಾಂಗರೆ ಕುಣಿಕುಣಿದು
ಮಂಗಾಟ ನಡೆದಾಗ
ಅಂಗಾತ ಬಿತ್ತೋ, ಹೆಗಲಲಿ ಎತ್ತೋ' (ನಾದಲೀಲೆ)

* * *

ಬೇಂದ್ರೆಯವರಿಗೆ ಭಾರತೀಯ ಸಂಸ್ಕೃತಿಯ ಅನಿಷ್ಟವಾದ ಬಾಲ್ಯವಿವಾಹ ಹಾಗೂ ವಿಧವಾ ಪದ್ಧತಿ ನಿರ್ಮೂಲನೆಯ ತುಡಿತ ತೀವ್ರವಾಗಿತ್ತು. ಈ ಸಾಮಾಜಿಕ ಅನಿಷ್ಟ ಮುಗ್ಧ ಹೆಣ್ಣು ಮಕ್ಕಳನ್ನು ಶೋಷಿಸುವುದರ ವಿರುದ್ಧ ತೀವ್ರ ಆಕ್ರೋಶವಿತ್ತು. ಅದಕ್ಕೆ ತೀಕ್ಷ್ಣವಾಗಿ ಸ್ಪಂದಿಸಿದ ಕವಿ ಹೃದಯ ಕನ್ನಡ ಸಾಹಿತ್ಯಕ್ಕೆ ಅಪೂರ್ವವಾದ 'ಪುಟ್ಟವಿಧವೆ' ಕವನ ನೀಡಿದೆ. ಈ ಕವನದ ಒಂದು ವೈಶಿಷ್ಟ್ಯವೆಂದರೆ ಈ ಕವನವನ್ನು ಓದುತ್ತಿದ್ದಂತೆ ಪ್ರತಿಪದ, ಪದಪುಂಜಕ್ಕೂ ಸಹೃದಯನ ಮನದಲ್ಲಿ ಆ ಮಾತಿಗೆ Negative (ಋಣಾತ್ಮಕ) ಆದ ನುಡಿ ಎಚ್ಚತ್ತು ಇದು ಹೀಗಾಗಬಾರದಾಗಿತ್ತು ಎಂದು ಹೇಳಿಕೊಂಡು ಸಾಗುತ್ತದೆ. ಓದುಗನು ಕವನದ ಒಂದು ಭಾಗವಾಗಿ ಪುಟ್ಟ ವಿಧವೆಯ ಒಟ್ಟು ಅಸಹಾಯಕತೆಗೆ ನೋಯುತ್ತ ವ್ಯವಸ್ಥೆಯ, ಧಾರ್ಮಿಕ ಕ್ರಿಯೆಯ ವಿರುದ್ಧ ಸಿಡಿದೇಳುತ್ತಾನೆ.

'ಕುರಡು ಧರ್ಮಕ್ಕೆ ಸ್ಮಾರಕವು ನಿಂತಂತಾಕೆ
ಮೈ ಮರೆತು ನಿಂತಾಗ್ಗೆ ಗೂಗೆ ಹಾಡಿತ್ತು.

ಮುದ್ರೆಯೊತ್ತುವ ಕಣ್ಣು ಮೋರೆ ನೋಡಿತ್ತೊಮ್ಮೆ,
ಜಾರಕೃಷ್ಣನ ಕಥೆಗೆ ಕೋಡು ಮೂಡಿತ್ತು! '

ಎಂದು ಸಾಮಾಜಿಕ ಅನಿಷ್ಟವಾದ ವಿಧವಾ ಪದ್ಧತಿಯಿಂದ ಅನೈತಿಕ ಘಟನೆಗಳು ಘಟಿಸಲು ಧಾರ್ಮಿಕ ಆಚರಣಾ ವ್ಯವಸ್ಥೆಯ, ಸಾಮಾಜಿಕ ಪ್ರತಿಬಂಧವನ್ನು ವಿಧಿಸುವ, ವಿಧವೆ ಎಂಬ Seal ಅನ್ನು ಅವಳ ಮುಖದ ಮೇಲೆ ಒತ್ತುವವನೇ ಜಾರ ಕೃಷ್ಣನ ಕಥೆಗೆ ಕೋಡು ಮೂಡಲು ಕಾರಣವಾಗುತ್ತಾನೆ. ಸಮಾಜದಲ್ಲಿ ಈ ತರಹದ ಕಾರಣದಿಂದ ಜಾರ ಕೃಷ್ಣರು ಹೆಚ್ಚುತ್ತಾರೆ ಎಂದು ಕಾವ್ಯ ಧ್ವನಿಸಿದ್ದನ್ನು ಓದುಗ ಅರಿತು, ಅವನ ಮನಸ್ಸು ಸಾಮಾಜಿಕ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುತ್ತದೆ. ಅವಳಿಗೆ ಮದುವೆ ಮಾಡಬೇಕಾಗಿತ್ತು ಎಂಬ ಸಾಮಾಜಿಕ ಸುರಕ್ಷತೆಯ ಕಡೆಗೆ ಮುಖ ಮೂಡಿಸುತ್ತದೆ.

ಸುಲಕ್ಷಣವಾದುದನ್ನು ವಿಲಕ್ಷಣ ಮಾಡುವ ಸಾಮಾಜಿಕ ವ್ಯವಸ್ಥೆ, ಪ್ರಕೃತಿಯ ಕರೆಗಳು ಅನೈತಿಕ ರೂಪದಲ್ಲಿ ಚಲಾವಣೆಗೆ ಬರುವ ಈ ಹೀನ ವ್ಯವಸ್ಥೆ ಸರಿಯಲ್ಲ ಎಂದು ಓದುಗ ಹೇಳುತ್ತಾನೆ. ಹೀಗೆ ಈ ಕವಿತೆ ಓದುಗನನ್ನು ಸಮಾಜಮುಖಿಯಾಗಿ, ವ್ಯವಸ್ಥೆಯ ಚಿತ್ರಣದಲ್ಲಿಯೇ ವ್ಯವಸ್ಥೆಯ ವಿರುದ್ಧ ಬಂಡೇಳುವ ಮನಸ್ಸನ್ನು ಸೃಷ್ಟಿಸುವ ಅಪೂರ್ವ ಕಾವ್ಯವಾಗಿದೆ.

ವಿಧವೆಯ ಸಮಸ್ಯೆಯನ್ನು ಕುರಿತು ಬೇಂದ್ರೆಯವರು 'ಹೆಣದ ಹಿಂದೆ' ಎಂಬ ಇನ್ನೊಂದು ಕವನವನ್ನು ಬರೆದಿದ್ದಾರೆ. ಅದೊಂದು ದೀರ್ಘ ಕವನವಾಗಿ ವಿಧವೆಯ ನೋವನ್ನು ಎಳೆಎಳೆಯಾಗಿ ಬಣ್ಣಿಸಿ ಅವಳ ಮತ್ತು ಅವಳ ಕೂಸಿನ ಸ್ಥಿತಿಗೆ ಕಳವಳ ವ್ಯಕ್ತಪಡಿಸಿದೆ. ಆ ತಾಯಿ ತನ್ನ ಕರುಳಕುಡಿಗಾಗಿ ಜೀವ ಓಡಿದು ನೊಂದ ಭಾವ ಹೀಗಿದೆ :

'ಹೊಟ್ಟೆಯಿಂದ ಬಂದ ಒಂದು
ಮರುಳು ಕರುಳು ಇಲ್ಲದಿದ್ದರೆಷ್ಟು ಒಳಿತು ಆಗುತಿತ್ತು!
ಇಲ್ಲದಿರುವದೊಂದೆ ಒಳಿತು.
ಇದ್ದು ಸುರಿದು ಕೊಂಡುದೇನು ?
ಗಂಡು ಹೆಣವು– ಹೆಣ್ಣು ಅಳುವು,
ಬಾಳು ಕಾಡು–ಕೂಸು ಪಶುವು.' (ನಾದಲೀಲೆ)

ಬೇಂದ್ರೆಯವರು ಆ ವಿಧವೆಯು ಜೀವನವನ್ನು ಎದುರಿಸುವವಳಾಗಬೇಕು, ಅದಕ್ಕೆ ಅವಳಲ್ಲಿ ತಾಳ್ಮೆ ಬೇಕು ಎಂದಿದ್ದಾರೆ. ಅವಳ ದಾರುಣ ಸ್ಥಿತಿಯಲ್ಲಿ ತಾಳ್ಮೆ ಎಂಬುದು ವೇದಾಂತದ ಒಣ ಮಾತಾಗದೆ, ದುಃಖದಿಂದ, ಜೀವನ ವಿಮುಖತೆಯಿಂದ ಅವಳು ಮೇಲೇಳಲು ಬೇಕಾದ ಮಾನಸಿಕ ಸಿದ್ಧತೆಯಾಗಿದೆ. ಆದ ಕಾರಣ ಕವಿ ನುಡಿದಿದ್ದಾರೆ :

'ಭೂಮಿತಾಯಿಯಂತೆ ನಿನಗೆ
ತಾಳ್ಮೆಯೊಂದೆ ಬಾಳ್ಮೆಯಹುದು.'

ಈ ಕವನವನ್ನು ಕುರಿತು ವಿ.ಕೃ. ಗೋಕಾಕರು

"His 'Behind a corpse' is unquestionably one of the noblest poems in kannada" ಎಂದು ಹೇಳಿದ್ದಾರೆ.

OOO

೧೦. ಆತ್ಮದ ಅರಿವಿನ ಗೀತಗಳು

ಬೇಂದ್ರೆಯವರು ಭಕ್ತಕವಿಯಾಗಿ, ಸಾಧಕರಾಗಿ, ಆಧ್ಯಾತ್ಮಿಕ ಚಿಂತನೆಯನ್ನು ಕಾವ್ಯಾನುಭವವಾಗಿಸಿದ ಸಿದ್ಧರು. ಆತ್ಮ-ಪರಮಾತ್ಮನ ಆಲೋಚನೆ ಅವರಿಗೆ ಒಂದು ಅನುಭವವಾಗಿ ಅದರ ಅಭಿವ್ಯಕ್ತಿ ಕಾವ್ಯವಾಗಿ ಹರಿದಿದೆ. ಅವರು ಚಿದಂಬರ ದೀಕ್ಷಿತ, ಗೋಂದಾವಲೇಕರ ಮಹಾರಾಜ, ಅಕ್ಕಲಕೋಟ ಮಹಾರಾಜ, ಶ್ರೀ ಅರವಿಂದ ಮತ್ತು ಶ್ರೀ ಮಾತೆ, ಗುಳವಣಿ ಮಹಾರಾಜ, ಪ್ರಭಾಕರ ಮಹಾರಾಜ, ನಿತ್ಯಾನಂದ ಉಪಳೇಕರ ಮಹಾರಾಜರನ್ನು ಗುರುಗಳೆಂದು ಸ್ವೀಕರಿಸಿದ್ದರು. ಅವರು ವೇದ ಉಪನಿಷತ್ತುಗಳ ಆಳ ಅಧ್ಯಯನದೊಂದಿಗೆ ಪಾಶ್ಚಾತ್ಯ ತತ್ವ ಚಿಂತಕರಾದ ಯೇಟ್ಸ್ , ಜಾರ್ಜ್‌ರಸಲ್ (ಏ.ಈ), ಖಲೀಲ್ ಗಿಬ್ರಾನ್‌ರ ಸಾಹಿತ್ಯವನ್ನು ಚೆನ್ನಾಗಿ ತಿಳಿದಿದ್ದರು.

ಅವರು ಅಂತರಾತ್ಮನ ಅರಿವಿನಲ್ಲಿ ಈ ನೆಲದ ಬದುಕಿನ ನೋವು ನಿರಾಸೆ, ದುಗುಡ ದುಮ್ಮಾನ, ಹಿಗ್ಗು ಕುಗ್ಗು, ದುಃಖ ಸಂತೋಷವನ್ನು ಒಂದು ಅಂತರದಲ್ಲಿ ನಿಂತು ನೋಡುತ್ತ ಬಂದರು.

'ಭವದ ಬೆನ್ನಲಿ ಅನುಭವ ಬಂತು, ಅನುಭಾವ
ಭಾವದ ತಳಿಯಲ್ಲಿ ಮೈದೋರಿತು
ಸಹಾನುಭೂತಿಗೆ ಸ್ವಾನುಭೂತಿಯು ಕೂಡಿ
ಉದ್ಭವ ವಿಭೂತಿಯು ಒಡಮೂಡಿತು.'

(ಬಾಲ್ಯಕಾಂಡ : ಮತ್ತೆ ಶ್ರಾವಣಾ ಬಂತು)

ಎಂದು ಅಧ್ಯಾತ್ಮದ ವಿಭೂತಿಯಲ್ಲಿ ಮಿಂದರು. ತನ್ನೊಳಗಿನ ನಿರಂತರ ನಿಧಿಯಾದ ಸಂತೋಷ, ಪ್ರೀತಿ, ಶಾಂತಿಗಳನ್ನು ದಿನದಿನದ ಸೊಬಗು ಎಂದು ಆಸ್ವಾದಿಸಿದರು. ಹತಾಶೆ, ಅಹಂನಿಂದ ದೂರವಾಗಿ ಜಗದ ಸತ್ಯದ ಶೋಧದಲ್ಲಿ ಸದಾ ಇದ್ದು, ಉಲ್ಲಸಿತರಾಗಿ ಬದುಕಿ ಬಾಳಿದರು. ತಮ್ಮ ಪಾಡನ್ನು ಹಾಡಾಗಿಸಿ ರಸಿಕರ ಮನದ ಕವಿಯಾದರು. 'ನಿಜವ ಕಂಡವರಿಲ್ಲ। ನಿಜ ಕಾಣುವಂತಿಲ್ಲ । ನಿಜವೇನು ಮಳಲಹುಡಿಗಿಂತ ಕೀಳೇ ।' ಎಂದು ಪ್ರಶ್ನಿಸುತ್ತ ನಿಜದ ಪ್ರಕಾಶವನ್ನು ತಮ್ಮ ಕಾವ್ಯದಲ್ಲಿ ಕಂಗೊಳಿಸಿದರು.

* * *

ಮನುಷ್ಯನ ಜೀವಿತದಲ್ಲಿ ಹುಟ್ಟು ಸಾವಿನ ಎರಡು ದಂಡೆ ಇದೆ. ಅದರಂತೆ ಅವನ ಬಾಳಿಗೆ ಲೌಕಿಕ ಅಲೌಕಿಕ ಎಂಬ ಎರಡು ದಡಗಳಿವೆ. ಈ ದಡದತ್ತ ನಿಂತ ವ್ಯಕ್ತಿ ಲೌಕಿಕ ವ್ಯಾಪ್ತ ಜೀವನ (ನೀರು)ವನ್ನು ಅವಲೋಕಿಸುತ್ತ, ಇನ್ನೊಂದು ದಡ ತನ್ನಿಂದ ಪ್ರತ್ಯೇಕವಲ್ಲ ಎಂಬ ಭಾವದಲ್ಲಿ ಬದುಕುತ್ತಿದ್ದರೆ ಅದೇ ಅಧ್ಯಾತ್ಮ.

'ಬಂಗಾರ ನಿರ ಕಡಲಾಚೆಗೀಚೆಗಿದೆ ನೀಲ ನೀಲ ತೀರಾ
ಮಿಂಚು ಬಳಗ ತೆರೆತೆರೆಗಳಾಗಿ ಅಲೆಯುವದು ಪುಟ್ಟಪೂರಾ.
ಅದು ನಮ್ಮ ಊರು, ಇದು ನಿಮ್ಮ ಊರು, ತಂತಮ್ಮ ಊರೊಧೀರಾ.
ಅದರೊಳಗೆ ನಾವು, ನಮ್ಮೊಳಗೆ ತಾವು, ಅದು ಇಲ್ಲವಣ್ಣ ದೂರಾ.'

ಅಧ್ಯಾತ್ಮವೆಂದರೆ ನಮ್ಮ ಶರೀರ, ಮನಸ್ಸು, ಬುದ್ಧಿಗಳು ಒಂದಾಗಿ ಬಾಳಿ ಬದುಕುತ್ತ ಅದರ ಮೂಲತತ್ತ್ವವನ್ನು ಅರಸುವ ಜಗದ ಚಾಲಕ ಶಕ್ತಿಯ ಶೋಧ. 'ಅದು ಬದುಕಿನಿಂದ ಪ್ರತ್ಯೇಕವಾದುದೆ?'ಯೆಂದರೆ 'ಅಲ್ಲ' ಎಂಬುದು ಬೇಂದ್ರೆ ಚಿಂತನೆ.

'ಕರೆ ಬಂದಿತಣ್ಣ, ತೆರೆಬಂದಿತಣ್ಣ, ನೆರೆ ಬಂದಿತಣ್ಣ ಬಳಿಗೆ,
ಹರಿತsದ ಭಾವ, ಬೆರಿತsದ ಜೀವ, ಅದರೊಳಗೆ ಒಳಗೆ ಒಳಗೆ'
(ಹೃದಯ ಸಮುದ್ರ)

* * *

೧೯೨೪ರಲ್ಲಿ ಬೇಂದ್ರೆಯವರಿಗೆ ಕನಸಿನಲ್ಲಿ ಬಂದ 'ಏಳು ಕನ್ನಿಕೆಯರು' ೧೯೩೩ರಲ್ಲಿ ಕವನರೂಪ ತಾಳಿದ್ದಾರೆ. ಹಾಗಾಗಿ ಈ ಕವನದಲ್ಲಿ ವಿಸ್ತಾರವಾದ ಕನಸಿನ ವರ್ಣನೆ ಒಂಬತ್ತು ನುಡಿಗಳಲ್ಲಿದ್ದು; ವಾಸ್ತವದ ಆಲೋಚನೆ ಕೊನೆಯ ಎರಡು ನುಡಿಗಳಲ್ಲಿವೆ. ಈ ಕವನವು ನಿದ್ದೆ ಎಚ್ಚರ, ಲೌಕಿಕ ಅಲೌಕಿಕ, ನೈತಿಕ ಅನೈತಿಕ ಏಳುಬೀಳುಗಳ ದ್ವಂದ್ವಗಳಿಂದ ಕೂಡಿದೆ. ಆ ದ್ವಂದ್ವ ಸಂಘರ್ಷ ಮನೋಭಾವಗಳ ತಾಕಲಾಟದಲ್ಲಿ ತಾತ್ವಿಕ ಚಿಂತನೆ ಅಡಗಿದೆ. ಕವಿಯು ನಿದ್ದೆಗಡಲಿನಲ್ಲಿರುವಾಗ ಏಳು ಕನ್ನಿಕೆಯರು ಬಂದು 'ಏಳು' ಎಂದು ಎಬ್ಬಿಸುವರು. ಆಗ ಕವಿಯು ಆ ದೇವತೆಗಳ ದಿವ್ಯ ಸನ್ನಿಧಿ ತನಗೆ ದೊರಕಿತೆಂದು ಏಳುತ್ತಾನೆ. ಆ ದೇವತೆಗಳು ದೀಪಮಾಲೆ ಕಂಬದಂತೆ ಸುತ್ತುವರಿದಿದ್ದಾರೆ. ಆ ತೇಜ ಅಡೆತಡೆ ಇಲ್ಲದೆ ಹರಿಯುತ್ತಿರಲು ಅದನ್ನೆ ಒರಗಿ ಆ ಬೆಳಕಿನ ಕುಡಿ ಕುಡಿಯಲು ತಾನು ಗೊಮ್ಮಟನಂತೆ ನಿಲ್ಲುತ್ತಾನೆ. ಗೊಮ್ಮಟ ಪ್ರತಿಮೆಯು ಜಿತೇಂದ್ರಿಯತ್ವದ, ವೀರ, ತ್ಯಾಗ, ಊರ್ಧ್ವ ಗಾಮಿತ್ವದ ಅಧ್ಯಾತ್ಮ ಸಂಕೇತವಾಗಿದೆ.

'ನಿಂತೆ ನಡುವೆ ಗೊಮ್ಮಟನೊಲು
ನಿಂತರವರು ಒರಗಿಸುತ್ತು
ದೀಪಮಾಲೆ ಕಂಬದಲ್ಲಿ
ದೀಪದಕುಡಿ ಕುಡಿಯೊಲೋ-ದೀಪದಕುಡಿ ಕುಡಿಯೊಲು'
(ನಾದಲೀಲೆ)

ಸಾಧನಾಮಾರ್ಗ ಎಂಬುದು ಎಲ್ಲ ಲೌಕಿಕವಾದ, ಸಾಂಸಾರಿಕ, ಭೌತಿಕ ಆಸೆ ಅಕಾಂಕ್ಷೆಗಳ ತೇವಾಂಶಗಳನ್ನು ಇಲ್ಲವಾಗಿಸಿಕೊಂಡ ಗರಿಗರಿಯಾದ ಹಂಸಮಾರ್ಗ. ಆ ನೆಲೆಯಲ್ಲಿ ಸಾಧಕ ತನಗೆ ಅಂಟಿದ ದ್ರವರೂಪಿ ಮನಃಕಷಾಯದಿಂದ ಮುಕ್ತನಾಗಲು 'ಬೊಟ್ಟು ನೀರು ಬಿಡದ ಹಾಗೆ । ಬಟ್ಟೆಯಂತೆ ಹಿಂಡುತಿರಲು' ಏಳು ಕನ್ನಿಕೆಯರಲ್ಲಿ ಒಬ್ಬಳು ಅವನ ಏರು ಮನಸ್ಸನ್ನು ತೀವ್ರ ಪರೀಕ್ಷೆಗೆ ಒಳಪಡಿಸುತ್ತಾಳೆ.

'ತೊಡೆಯ ಮೀಂಟಿ ಬಿಟ್ಟಳಾಗ
ಕಡೆಗೆ ಅವರೊಳೊಬ್ಬಳೋ–ಕಡೆಗೆ ಅವರೊಳೊಬ್ಬಳು'

ಆ ಕ್ಷಣವೆ ಜಂಗಮ ನೆಲೆಯಲ್ಲಿ ಸಾಧನಾ ಮಾರ್ಗಕ್ಕೆ ಮೇಲ್ಮುಖವಾದ ಮನಸ್ಸನ್ನು ಹೊತ್ತ ಸ್ಥಾವರರೂಪಿ ಮೃಣ್ಮಯ ಶರೀರ ತನ್ನ ನೆಲದ ಗುಣದಿಂದ ಅಲುಗಾಡಿ ಹೋಗುತ್ತದೆ. ಲೈಂಗಿಕ ಆಸೆಗೆ ಒಳಗಾಗುತ್ತದೆ. ಆಗಿನ ಭಾವವನ್ನು 'ಮೈಯೆ ಬಾಯಿಬಿಟ್ಟಹಾಗೆ! ಬೆವರು ಬಂದು ಮೈಯ ತುಂಬ' ಎಂಬ ಪ್ರತಿಮೆಗಳಲ್ಲಿ –ಅವನು ನೆಲದ ಸ್ತರಕ್ಕೆ ಇಳಿದುಹೋದುದನ್ನು ಕವಿ ಚಿತ್ರಿಸಿದ್ದಾರೆ.

'ಬೆಳಕಿನ ಕುಡಿ ಆರುವಂತೆ
ಚಳಕದ ಕನ್ಯೆಯರು ಹಾರೆ,
ಹೇಡಿಮಣ್ಣ ಕಂಬದಂತೆ
ಗಾಡಿಯಳಿದು ಬಿದ್ದೆನೋ–ಗಾಡಿಯಳಿದು ಬಿದ್ದೆನು.'

ಗೊಮ್ಮಟನಂತೆ ಅಚಂಚಲತ್ವಕ್ಕೆ ಸ್ಥಿತಪ್ರಜ್ಞನಾಗಿ ಏರುಮುಖ ವಾಗಬೇಕಾದ ಶರೀರ ಹೇಡಿಮಣ್ಣಕಂಬದಂತೆ ಕುಸಿದು ಹೋಯಿತು. ವೇಗ ಚಾತುರ್ಯದ ಬೆಳಕಿನ ಕುಡಿಯಾದ ಏಳು ಕನ್ನಿಕೆಯರು ಹಾರಿ ಹೋಗಲು ಅಧ್ಯಾತ್ಮದ ಸೊಬಗು ಕಳಚಿ ಹೋಯಿತು.

ಇದು ಆಧ್ಯಾತ್ಮ ಸಾಧಕನ ಪ್ರಾರಂಭದ ಸೋಲಿನ ಸಾಂಕೇತಿಕ ಕವನವಾಗಿದೆ. ಅವನ ಸೋಲುಗಳನ್ನು ಬೇಂದ್ರೆಯವರು ವಿರುದ್ಧ ಪ್ರತಿಮೆಗಳಲ್ಲಿ ಸಮರ್ಥವಾಗಿ ಹಿಡಿದಿಟ್ಟಿದ್ದಾರೆ. ಆತ್ಮ ಪರೀಕ್ಷೆಗೆ ಒಳಗಾಗಿ ಅದರಲ್ಲಿ ಯಶಸ್ವಿಯಾದ ನಂತರ ಆತ್ಮಶೋಧನೆಗೆ ಒಳಗಾಗಬೇಕಾದುದು ತತ್ವ ದರ್ಶನದ ಮೊದಲ ಮೆಟ್ಟಲು. ಆ ಶೋಧ ಇಲ್ಲಿ ಕಾವ್ಯಾನುಭವವಾಗಿದೆ.

* * *

'ಅದುವರೆಗೂ' ಬೇಂದ್ರೆಯವರು ಸೆರೆವಾಸವಿದ್ದಾಗಿನ ವೇದನಾನುಭವದ ಕವನ. ಅದರ ಪ್ರಥಮ ನುಡಿಯ 'ನಿಟ್ಟುಸಿರಿ ತಿದಿ' 'ಹೊತ್ತುತಿರುವ ಎದೆ' 'ಕಣ್ಣೀರಿನ ಕುದಿ' ಪ್ರತಿಮೆಗಳಲ್ಲಿ ಜೀವ ಬೇಯುವುದನ್ನು ಹೇಳಿರುವ ಒತ್ತಡ, ಕಾವು, ವೇದನೆ ಸಹೃದಯನಿಗೆ ತಟ್ಟುವಂತಿದೆ.

ಅಂತಹ ದಾರುಣ ಸ್ಥಿತಿಯಲ್ಲಿ ಕಾಯುವ 'ದೈವ' ಒಂದಿದೆ ಎಂಬ ಭರವಸೆ ಈ ಕವನದ ಎರಡನೆಯ ನುಡಿಯಲ್ಲಿದೆ. ಅದು ಬೇಂದ್ರೆಯವರ ದೈವದಲ್ಲಿನ ಅಚಲ ಶ್ರದ್ಧೆಯ ಮಿಡಿತ, ತುಂಬು ಆಶಾವಾದ.

'ತೊಗಲ ಮೈಯ ಮರೆಯಲ್ಲಿ
ಒಳ ಉಸಿರಿನ ಬರೆಯಲ್ಲಿ
ನಿದ್ದೆ ನೀರ ತೆರೆಯಲ್ಲಿ
ದೇವ ಕಾಯುತಿರುವನು.' (ನಾದಲೀಲೆ)

ಆ ದೈವದ ಶಕ್ತಿ ಬಂದು ಪೋಷಿಸುವ ಬಗೆಯೆಂದರೆ ತೆರೆಮರೆಗಳನೆತ್ತರಿಸಿ, ತೊಡಕುಗಳನು ಕತ್ತರಿಸಿ, ಅವನ ಬೆಳಕು ಬಿತ್ತರಿಸುವುದು. ದೈವದ ಶಕ್ತಿ ಗಟ್ಟಿಯಾಗಿದ್ದು

ಅಪಾರವಾದುದಾಗಿದೆ. ಈ ಪ್ರಪಂಚ ಮತ್ತು ಇದರ ಜೀವಿಗಳು ಟೊಳ್ಳಾಗಿದ್ದು ಮಿತಿಗೊಳಪಟ್ಟಿದ್ದಾರೆ ಎಂಬುದನ್ನು 'ಅಲಗು' 'ಗಲಗು' ಪ್ರತಿಮೆಗಳಲ್ಲಿ ಧ್ವನಿಸಿದ್ದಾರೆ.

'ಆ ಶಕ್ತಿ ಅಲಗಿನಂತೆ
ಈ ಪ್ರಪಂಚ ಗಲಗಿನಂತೆ'

ದೈವದ ಶಕ್ತಿಯೆಂಬುದು ಕತ್ತಿಯ ಹರಿತವಾದ ಅಂಚು ಅಲಗಿನಂತೆ. ಈ ಪ್ರಪಂಚ ಗಲಗು-ಲೇಖನಿಗಳನ್ನು ಮಾಡಲು ಬಳಸುವ ಟೊಳ್ಳಾಗಿರುವ ಒಂದು ಬಗೆಯ ಬೆತ್ತ -ಟೊಳ್ಳಾದುದು. ಆದ ಕಾರಣ ಆ ಶಕ್ತಿ ಬಂದು ಪೊರೆಯುವವರೆಗೂ ಮಲಗಿದಂತೆ ಸಹನೆಯಿಂದಿರೋಣ ಎಂದಿದ್ದಾರೆ. ಈ ಕವನವು ಜೀವನದಲ್ಲಿ ತಾಳ್ಮೆ ಅತಿ ಅವಶ್ಯಕ ಎಂಬ ಚಿಂತನೆಯ ರೂಪಕವಾಗಿದೆ.

* * *

ಬೇಂದ್ರೆಯವರು ಅಧ್ಯಾತ್ಮಿಕ ಜಿಜ್ಞಾಸೆಯ 'ನಾಲಗೆ' 'ನಾಯಕ', 'ನಿದ್ದೆ' ಇದೊಪಂಜರ' 'ಎದೆಯ ಒಕ್ಕಲಿಗ' 'ಅರಳುಮರಳು' ಕವನಸಂಕಲನದಲ್ಲಿಯ ಕವನಗಳು; 'ಜೋಗಿ', 'ನಾಕುತಂತಿ,' 'ಮತ್ತೆ ಬಂತು ಶ್ರಾವಣಾ' ಮುಂತಾದ ಹಲವಾರು ಕವನಗಳನ್ನು ರಚಿಸಿದ್ದಾರೆ. ಭಾರತೀಯ ತಾತ್ವಿಕ ಚಿಂತನೆ ಹರಳುಗಟ್ಟಿದ ಅವರ ಕಾವ್ಯದಲ್ಲಿ 'ಸಚ್ಚಿದಾನಂದ' (ರಚನೆ : ೧೯೩೨, ಮುಗದ)ವು ಒಂದಾಗಿದೆ. ಜೀವಾತ್ಮ ಪರಮಾತ್ಮರ 'ಶರಣಸತಿ ಲಿಂಗಪತಿ' ತತ್ವವು ಇಲ್ಲಿ ಸಂವಾದವಾಗಿ ಹರಿದು 'ಸಚ್ಚಿದಾನಂದ'ವಾಗಿದೆ.

ಸಚ್ಚಿದಾನಂದವೆಂದರೆ ಬ್ರಹ್ಮತತ್ವ. ಆಧ್ಯಾತ್ಮಿಕ ಜೀವನದ ಸಪ್ತಸ್ತರಗಳ ಅತ್ಯಂತ ಉನ್ನತ ಸ್ತರ. ಸತ್‌ದಿಂದ ಜಡ, ಚಿತ್‌ದಿಂದ

ಪ್ರಾಣ, ಆನಂದದಿಂದ ಚೇತನ, ಅತಿಮಾನಸದಿಂದ ಮನಸ್ಸು ಹೀಗೆ ಸಚ್ಚಿದಾನಂದವೆಂದರೆ ಬ್ರಹ್ಮತತ್ವದಿಂದಲೇ ಮನುಷ್ಯನ (ಜಡ) ಅನ್ನಮಯ ಕೋಶ, ಪ್ರಾಣಮಯಕೋಶ, ಚೇತನ ಹಾಗೂ ಮನಸ್ಸು ಸಿದ್ಧವಾದವು. ಇವೆಲ್ಲ ಮತ್ತೆ ಆರೋಹಣಗೊಂಡು ಸಚ್ಚಿದಾನಂದದಲ್ಲೇ ಒಂದಾಗ ಬೇಕಿದೆ. ಈ ರೀತಿ ಮೊದಲು ಸಚ್ಚಿದಾನಂದದಿಂದ ಅವತರಣ, ನಂತರ ಸಚ್ಚಿದಾನಂದದತ್ತ ಆರೋಹಣ ನಿರಂತರ ನಡೆಯುತ್ತಲೇ ಇದೆ.

ಇಲ್ಲಿ ಮನುಷ್ಯನ ದೇಹ, ಪ್ರಾಣ, ಚೇತನ ಹಾಗೂ ಮನಸ್ಸುಗಳಿಂದೊಡಗೂಡಿದ ಜೀವ-ಸಚ್ಚಿದಾನಂದನೊಂದಿಗೆ ಸಂವಾದ ಹೂಡಿದೆ. ಸಚ್ಚಿದಾನಂದನ ಬೆಳಕಿನೊಂದಿಗೆ ಒಂದಾಗಲು ಹಾತೊರೆಯುತ್ತಿದೆ. ಅದಕ್ಕೆ ಉತ್ತರವಾಗಿ ಸಚ್ಚಿದಾನಂದನೂ ಉತ್ಸಾಹದ ನುಡಿಯಾಡುತ್ತಾನೆ. ಹೀಗೆ ಇಲ್ಲಿ ಜೀವ ಸತಿಯಾದರೆ ಸಚ್ಚಿದಾನಂದ ಪತಿಯಾಗಿದ್ದಾನೆ.

ಒಳಹೊರಗು ಬೆಳಕು ನಾನಿರಲು ಯಾಕನಿನ ಹಣತಿs
ಬಾರ ನನಗೆಣತಿ !!
ತೆರಿ ತೆರೀ ನಿನ್ನ ಎದಿಕದಾ ಬಂದಿತ ಹದಾ
ಕೇಳ ಈ ಪದಾ । ಕೇಳ ಈ ಪದಾ ।
ಗುರುದತ್ತ ಸಚ್ಚಿದಾನಂದ । ಸಚ್ಚಿದಾನಂದ ಸಚ್ಚಿದಾನಂದ ।
ಸಚ್ಚಿದಾನಂದೋಂ ॥ ಸಚ್ಚಿದಾನಂದ ॥ (ನಾದಲೀಲೆ)

OOO

೧೧. ವ್ಯಕ್ತಿ ವಿಶಿಷ್ಟ ಕವನಗಳು

ಬೇಂದ್ರೆಯವರು ತನ್ನ ಅರಿವನ್ನು ವಿಸ್ತರಿಸಿದ ಗುರುಗಳಾದ ಶ್ರೀ ಬ್ರಹ್ಮ ಚೈತನ್ಯ ಗುರು ಗೋಂದಾವಲೇಕರ, ಯೋಗಿ ಶ್ರೀ ಅರವಿಂದ, ಶ್ರೀಮಾತೆ, ರವೀಂದ್ರನಾಥ ಠಾಗೂರ್, ಮಹಾತ್ಮಾಗಾಂಧಿ ಮುಂತಾದವರನ್ನು ತಮ್ಮ ಕಾವ್ಯದಲ್ಲಿ ಧ್ಯಾನಿಸಿದ್ದಾರೆ. ಅವರು ಹಿಂದಿನ ಕವಿಗಳಾದ ಪಂಪ, ಅಲ್ಲಮಪ್ರಭು, ರತ್ನಾಕರ, ಕನಕ, ಮುದ್ದಣ ಮುಂತಾದವರ ಕಾವ್ಯ ಪರಂಪರೆಯನ್ನು ನೆನೆಯುತ್ತ ಕವನಗಳನ್ನು ರಚಿಸಿದ್ದಾರೆ.

ಶ್ರೀ ಮಾತಾರವಿಂದರ ತತ್ವದಿಂದ ಬೇಂದ್ರೆಯವರ ಮನಸ್ಸು ಪಾಕಗೊಂಡಿದೆ. ಅವರು ತಮ್ಮನ್ನು 'ಅರವಿಂದ ಮಯನಾದ ಮಾನಸವು' ಎಂದು ಕರೆದುಕೊಂಡು 'ಶ್ರೀ ಗುರುವರೇಣ್ಯ, ನೀನೆ ಶರಣ್ಯ' ಎಂಬ ಶರಣ ಭಾವದ ಕವನ ರಚಿಸಿದ್ದಾರೆ. ಸರ್ವಸಮರ್ಪಣ ಭಾವದಿಂದ 'ಅರವಿಂದನಾಭನ ಪಾದಾರವಿಂದಕ್ಕೆ' ಎಂಬ ಕವನ ರಚಿಸಿ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ.

'ಅರವಿಂದನಾಭನ ಪಾದಾರವಿಂದಕೆ ಹಸ್ತಾರವಿಂದವು ಬಾಗುತಿರೆ,
ನಯನಾರವಿಂದವು ಮುಚ್ಚಿಕೊಂಡಿರುವಾಗ ಹೃದಯಾರವಿಂದವು ಅರಳಲಿರೆ
ಆಸ್ಯಾರವಿಂದವು ನಲಿವನು ಸೂಸುವ ತೆರ ನಿನಗೆ ಸೂಸಲಿ ಮಂಗಲವು
ಎಂದಿತು ಅರವಿಂದ ಪದಭೃಂಗ ಅರವಿಂದು! ಅರವಿಂದಮಯವಾದ
ಮಾನಸವು.

(ಹೃದಯ ಸಮುದ್ರ)

ಶ್ರೀಮಾತಾ ಅವರನ್ನು ಪ್ರಾರ್ಥಿಸಿ ಬೇಂದ್ರೆಯವರು ಹಲವಾರು ಕವನಗಳನ್ನು ರಚಿಸಿದ್ದಾರೆ. 'ಪಾದಪದ್ಮಕೆ ಪ್ರಾರ್ಥನೆ' ಎಂಬ ಕವನದಲ್ಲಿ ಅವರು ಮಣಿದು ಪ್ರಾರ್ಥಿಸುವ ಬಗೆ ಇಂತಿದೆ :

ಬೆಣ್ಣೆ ಹಾಲಲಿ ಏಳುವಂದದಿ ಎತ್ತು ನಿನ್ನಾ ಬಳಿಗೆ.
ಅಡಿಗಡಿಗೆ ನಾ ಮಣಿವೆ ತಾಯಿಯ ಪಾದಪದ್ಮಂಗಳಿಗೆ.
ಅಳಿಗೆ ಕತ್ತಲು, ಹುಲಿಗೆ! ಹುಲುಸಿರಲಮ್ಮ ಬೆಳಕಿನ ಬೆಳೆಗೆ.
ಮಣಿವೆ ಬೆಳಗನೆ ತೂರೆ ಹರಿವ ಈ ಪಾದಪದ್ಮಂಗಳಿಗೆ.

(ಹೃದಯ ಸಮುದ್ರ)

'ತಾಯಿಯವರ ದೃಷ್ಟಿ ಸೋಂಕಿದಾಗಿನ ಎಚ್ಚರ' ಎಂಬ ಭಾವ ಸಂದರ್ಭ ಹೊಂದಿದ ಕವನ 'ಶ್ರೀ ಮಾತೃಶ್ರೀ ಗೆ'. ಅದರಲ್ಲಿ ಬೇಂದ್ರೆಯವರು ತಾನು ಕವಿಯಾದುದನ್ನು ಹೀಗೆ ಧ್ವನಿಸಿದ್ದಾರೆ.

೧

ನಿನ್ನ ನೋಟವೆ ಹಾಲು
ತಾಯಿ ನೀನು.
ಕಂಗಳಿಂದಲೆ ಕುಡಿವೆ
ಕೂಸು ನಾನು.

೨

ಕಂಗಳಿಂದಲೆ ನುಡಿವೆ
ತಾಯಿ ನೀನು.
ನನ್ನ ಕಣ್ಣೇ ಕಿವಿಯು
ಕವಿಯು ನಾನು **(ಹೃದಯ ಸಮುದ್ರ)**

ರವೀಂದ್ರನಾಥ ಠಾಗೂರರು ಇಡೀ ಭಾರತದ ಜನಮನದ ರಾಷ್ಟ್ರಕವಿ. ಅವರನ್ನು ಬೇಂದ್ರೆಯವರು 'ಆದರ್ಶದಿ ಅನುರಾಗವ ಬಿಂಬಿಸಿ। ನಾಡಿನ ನಾಡಿಯನಾಡಿಸುವಾ' ಎಂದು ನೆನೆದು

'ಹಳತಾದ ಹಾಗೆಲ್ಲ ಕಳತು ಹಣ್ಣಾಗುತ ರಸಪಾಕವಾಗಿರುವೆ' ಎಂದು ಕಾವ್ಯ ಸವಿ ತಿಳಿಸಿದ್ದಾರೆ. ತನ್ನ ಕಾವ್ಯ ಗುರುವಿಗೆ ಹೀಗೆ ನಮನವನ್ನು ಸಲ್ಲಿಸಿದ್ದಾರೆ:

'ನುಡಿದು ಬೇಸತ್ತಾಗ। ದುಡಿದುಡಿದು ಸತ್ತಾಗ
ಜನಕ ಹಿಗ್ಗಿನಹಾಡು ನೀಡಾಂವಾ
ನಿನ್ಹಾಂಗ ಆಡಾಕ। ನಿನ್ಹಾಂಗ ಹಾಡಾಕ
ಪಡೆದು ಬಂದವ ಬೇಕೊ ಗುರುದೇವಾ!'

(ಗುರುದೇವ : ಸಖೀಗೀತ)

ರಾಷ್ಟ್ರಪಿತ ಮಹಾತ್ಮಗಾಂಧಿಯವರನ್ನು ಕುರಿತು ಬೇಂದ್ರೆಯವರು 'ಕೇಳಿರೊಂದು ಸೋಜಿಗ' 'ಜಯ ಜಯಾ ಗಾಂಧಿ ಮೋಹನಾ' 'ಶ್ರದ್ಧಾಂಜಲಿ' 'ಅಮರ ಮರಣ' 'ಶಕಪುರುಷನ ಶತಮಾನ' 'ಗಾಂಧಿ-ಸತ್ಯ' ಮುಂತಾದ ಹದಿನೆಂಟು ಕವನಗಳನ್ನು ರಚಿಸಿದ್ದಾರೆ.

'ಗಾಂಧಿ ದೇಹ ಸುಟ್ಟ ಬೆಳಕು, ಜಗದ ತಮವ ಕಳೆದಿದೆ,
ಗಾಂಧಿ ಹೋದರೆಂಬ ಸುದ್ದಿ ಬಾನ ತುಂಬಿ ಉಳಿದಿದೆ'

ಎಂದು 'ಶ್ರದ್ಧಾಂಜಲಿ' ಅರ್ಪಿಸಿ 'ಪ್ರೇಮಧರ್ಮವನು ಸಾರಿದವಗೆ ಎಲ್ಲಿಹುದು ಮರಣವೆಂಬೆ' ಎಂದಿದ್ದಾರೆ.

'ನೆನಸೇವು ನಿಮ್ಮ ಆ ನಗೀ
ಒಳಗೆ ಇಲ್ಲ ಧಗಿ
ಬರೇ ಬೆಳಕು -ಬರೇಬೆಳಕು!'

ಎಂದು ಮಹಾತ್ಮನ ನಗೆಯ ಬೆಳಕನ್ನು ಕಾವ್ಯವಾಗಿ ಕಡೆದು 'ಕತ್ತಲೆಯ ಬಯಲಲ್ಲಿ ಬೆತ್ತಲೆಯ ಬೆಳಕೆ ಇದೆ! ಬದುಕಿನಲೆ ಬೆಳೆಯಲಿದೆ ಗಾಂಧಿ ಸತ್ಯ' ಎಂದು ಬಾಪೂಜಿಯ ಸತ್ಯದ

ನಿರಂತರ ಹರಿವನ್ನು ತಿಳಿಸಿ, ಅವರ ನಡೆನುಡಿ ಒಂದಾಗಿ ಜನರನ್ನು ಸದಾ ಎಚ್ಚರಿಸುತ್ತಿದೆ ಎಂದು ಹೇಳಿದ್ದಾರೆ :

'ನಡೆಯ ನುಡಿಯ ಮಾಟದಿಂದ
ಚರಿತೆಗೆ ಅಚ್ಚರಿಸಿದೆ.
ಶರಣರಿಗೋ ಮರಣವಿಲ್ಲ
ಜನರನು ಎಚ್ಚರಿಸಿದೆ' (ಜಯಂತಿ : ಉತ್ತರಾಯಣ)

'ಶಕಪುರುಷನ ಶತಮಾನ'ವು ೧೯೬೯ ಮಹಾತ್ಮಾಗಾಂಧಿ ಜನ್ಮ ಶತಾಬ್ದಿ ಸ್ಮರಣೆಯ ಕವನ. ಅದರಲ್ಲಿಯ ಕೆಲವು ಚಿಂತನಶೀಲ ನುಡಿಗಳು :

ನೀನು ರಾಮನ್ನ ನೆನಿಸಿ, ರವಿ ಆದಿ.
ನಾವು ರಾಮಾಯಣ ನೆನಸಿ ಕವಿ ಆದಿವಿ.
ಇದು ಪವಾಡ, ಮನಮೋಹನದಾಸ! ಶಕಪುರುಷ ನೀನು ॥

* * *

ಅಸ್ಪೃಶ್ಯರ ಉದ್ಧಾರಕ್ಕಿಂತ, ಅಸ್ಪೃಶ್ಯತೆಯ ಉಪಸಂಹಾರ ಬೇಕು
ಹೊಸಾ ಸೃಷ್ಟಿಗೆ!

* * *

ನಾವು ಏನ ಮರತರೂ
ನೀನು ಬಾಳಿದೀ ಅಂತ ನಾವು ಬದುಕಿದ್ದೀವಿ
ಇದನ್ನ ಮರಿಯೋ ಹಾಂಗಿಲ್ಲಾ.

* * *

ಇತಿಹಾಸ ಸಾರತದ ನೂರು ವರ್ಷಾತು ಮಗನಽ ಅಂತ.
ಸಣ್ಣ ಕಣ್ಣಿಗೆ ದೊಡ್ಡ ಸೂರ್ಯ ಕಂಡಾನು
ಸಣ್ಣ ಮನಸ್ಸಿಗೆ ಮಹಾತ್ಮಾ ಒಪ್ಪಿಗಾಗೋದಿಲ್ಲ.

(ಇದು ನಭೋವಾಣಿ).

ಬೇಂದ್ರೆಯವರು ಕನ್ನಡದ ಆದಿಕವಿ ಪಂಪನನ್ನು ಕುರಿತು 'ಪಂಪನ ನೆನೆದು' ಕವನ ರಚಿಸಿದ್ದಾರೆ. ಅದರಲ್ಲಿ ಅವನ ಕ್ಷಾತ್ರಗುಣ ಮತ್ತು ಕಾವ್ಯಗುಣವನ್ನು 'ಬರೆಯುವಕೆಯ್ಯು ಗಂಡುಗೆಡದೆ ಬೀರಕಡಗ ತೊಟ್ಟಿತು' ಎಂದು ವರ್ಣಿಸಿದ್ದಾರೆ. 'ಪಂಪನಿಗೆ' ಎಂಬ ಇನ್ನೊಂದು ಕವನದಲ್ಲಿ 'ಕನ್ನಡದ ಸವಿನುಡಿಯ ಬಾನ ಬೆಳಗುವ ಸೂರ್ಯ' ಎಂದು ಬಣ್ಣಿಸುತ್ತ 'ಇಂದಿಗೂ ಮೊಳಗುತಿದೆ ದಿವ್ಯದುಂದುಭಿ ತೂರ್ಯ' ಎಂದು ಅವನ ಕಾವ್ಯದುಂದುಭಿಯ ಮೊಳಗನ್ನು ನಮಗೆ ಕೇಳಿಸಿದ್ದಾರೆ. ಅವರು 'ಅಲ್ಲಮ ಪ್ರಭು' ಕವನದಲ್ಲಿ 'ಶೂನ್ಯದಲಿ ಹುಟ್ಟುಗಟ್ಟಿತು. ಹದುಳದೊಂದು ಹುಣ್ಣಿಮೆ' ಎಂದು ಅಲ್ಲಮನ ವಚನದ ಬಗ್ಗೆ ನುಡಿದಿದ್ದಾರೆ. 'ರತ್ನಾಕರ' ಕವನದಲ್ಲಿ ರತ್ನಾಕರನನ್ನು, ಅವನ ಕಾವ್ಯವನ್ನು ವರ್ಣಿಸುತ್ತ 'ಕೃತಿಗಳೊಳು ನಿನ್ನ ಶೃಂಗಾರ ಪಾವನ, ಗಂಗೆಯೊಲು ; ರಸವು ಸಮರಸವು' ಎಂದಿದ್ದಾರೆ. " 'ಕನಕ' ತಿರುವು ಮುರುವಾದರೂ ಕನಕ! ಒಂದರೊಳೆ ನೂರೊಂದು ಇರುವ ತನಕ" ಎಂದು ಕನಕನನ್ನು ತಮ್ಮ ಮುಂಡಿಗೆಯಲ್ಲಿ ಚಿತ್ರಿಸಿದ್ದಾರೆ.

* * *

'ಬೆಳಗು ಗೆಳೆತನದ ಬೆಳಕೇ' ಎಂದು ಸ್ನೇಹವನ್ನು ಬೆಳಕು ಎಂದು ಅದರಲ್ಲಿ ಅರಿವು, ಸತ್ಯ, ಪ್ರೀತಿ, ಶಾಂತಿ ಕಂಡವರು ಬೇಂದ್ರೆ. 'ಸ್ನೇಹ ಪೋಷಣೆಯಿಂದ ಯಾರ ಮನದೀಪಿಕೆಯು! ಬೆಳ್ ಬೆಳಗು ಬೆಳಗದಿರದು?' ಎಂದು ಪ್ರಶ್ನಿಸಿ ಗೆಳೆತನವನ್ನು ಪೋಷಿಸಿದ ಅವರು 'ಒಂದು ಜನ್ಮದ್ದಲ್ಲಾ ಗೆಳೆತನದ ಸಾಧನೆ ॥ ಜನ್ಮ ಜನ್ಮಕ್ಕುಂಟು ಹೊಸತು ತನು' ಎಂದು ಅದನ್ನು ಸಾಧನೆಯಾಗಿಸಿಕೊಂಡರು. ಅವರು ಬಾಲ್ಯದ ಸ್ನೇಹಿತರಾದ

ಶ್ರೀಧರ ಖಾನೋಳಕರ, ನಾನಾ ಖಾಡಿಲಕರ; ವಿದ್ಯಾರ್ಥಿ ಗೆಳೆಯರಾದ ಮಲ್ಹಾರಿ ಕುಲಕರ್ಣಿ, ಪ್ರಹ್ಲಾದ ನರೇಗಲ್ಲ, ಗೋವಿಂದ ಚುಳಕಿ, ನಾರಾಯಣ ಸಂಗಮ; ಹಿರಿಯರಾದ ಶಾಂತಕವಿ, ಆಲೂರ ವೆಂಕಟರಾಯರು; ಹಿಂದೂಸ್ಥಾನಿ ಸಂಗೀತ ಸಾಮ್ರಾಟರಾದ ಮಲ್ಲಿಕಾರ್ಜುನ ಮನ್ಸೂರ್, ಭೀಮಸೇನ ಜೋಶಿ; ಗೆಳೆಯರ ಗುಂಪಿನ ಮಧುರ ಚೆನ್ನ, ಶಂಕರಗೌಡ ಪಾಟೀಲ, ಸಿದ್ಧವನಹಳ್ಳಿ ಕೃಷ್ಣಶರ್ಮ, ವಿ.ಕೃ. ಗೋಕಾಕ್; ಸಾಹಿತ್ಯಗೆಳೆಯರಾದ ಪಂಜೆಮಂಗೇಶರಾಯರು, ಡಿ.ವಿ.ಜಿ., ಗೋವಿಂದ ಪೈ, ಬಿ.ಎಂ.ಶ್ರೀ., ಅಣ್ಣ ಮಾಸ್ತಿ, ಕುವೆಂಪು, ದೇವುಡು, ಪುತಿನ, ತೀನಂಶ್ರೀ; ಸಾಹಿತ್ಯ ಸಹೋದರಿಯರಾದ ತಂಗಿ ಜಾನಕಮ್ಮ, ತಂಗಿ ಗೌರಮ್ಮ, ತಿರುಮಲೆರಾಜಮ್ಮ ಮುಂತಾದವರ ಬಗ್ಗೆ ಅವರ ಸಾಹಿತ್ಯದ ಕೊಡುಗೆಯನ್ನು, ಅವರು ತಮ್ಮ ಆದರ್ಶ ವ್ಯಕ್ತಿತ್ವದಿಂದ ಸಂಸ್ಕೃತಿ ರೂಪಿಸಿದುದನ್ನು ಕವನಗಳಲ್ಲಿ ಕಡೆದಿಟ್ಟಿದ್ದಾರೆ.

'ಕವಿಗೆ ಕವಿ ಮಣಿವನ್' ಎಂಬುದು ಕನ್ನಡ ಸಾಹಿತ್ಯ ಸಂಸ್ಕೃತಿ. ತನ್ನ ಸಮಕಾಲೀನರನ್ನು ಗೌರವಿಸದ ಕವಿಯು ಕವಿಯಲ್ಲ. ಬೇಂದ್ರೆಯವರು ರಚಿಸಿರುವ ಕವನಗಳು ತನ್ನ ಸಮಕಾಲೀನ ಕವಿಗಳನ್ನು ಪ್ರೀತಿಯಿಂದ ಕಾಣುವ, ಗೌರವಿಸುವ ಶ್ರೀ ಪರಂಪರೆಗೆ ನಾಂದಿ ಹಾಡಿದಂತಿವೆ.

ಗೆಳೆಯ ಪ್ರಹ್ಲಾದ ನರೇಗಲ್ಲ ಅವರ ಹುಟ್ಟು ಹಬ್ಬಕ್ಕೆ ಬೇಂದ್ರೆಯವರು ಹೀಗೆ ಹಾರೈಸಿದ್ದಾರೆ :

'ಯೋಗಸ್ಥನಾಗಿ ಗಡ ಹಾಡುಗಳ ಹಾಡುತ್ತ
ಕನ್ನಡಿಗರೊಡನೆ ಆಡು;
ಯೋಗ–ಭೋಗದ ಭೂಮಿಯಾಗಿ ಸಾಗುವಹಾಗೆ
ಕನ್ನಡದ ನಾಡಮಾಡು!' (ಹರಕೆ : ಗರಿ)

ಗೆಳೆಯರಾದ ಚಿದಂಬರ ಸಗರ, ಮಲ್ಹಾರಿ ಕುಲಕರ್ಣಿ, ಶ್ರೀಧರ ಖಾನೋಳಕರ ತೀರಿಹೋದಾಗ ಅವರಿಗೆ ಕಾವ್ಯದ ಮುಖೇನ ಅಶ್ರುತರ್ಪಣ ಸಲ್ಲಿಸಿದ್ದಾರೆ.

'ತತ್ತ್ವದರ್ಶಕ ಲೋಚನಕ್ಕೆ ಕಂಡಿತು ಇಂದು
ಅಸ್ತಲೋಕವೆ ಉದಯಲೋಕವಾಗಿ
ಸತ್ತ್ವಸ್ಥನಾದ ಜೀವಾತ್ಮನಿಂದಲೆ ಬಂತು
ಮಂದಶೋಕವು ಕಂದಶ್ಲೋಕವಾಗಿ'

(ಮಲ್ಹಾರಿ ಕುಲಕರ್ಣಿ : ಸಂಚಯ)

ಆಲೂರು ವೆಂಕಟರಾಯರನ್ನು ಕರ್ನಾಟಕ ಕುಲಪುರೋಹಿತ ಎಂದು ಕರೆಯುವರು. ಅವರು ರಚಿಸಿದ ಕೃತಿ – 'ಕರ್ನಾಟಕ ಗತ ವೈಭವ', ಅದು ಕನ್ನಡಿಗರಲ್ಲಿ ನಾಡುನುಡಿ ಅಭಿಮಾನ ಮೂಡಿಸಿತು. ಅವರು ಕನ್ನಡಿಗರಲ್ಲಿ ಇತಿಹಾಸ ಪ್ರಜ್ಞೆ ಮೂಡಿಸಿ ಜಾಗೃತಿಯನ್ನುಂಟು ಮಾಡಿದುದನ್ನು ಬೇಂದ್ರೆ ಹೀಗೆ ಚಿತ್ರಿಸಿದ್ದಾರೆ :

'ಇತಿಹಾಸವೇ ನಮ್ಮ ಅತಿಗೂಢ ತತ್ವಗಳ
ಕತೆಯನ್ನು ಹೇಳುತ್ತ, ಮತಿಯನ್ನು ತಿಳಿಮಾಡಿ
ಹತರಾದ ಜನರೊಳುತ್ಸಾಹವನ್ನೇರಿಸುತ ಮಾಡಿದೈ ಪುರುಷರನ್ನು'

ಮಲ್ಲಿಕಾರ್ಜುನ ಮನ್ಸೂರರು ಹಿಂದೂಸ್ಥಾನಿ ಸಂಗೀತ 'ಜೈಪುರ ಘರಾಣೆ'ಯ ಪ್ರಸಿದ್ಧ ಗಾಯಕರು. ಅವರು ಹಾಡುವಾಗ ಸ್ವರಗಳ ಜಾಲಗಳನ್ನು ನಿರ್ಮಿಸಿ ಕೇಳುಗರಿಗೆ ನಾದ ಸೌಂದರ್ಯಾನುಭವವನ್ನುಂಟು ಮಾಡುತ್ತಿದ್ದರು. ಅವರು ಧಾರವಾಡ ಜಿಲ್ಲೆಯ ಮನಸೂರು ಗ್ರಾಮದವರು. ಬೇಂದ್ರೆಯವರು ಗೆಳೆಯನನ್ನು ಕುರಿತು 'ಮನಸೂರ ಮಲ್ಲಿಕಾರ್ಜುನನ ಹಾಡು ಕೇಳಿ' ಎಂದು ಕವನ ರಚಿಸಿದ್ದಾರೆ. ಮಲ್ಲಿಕಾರ್ಜುನರ ಊರಿನ

ಹೆಸರನ್ನು ಶ್ಲೇಷಾರ್ಥದಲ್ಲಿ ವಿಕಾಸಗೊಳಿಸಿದ್ದಾರೆ. ಅವರ ಹಾಡುಗಾರಿಕೆ ಮಾಡುವ ಮೋಡಿಯನ್ನು ಉಪಮಾಮಾಲೆಯಲ್ಲಿ ಕಡೆದಿಟ್ಟಿದ್ದಾರೆ.

'ಮಿಂಚು ಬೇಲಿಗೆ ಬೆಳೆದ
ಸ್ವಾತಿಯಾ ಹನಿಯಂತೆ
* * *
ಶಿವನ ತಾಂಡವ ಮುಗಿಯೆ
ಶಿವೆ ಲಾಸ್ಯಕೆದ್ದಂತೆ
ಬಿಸಿಲ್ ಹಣ್ಣನುಂಡು ಚಂ
ದ್ರನ ಜೇನು ಮೆದ್ದಂತೆ.
ಮನ ಸೂರೆ ಹೋಯಿತೋ
ಹೋ! ಇದ್ದಕ್ಕಿದ್ದಂತೆ.' (ಸಂಚಯ)

ಹಲಸಂಗಿಯ ಚೆನ್ನಮಲ್ಲಪ್ಪ ಅವರು ಗೆಳೆಯರ ಗುಂಪಿನ ಅನುಭಾವಿ ಕವಿ. ಅವರ ಕಾವ್ಯನಾಮ 'ಮಧುರ ಚೆನ್ನ'. ಬೇಂದ್ರೆಯವರು ಮತ್ತು ಅವರು ಅಣ್ಣ ತಮ್ಮಂದಿರಂತಿದ್ದರು. ಅವರಿಬ್ಬರೂ ಶ್ರೀ ಅರವಿಂದರ ಚಿಂತನೆಗೊಳಗಾದ ಕವಿಗಳು. ಬೇಂದ್ರೆಯವರು ಶ್ರೀ ಅರವಿಂದರ ಕಾವ್ಯ ಮಾರ್ಗದ ಸಾಧಕರಾದರೆ, ಮಧುರಚೆನ್ನರು ಅವರ ಅಧ್ಯಾತ್ಮ ಮಾರ್ಗದ ಯೋಗ ಸಾಧಕರಾಗಿದ್ದರು. ಅದನ್ನು ಬೇಂದ್ರೆಯವರು ಕಾವ್ಯಾತ್ಮಕವಾಗಿ ಹೀಗೆ ಬಣ್ಣಿಸಿದ್ದಾರೆ :

'ನನ್ನ ನಿನ್ನ ಬೆನ್ನ ಬಳಿ ವಿಶಾಲವೃಕ್ಷ ಬೆಳೆದಿದೆ
ಮುಗಿಲ ತುಂಬಿ ಉಳಿದಿದೆ.
ಗಾಳಿಯಂತೆ ಸುಳಿದಿದೆ.
ನನ್ನ ನಿನ್ನ ನೋಟ ಮಾತ್ರ ಎರಡು ದಿಕ್ಕಿಗೆಳೆದಿದೆ
ಬೇರೆ ಹಾದಿ ತುಳಿದಿದೆ. (ಚೆನ್ನ : ನಾದಲೀಲೆ)

ಮಾಸ್ತಿಯವರನ್ನು ಕುರಿತು 'ನಾನು-ನೀನು' ಎಂಬ ಕವನದಲ್ಲಿ ಬೇಂದ್ರೆಯವರು 'ನಿನ್ನ ದರ್ಶನ ಪೂರ್ಣ' ಎಂದು ನುಡಿದು ಆನಂದಪಟ್ಟಿದ್ದಾರೆ. ತಮ್ಮನಂತೆ ತನ್ನನ್ನು ನೋಡಿಕೊಂಡ ಕನ್ನಡದ ಆಸ್ತಿ ಮಾಸ್ತಿಯವರನ್ನು ನೆನೆಯುತ್ತ 'ಅಣ್ಣ ಮಾಸ್ತಿಯವರಿಗೆ' ಎಂಬ ಕವನದಲ್ಲಿ ಹೀಗೆ ಹೇಳಿದ್ದಾರೆ :

'ನೀನು ಒಂದೇ ಬೆಳಕು
ನಾನು ಹಲಬಣ್ಣ
ನಾನು ಬೆಳೆಯುವ ತಮ್ಮ
ನೀನು ಬೆಳೆದಣ್ಣ' **(ಶತಮಾನ)**

ಬೇಂದ್ರೆಯವರು 'ಕವಿಶಿಷ್ಯ' ಕವನದಲ್ಲಿ 'ಮುಪ್ಪಿನಲಿ ಹರೆಯದ ಹಸಿರ, ಹಸುಳೆತನದಾ ಚಿಗುರ ಕುಣಿಕುಣಿಸಿ ಕುಣಿದು ಕುಣಿಸಿದ ಮೂರ್ತಿವೆತ್ತ ತೆಂಗಾಳಿ' ಎಂದು ಪಂಜೆ ಮಂಗೇಶರಾವ್ ಅವರನ್ನು ತನ್ನ ನುಡಿಯಲ್ಲಿ ಕುಣಿಸಿದ್ದಾರೆ. 'ತಮ್ಮ ನೆನೆವ!' ಎಂಬ ಸುನೀತದಲ್ಲಿ 'ನಿಮ್ಮ ಜಿಜ್ಞಾಸೆಗೆಲ್ಲಿದೆ ಮುಗಿವು? ಪದಕಾದಿ?' ಎಂದು ಕೇಳುತ್ತ ಗೋವಿಂದ ಪೈ ಅವರಿಂದ ಪ್ರಾರಂಭವಾದ ಸಂಶೋಧನಾ ಜಿಜ್ಞಾಸೆ ಬೆಳೆಯುವ ಸೂಚನೆ ನೀಡುತ್ತ, ಅವರ ಚಿಂತನ ಚಿರಂತನತೆಯನ್ನು ಸಾರಿದ್ದಾರೆ.

ಡಿ.ವಿ.ಜಿ.,ಯವರನ್ನು ಬೇಂದ್ರೆಯವರು ಭೀಷ್ಮರೆಂದು ಕರೆದು 'ಆನೆ ಹೋದುದೆ ಬೀದಿ, ಅವರಿಗವರದೆ ಹಾದಿ!' ಎಂದಿದ್ದಾರೆ. ನಮ್ಮ ಡಿ.ವಿ.ಜಿ. ದಿವಿಜರು 'ಅವರ ಆಸ್ಥಾನವೇ ಸ್ವರ್ಗ' ಎಂದು ಹೆಮ್ಮೆ ಪಟ್ಟಿದ್ದಾರೆ. ಅವರ ಕಾವ್ಯದ ಹಿರಿಮೆಯನ್ನು ಹೀಗೆ ಚಿತ್ರಿಸಿದ್ದಾರೆ :

'ಒಂದೊಂದು ಗ್ರಂಥವೂ ಅವರ ಸ್ಮಾರಕವಹುದು!
ಬೇರೆ ಜನ ಇರಬಹುದು, ಬೇರೆ ಜನ ಬರಬಹುದು.
ಆ ಶೀವಿ! ಆ ಯಮಕ! ಯಾರಿಗಿದೆ ಆ ಗಮಕ?
ರುದ್ರಕ್ಕು ಭದ್ರಕ್ಕು ಅವರ ರೀತಿಯೆ ಚಮಕ.'

(ಡಿ.ವಿ.ಜಿ : ಪರಾಕಿ)

ಕುವೆಂಪು ಕನ್ನಡ ಸಾಹಿತ್ಯದ ಯುಗ ನಿರ್ಮಾಪಕರು. ಅದನ್ನು ಅರಿತ ವರಕವಿ ಬೇಂದ್ರೆ 'ಯುಗದ ಕವಿಗೆ । ಜಗದ ಕವಿಗೆ । 'ಶ್ರೀ ರಾಮಾಯಣ ದರ್ಶನ'ದಿಂದಲೇ ಕೈ । ಮುಗಿದ ಕವಿಗೆ' – ಮಣಿದಿದ್ದಾರೆ.

ಕುವೆಂಪು ಅವರ ನಿವಾಸದ ಹೆಸರು 'ಉದಯರವಿ.' ಅಲ್ಲಿಂದ ನಾಡಿಗೆ ಹೊಮ್ಮಿದ ಜಾಗೃತ ಬೆಳಕು ಮೌಢ್ಯ, ಕಂದಾಚಾರ, ಸಾಮಾಜಿಕ ಕಟ್ಟುಪಾಡುಗಳ ಕತ್ತಲನ್ನು ಹೊಡೆದೋಡಿಸಿದೆ. ವೈಜ್ಞಾನಿಕ ಮನೋಧರ್ಮವನ್ನು ಮೂಡಿಸಿದೆ. ಆ ಕವಿಯ ನುಡಿ ಚದುರು, ಚಾತುರ್ಯ ಅರಿವನ್ನು ಯುವ ಜನರಲ್ಲಿ ಮೂಡಿಸುತ್ತಿದೆ ಎಂಬ ಭಾವದಲ್ಲಿ ಬೇಂದ್ರೆ ಅವರು ಹೀಗೆ ವರ್ಣಿಸಿದ್ದಾರೆ :

'ತಮವೆಲ್ಲಿದೆ ರವಿ ಇದಿರಿಗೆ
ಉತ್ತಮ ಕವಿನುಡಿ ಚದುರಿಗೆ'

ಕುವೆಂಪು ಸುಂದರ ಸುಲಕ್ಷಣ ತೇಜಸ್ವಿ. ಅವರ ವ್ಯಕ್ತಿತ್ವವನ್ನು ರೂಪಿಸಿರುವ ಅವರ ಶುದ್ಧ ಜೀವನ ಶೈಲಿ ನಾಡಿಗೆ ಆದರ್ಶ. ಅಂತಹ ಚಾರಿತ್ರ್ಯ ಅವರದು. ಸೃಷ್ಟಿಕರ್ತ ಭಗವಂತ ಚಿನ್ನದಲ್ಲಿ ಹರಳನ್ನು ಕೂಡಿಸುವ ಕೆಲಸ – ಕುಂದಣದ ರೀತಿಯಲ್ಲಿ ನಿಮ್ಮನ್ನು ಸೃಷ್ಟಿಸಿದ್ದಾನೆ ಎಂದು ಚಾರುತ್ವ, ಚಾರಿತ್ರ್ಯವನ್ನು ಪ್ರತಿಮಾತ್ಮಕವಾಗಿ ಬೇಂದ್ರೆ ಚಿತ್ರಿಸಿದ್ದಾರೆ.

'ಚಾರುತ್ವದ ಕುಂದಣದಲ್ಲಿ
ಚಾರಿತ್ರ್ಯದ ರತ್ನ'

ಕುವೆಂಪು ಅವರು ಸದಾ ಜನರ ಬದುಕಿಗೆ ಉಪಯುಕ್ತವಾಗುವ ಎಚ್ಚರದ, ಜಾಣತನದ ಆಲೋಚನೆ ಮಾಡುತ್ತ ಅಂತಹವರ ಸಹವಾಸದಲ್ಲಿ ಸದಾ ಇದ್ದು ಬಾಳಿದವರು. ಅಂತಹ ವ್ಯಕ್ತಿತ್ವವನ್ನು ಹೊಂದಿದ ಕುವೆಂಪು ನಮ್ಮ ಸಮಕಾಲೀನರು ಎಂಬುದೇ ನಮಗೆ ತೃಪ್ತಿ ಎಂದು ಬೇಂದ್ರೆ ಸುಖಿಸಿದ್ದಾರೆ.

'ಚಾತುರ್ಯದ ಮಂತಣದಲಿ
ಸತ್ಯಂಗದ ಯತ್ನ
ಇದೇ ತೃಪ್ತಿಯು ನಮಗೆ'

(ಯುಗದ ಕವಿಗೆ: ಶತಮಾನ)

'ಸೌ ॥ ಮುತ್ತೈದೆ, ತಿರುಮಲೆ ರಾಜಮ್ಮ ।' ಕವನದಲ್ಲಿ ಬೇಂದ್ರೆಯವರು 'ಭಾರತಿ' ಕಾವ್ಯನಾಮದ ಅವರ ಸಾಹಿತ್ಯದಲ್ಲಿ ಸಂಗೀತಸಹ ನಂಟಾಗಿತ್ತು ಎಂದು ಹೇಳಿದ್ದಾರೆ. ಶರ್ಮ ದಂಪತಿಗಳು 'ರಸಿಕ ದಾಂಪತ್ಯದಲ್ಲಿ ಆತ್ಮರತಿ !' ಕಂಡವರೆಂದಿದ್ದಾರೆ. ಅವರದು ಸೌಹಾರ್ದ ದಾಂಪತ್ಯ ಎಂದು ಮೆಚ್ಚಿದ್ದಾರೆ.

'ಷೋಕಿ ನಾಟಕವಲ್ಲ, ಶ್ರುತಿ ಬಹಳ ನಾಜೋಕು
ದಾಂಪತ್ಯ ಸೌಹಾರ್ದ, ಬೇಡಿಬಂದಿರಬೇಕು.' **(ಪರಾಕಿ)**

OOO

೧೨. ಗದ್ಯ ಬರಹಗಳು

೧. ನಾಟಕಗಳು

ಬೇಂದ್ರೆಯವರು ಕವಿಯಾದಂತೆ ನಾಟಕಕಾರರೂ ಆಗಿದ್ದಾರೆ. ಅವರು ಸಮಾಜವನ್ನು ಸೂಕ್ಷ್ಮವಾಗಿ ನಿರೀಕ್ಷಿಸಿ, ಸಮಾಜದ ವಿವಿಧ ಬದುಕಿನ, ವಿವಿಧ ಮುಖದ ಜನಗಳ ಮಾತು, ಆ ಜನರ ವೃತ್ತಿ ಪ್ರವೃತ್ತಿಯಂತೆ ರೂಪುಗೊಂಡ ಶಬ್ದಶಕ್ತಿಯನ್ನು ನಾಟಕವಾಗಿಸಿದ್ದಾರೆ. ಬೇಂದ್ರೆಯವರ ಕಾವ್ಯದಂತೆ ನಾಟಕವು ತನ್ನದೇ ಆದ ದೃಶ್ಯ, ಪ್ರಯೋಗ, ಮಾತಿನ ಜಾಲ, ಅರ್ಥವಿಸ್ತಾರ ಹೊಂದಿದ್ದು – ಇತರರು ಅನುಕರಿಸುವ ಮನಸ್ಸಾದರೂ ಅನುಕರಿಸಲಾಗದ ಬೇಂದ್ರೆ ಮಾರ್ಗದಲ್ಲಿದೆ. ನಾಟಕಗಳಲ್ಲಿ ಅವರ ಪಾತ್ರಗಳು ಜೀವಂತ ಜನರೇ ನುಡಿದಂತಿದ್ದು ಸಹಜತೆಯನ್ನು ಮೈಗೂಡಿಸಿಕೊಂಡಿವೆ. ಬೇಂದ್ರೆ ಮರೆಯಲ್ಲಿದ್ದು ನಮ್ಮಂತೆ ನಾಟಕ ನೋಡಿ ಆನಂದಿಸುವ ಪ್ರೇಕ್ಷಕನಾಗಿರುವುದು ಅವರ ನಾಟಕದ ವೈಶಿಷ್ಟ್ಯವಾಗಿದೆ. ಅವರ ನಾಟಕಗಳಲ್ಲಿ ಹಾಸ್ಯ, ಮಾತಿನ ಜಾಣ್ಮೆಯ ಜೊತೆಗೆ ಜೀವನವಿದೆ. ಆ ನಾಟಕಗಳು ಅವರ ಕಾಲದ ಫೋಟೋ ಆಲ್ಬಂನಂತಿವೆ.

ಗತಕಾಲದ ರಾಜರ ನಾಟಕವಾದ 'ಸಾಯೋಆಟ', 'ಜಾತ್ರೆ'ಯಲ್ಲಿ ಅಡಗಿರುವ ಸಾರ್ವಕಾಲಿಕ ಜೀವನ ತತ್ವವು– ರಾಜದಿರಿಸು ತೆಗೆದು ವೇಷ ಭೂಷಣ ಬದಲಾಯಿಸಿದರೆ –

ಇಂದಿನ ಜನನಾಯಕರ, ಇಂದಿನ ಸಾಮಾಜಿಕ ವ್ಯವಸ್ಥೆಗೆ ಹಿಡಿದ ಕನ್ನಡಿಯಂತಿದೆ. ಅವರು ಒಟ್ಟು ೧೪ ನಾಟಕಗಳನ್ನು ರಚಿಸಿದ್ದಾರೆ. ಅವರು ಬರೆದ ಪ್ರಥಮ ನಾಟಕ 'ಗೋಲ್' ಅದು ೧೯೨೦ರಲ್ಲಿ ರಚನೆಯಾಯಿತು. ಅದು ಏಕಾಂತ ಪ್ರಹಸನ. ಅದು ಬೇಂದ್ರೆಯವರು ಗೆಳೆತನದ ಸಾಧನೆಯ ಗುಂಗು ಹಿಡಿಸಿಕೊಂಡು ಕರ್ನಾಟಕ ಕಾಲೇಜಿನ ಸ್ನೇಹ ಸಮ್ಮೇಳನಕ್ಕಾಗಿ ಬರೆದ ಆದರ್ಶಮಯ ನಾಟಕ. ಅದರ ಪ್ರಥಮ ಪ್ರಯೋಗ ಮತ್ತು ಅದರಲ್ಲಿ ಪಾತ್ರವಹಿಸಿದವರನ್ನು ಕುರಿತು ವಾಮನಬೇಂದ್ರೆಯವರು 'ಗೋಲ್'ನ 'ಸಂಪಾದಕರನುಡಿ'ಯಲ್ಲಿ 'ಈ ನಾಟಕದೊಳಗಿನ ರಂಗನಾಯಕ ಎಂದರೆ ದಿ.ರಂ.ಶ್ರೀ.ಮುಗಳಿ ಮತ್ತು ತಿಮ್ಮ ದಿ.ಜಿ.ಬಿ.ಜೋಶಿ ಎಂಬುದಾಗಿ ಬೇಂದ್ರೆಯವರು ಹೇಳಿದ ನೆನಪು ನನಗಿದೆ. ಎಲ್ಲ ಗೆಳೆಯರು ಕೂಡಿ ೧೯೨೧ರಲ್ಲಿ ಈ ನಾಟಕದ ಪ್ರಯೋಗ ಮಾಡಿದರು' ಎಂದು ತಿಳಿಸಿದ್ದಾರೆ.

'ಗೋಲ್' ನಾಟಕದಲ್ಲಿ ವಿದ್ಯಾವಿನೋದ ಸಮಾಜದ ಗೆಳೆಯರು ಸೇರಿ ಕಾಲೇಜು ವಿದ್ಯಾರ್ಥಿಗಳಾದ ತಾವು ಜೀವನದಲ್ಲಿ 'ಗೋಲ್' ಅಂದರೆ ಗುರಿ ಹೊಂದಿ ಆದರ್ಶ ಸಮಾಜ ಕಟ್ಟುವ ಗೋಲ್‌ನತ್ತ ಸಾಗುತ್ತಾರೆ. ಕಾಲೇಜು ಕಲಿತವರು ತಮ್ಮ ದೈನಂದಿನ ಮಾತುಕತೆಯಲ್ಲಿ ಇಂಗ್ಲಿಷ್ ಬಳಸುವ ಸಹಜ ರೀತಿ ಆ ನಾಟಕದಲ್ಲಿದ್ದು, ಆಗಿನ ಕಲಿತ ಯುವಕರ ನೈಜ ಚಿತ್ರವನ್ನು ಆ ನಾಟಕ ಪರಿಚಯಿಸುತ್ತದೆ. ಬೇಂದ್ರೆಯವರು ಫುಟ್‌ಬಾಲ್ ಆಟಗಾರರಾಗಿದ್ದು, ಆಟದ ಗೋಲ್‌ನಂತೆ ಜೀವನದಲ್ಲಿಯೂ ಗೋಲ್ ಇರಬೇಕು, ಅದನ್ನು ಸಾಧಿಸಬೇಕು ಎಂಬ ಮನೋಧರ್ಮದಿಂದ ನಾಟಕ ರಚಿಸಿದಂತಿದೆ.

'ಸಾಯೋಆಟ' 'ಜಾತ್ರೆ' ಎರಡು ಅಸಂಗತನಾಟಕಗಳು 'ಸಾಯೋಆಟ' ೧೯೨೫ರಲ್ಲಿ ರಚಿತವಾಗಿ ಹಲವಾರು ಪ್ರಯೋಗಗಳನ್ನು ಕಂಡು ಜನರನ್ನು ನಕ್ಕು ನಗಿಸಿ ಇಂದಿಗೂ ಪ್ರಸ್ತುತವೆನಿಸಿ ಸಾರ್ವಕಾಲಿಕ ಸತ್ಯವನ್ನು ತನ್ನಲ್ಲಿ ಒಳಗೊಂಡ ಅಂಶಗಳಿಂದ ಕೂಡಿದೆ. ಇಂದಿಗೂ ಜನಪ್ರಿಯುವಾಗಿದೆ. 'ಸಾಯೋಆಟ' ನಾಟಕವು ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗೆ ಅನುವಾದವಾಗಿರುವುದನ್ನು 'ಸಂಪಾದಕರ ನುಡಿ'ಯಲ್ಲಿ ವಾಮನಬೇಂದ್ರೆಯವರು ತಿಳಿಸಿದ್ದಾರೆ. 'ಮೈಸೂರಿನ ಮಹಾರಾಜಾ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳು ಈ ನಾಟಕದ ಸಂಸ್ಕೃತ ಅನುವಾದವನ್ನು ಮಾಡಿ ಅಭಿನಯಿಸಿದರು. ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಸಾಯೋಆಟದ ಇಂಗ್ಲಿಷ್ ಅನುವಾದವನ್ನು ಪ್ರೊ. ಗೋಪಾಲಕೃಷ್ಣ ಅಡಿಗರು ಮಾಡಿದರು.'

'ಸಾಯೋಆಟ' ನಾಟಕದಲ್ಲಿ ಸಮಾಜದಲ್ಲಿನ ವಿಪರ್ಯಾಸವನ್ನು ಹುಚ್ಚುದೊರೆ ಮತ್ತು ಹುಚ್ಚುದಿವಾನನ ಹುಚ್ಚಾಟವಾಗಿ ಚಿತ್ರಿಸಿದ್ದಾರೆ. ಆ ನಾಟಕದಲ್ಲಿಯ ವಿವಿಧ ವ್ಯಕ್ತಿಗಳು, ವಿವಿಧ ಪ್ರವೃತ್ತಿಯವರು, ವಿವಿಧ ಬದುಕಿನವರು ಅವರ ಸಹಜ ಆಡುನುಡಿ, ಬಾಗು ಬಳುಕಿನಿಂದ, ಹಾಸ್ಯ ವಾತಾವರಣದ ಸೃಷ್ಟಿಯಿಂದ ಕನ್ನಡ ನಾಟ್ಯ ಪ್ರಪಂಚಕ್ಕೆ ಅಂದು ಹೊಸತಾಗಿ ಬಂದವರು ಇಂದೂ ಹೊಸತಾಗಿ ನಿಂತಿರುವುದು–ಬೇಂದ್ರೆಯವರ ನಾಟಕಶಕ್ತಿಯ ಸಾರ್ವಕಾಲಿಕತೆಗೆ ದ್ಯೋತಕವಾಗಿದೆ.

'ಜಾತ್ರೆ' ನಾಟಕವನ್ನು ಬೇಂದ್ರೆಯವರು ೧೯೩೪ರಲ್ಲಿ ರಚಿಸಿದರು. ಅಂದಿನಿಂದ ಇಂದಿನವರೆಗೂ ಈ ನಾಟಕ ತುಂಬಾ ಜನಪ್ರಿಯವಾಗಿ ಹಲವು ಪ್ರಯೋಗಗಳನ್ನು ಕಂಡಿದೆ. ಇದರ

ಜನಪ್ರಿಯತೆಯನ್ನು ಕಂಡು ಬೇಂದ್ರೆಯವರೇ ಈ ನಾಟಕವನ್ನು ೧೯೫೩ರಲ್ಲಿ ಮರಾಠಿಗೆ ಅನುವಾದ ಮಾಡಿದ್ದಾರೆ. ಇದು ಹಿಂದಿ ಭಾಷೆಗೂ ಅನುವಾದವಾಗಿದೆ. ಅಂಟುರೋಗ ಪ್ಲೇಗಿನ ಹಿನ್ನೆಲೆಯ ಹುಚ್ಚಾಟ ಈ ನಾಟಕದ ವಸ್ತುವಾಗಿದೆ. ಹುಚ್ಚಾಪುರದಲ್ಲಿ ಪ್ಲೇಗ್ ಹರಡುತ್ತಿದ್ದರೂ ದೊರೆಯು ಆರ್ಥಿಕ ಲಾಭದ ದೃಷ್ಟಿಯಿಂದ ಜಾತ್ರೆ ನಡೆಸುವ ಛಲದಿಂದ ಡಂಗುರ ಸಾರಿಸಿ – 'ಊರಾಗ ಪ್ಲೇಗಿಲ್ಲ. ಯಾರೂ ಊರು ಬಿಡಕಾಗದೂ! ಜಾತ್ರೆ ಆಗೇ ಆಕ್ಕೈತಪೋ ಆಗೆ ಆಕ್ಕೈತಿ' ಎಂದು ಊರಿನ ಜನಕ್ಕೆ ಹೇಳಿ, ಆಳುವ ವರ್ಗದ ದರ್ಪ ಹಾಗೂ ಶೋಷಣೆಯ ಪ್ರತೀಕವಾಗುತ್ತಾನೆ. ದೊರೆಯ ಮಾತಿಗೆ ತಕ್ಕಂತೆ ತಲೆದೂಗುವ, ನಿಜ ಹೇಳಲು ಹೆದರುವ ಅಧಿಕಾರಶಾಹಿ ಪ್ರತೀಕವಾದ ಕಾರಭಾರಿ ಮತ್ತು ಡಾಕ್ಟರು ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತಾರೆ.

ವ್ಯವಸ್ಥೆಯ ವಿಪರ್ಯಾಸದ ದುರಂತ ಇಂಚು ಇಂಚಾಗಿ ವಾತಾವರಣವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿದ್ದರೂ ಅಹಂಕಾರದ, ಆರ್ಥಿಕಲಾಭದ ದೊರೆ ಮತ್ತು ಅವನ ಅಧಿಕಾರಶಾಹಿ ನೌಕರರಿಂದ ಇದೊಂದು ಹುಚ್ಚಾಟವಾಗಿ ಪ್ರೇಕ್ಷಕರನ್ನು ನಗೆಯಲ್ಲಿ ಮುಳುಗಿಸಿಬಿಡುತ್ತದೆ. ಪ್ರೇಕ್ಷಕನು ನಗುನಗುತ್ತ ವ್ಯವಸ್ಥೆಯಲ್ಲಿ ತನಗಿರಬೇಕಾದ ಎಚ್ಚರವನ್ನು ಪಡೆಯುವುದು ಈ ನಾಟಕದ ವೈಶಿಷ್ಟ್ಯವಾಗಿದೆ.

'ಹೆಣ್ಣಿಗೆ ಹೆಣ್ಣೇ ವೈರಿ' ಎಂದು ಚಿತ್ರಿಸಿರುವ ಸ್ತ್ರೀ ಪ್ರಧಾನ ನಾಟಕ 'ನಗೆಯ ಹೊಗೆ.' ಸ್ತ್ರೀಯರ ಹರಟೆ, ಮುಗ್ಧೆ ಭಾಗೀರಥಿಯ ಆತ್ಮಹತ್ಯೆಗೆ ಕಾರಣವಾಗುತ್ತದೆ. ಶೋಭನಾ ಮತ್ತು ಹನುಮಣ್ಣರ ಶೋಭನದ ಸುತ್ತ ಹೆಣೆದಿರುವ 'ಶೋಭನಾ' ನಾಟಕ, ನಾಟಕೀಯ

ವಾತಾವರಣವನ್ನು ತನ್ನಲ್ಲಿ ಹೊಂದಿ ವಿನೋದ ನಾಟಕವಾಗಿದೆ. ಹೀಗೆ ಬೇಂದ್ರೆಯವರ ನಾಟಕಗಳಲ್ಲಿ ಸಾಂಸಾರಿಕ ನೆಲೆಯ, ಸಾಮಾಜಿಕ ನೆಲೆಯ ನಾಟಕಗಳಿವೆ.

ನಾಟಕಗಳ ಜೊತೆಗೆ ಅವರು ೧೧ ಬಾನುಲಿ ರೂಪಕಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪ್ರಕಟಿತ ರೂಪಕಗಳು: ಯಕ್ಷಯಕ್ಷಿ, ಉತ್ತರಾಯಣ. ಅಪ್ರಕಟಿತ ರೂಪಕಗಳು : ಧನ್ಯವೃಂದಾವನ, ನಾರೀ ನಾರಾಯಣಿ, ಸಂತಸಮಾಗಮ, ರಂಗವಿಠ್ಠಲ, ರಾಮನವಮಿ, ದಾಸ ಕನಕದಾಸ, ದಯವೇ ಧರ್ಮದ ಮೂಲ, ಇಂದು ಗೋಕುಲಾಷ್ಟಮಿ ಮತ್ತು ಬೆನಕನ ಪೂಜೆ.

೨. ಸಣ್ಣ ಕಥೆಗಳು

ಬೇಂದ್ರೆಯವರು ಬರೆದಿರುವ ಕಥೆಗಳು ೮. 'ನಮನಮಗೆ ಬಂದು ಬಡೆದುಕೊಂಡ ಕತೆಗಳಿಂದ ಬಿಡಿಸಿಕೊಳ್ಳಬೇಕಾದರೆ ಆಡಿ ತೋಡಿಕೊಳ್ಳುವುದೇ ಹಾದಿ' ಎಂದು ರಚಿಸಿದ ಅವು 'ನಿರಾಭರಣ ಸುಂದರಿ' ಕಥಾಸಂಕಲನದಲ್ಲಿವೆ. ಅವರು ಅನುವಾದಿಸಿರುವ ೮ ಕಥೆಗಳು 'ಚೀನದ ಬಾಳುಬದುಕು' ಸಂಗ್ರಹದಲ್ಲಿವೆ. ಅವುಗಳ ಜೊತೆಗೆ ಅವರು ಉಪನ್ಯಾಸಗಳಲ್ಲಿ ಹೇಳುತ್ತಿದ್ದ ಮೂರು ಕಥೆಗಳನ್ನು ವಾಮನಬೇಂದ್ರೆಯವರು 'ಬೇಂದ್ರೆಯವರ ಮಾನಸ ಕಥೆಗಳು' ಎಂದು ಬರೆದಿದ್ದಾರೆ.

ಮಲ್ಲಿ : 'ನಿರಾಭರಣ ಸುಂದರಿ' ಚಿತ್ರಗಾರ ಪದ್ಮ. ಅವನು ಮಧ್ಯರಾತ್ರಿಯಾದರೂ ಚಿತ್ರರಚನೆಯಲ್ಲಿ ತೊಡಗಿರುವುದನ್ನು ಕಥೆಗಾರ ಬೇಂದ್ರೆಯವರು 'ಅವನ ಬಣ್ಣ ವಣ್ಣಿಗೆಯ ಸ್ಪರ್ಶಸ್ಪರ್ಶಕ್ಕೂ ಚಿತ್ರ ರೂಪು ಕಣ್ದೆರೆವಂತಿತ್ತು. ಅವನ ಚಿತ್ತದೊಳಗಿನ ಮೂರ್ತಿಯು

ಚಿತ್ರದಲ್ಲಿ ಮೂಡಿದಂತೆ, ಅವನ ಮುಖದಲ್ಲಿ ತೃಪ್ತಿಯು ತುಂಬುತ್ತಿತ್ತು. ಕಣ್ಣಿನ ಬಣ್ಣವೇರುತ್ತಿತ್ತು.' ಎಂದು ಬಣ್ಣಿಸಿದ್ದಾರೆ. ಇಂತಹ ಭಾವನಾಲೋಕದ ಕಥೆ ಇದಾಗಿದೆ. 'ಚಿತ್ರವು ಚಿತ್ರಕನನ್ನೇ ನುಂಗಿದಂತಿತ್ತು. ಅವನಿಗೆ ತನ್ನರಿವೂ ಇರಲಿಲ್ಲ.' ಆಗ ಎಚ್ಚೆತ್ತ ಪತ್ನಿ ನಾಗಶ್ರೀ ಪತಿಯನ್ನು ಮಾತನಾಡಿಸಬೇಕೆಂದಿದ್ದರೂ ತುಟಿತೆರೆಯದೆ ಚಿತ್ರವಸ್ತು 'ನಿರಾಭರಣಸುಂದರಿ'ಯನ್ನು ನೋಡಿ ಜಿಗುಪ್ಸಮನದವಳಾಗುತ್ತಾಳೆ. ಆಗಿನ ಅವರಿಬ್ಬರ ಸಂಭಾಷೆ ಚತುರ ಸಂವಾದವಾಗಿದೆ. ನಿಧಾನವಾಗಿ ಅವಲೋಕಿಸಿದಾಗ ಕವಯಿತ್ರಿಯಾದ ನಾಗಶ್ರೀಯ ಚಿತ್ತಕ್ಕೆ ಆ ಚಿತ್ರವು 'ತನ್ನ ಜೀವಜೀವಾಳದ ನಿರಂಜನ ಪ್ರಕೃತಿಯೆ ಆಕಾರತಾಳಿದಂತೆ ಹೊಳೆಯುವುದು.' ಆಗ ಆ ಚಿತ್ರವನ್ನು ಎತ್ತಿ ಮುದ್ದಿಟ್ಟು ಕಣ್ಣಿಗೊತ್ತಿ ಎದೆಗಪ್ಪಿಕೊಳ್ಳುವಳು. ಜಿನಯೋಗಿಯ ಆತ್ಮಬಿಂಬದ 'ನಿರಾಭರಣ ಸುಂದರಿ'ಗೆ ಪದ್ಮನು 'ಮಲ್ಲಿ' ಎಂದು ಕರೆಯುವನು.

ನಾಗಚಂದ್ರನ ಮಲ್ಲಿನಾಥಪುರಾಣವನ್ನು ಅಭ್ಯಾಸಮಾಡಿ ಸವಿದ ಬೇಂದ್ರೆಯವರು ಜೈನರ ಒಂದು ಪಂಗಡದವರು ಹೆಣ್ಣೆಂದೂ; ಇನ್ನೊಂದು ಪಂಗಡದವರು ಗಂಡೆಂದೂ ಆರಾಧಿಸುವ ಹಿನ್ನಲೆಯಲ್ಲಿ ತಮ್ಮ ಭಾವಲೋಕದ ಕಥೆಯಾಗಿ 'ನಿರಾಭರಣ ಸುಂದರಿ'ಯನ್ನು ಹೆಣೆದಿದ್ದಾರೆ ಎನಿಸುತ್ತದೆ. ಹೆಣ್ಣೆಂದು ಕರೆದ ಜೈನಸಂಪ್ರದಾಯದವರ 'ಮಲ್ಲಿ' ಯೇ ಬೇಂದ್ರೆಯವರಲ್ಲಿ ಕಥಾರೂಪ ಧರಿಸಿರುವ 'ನಿರಾಭರಣ ಸುಂದರಿ.'

ಮಗುವಿನ ಕರೆ : ಈ ಕಥೆ ಬೇಂದ್ರೆಯವರ ಕವನದಂತೆ, ಒಂದು ಭಾವದ ಕವಲಿನಂತೆ ಹಲವು ಹರವುಗಳನ್ನು ಪಡೆಯುತ್ತ ಸಾಗುವ ಕಥೆಯಾಗಿದೆ. ಜೀವನದಲ್ಲಿ ಬೇಸತ್ತ ಶಾಸ್ತ್ರೀಗಳ ಸೊಸೆಯು

ಮನದ ಭಾವಗಳನ್ನು ಇಲ್ಲಿ ಚಿತ್ರಿಸಿದ್ದಾರೆ. ಆ ನಿಸ್ಸಹಾಯಕ ಸಂಸಾರದ ಬಡವರ ಸೊಸೆಯಾದ ತಾನು ಯಾರಿಗೂ ಬೇಕಾಗಿಲ್ಲವೆಂದು ಬಾವಿಗೆ ಬೀಳಲು ಹೋದಾಗ ಅವಳ ಕೂಸಿನ ಅಳು ಅವಳ ಒಳಮನವನ್ನು ಎಚ್ಚರಿಸುತ್ತದೆ. 'ಅದಕ್ಕೆ ತಾನಲ್ಲದೆ ಯಾರು?' ಎಂದು ಕೊಡ ಸೇದಿ ಹಿಂದಿರುಗುತ್ತಾಳೆ.

'ಪಾಲಾಘೂ!' : 'ಪಾಲಾಘೂ' ಎಂದರೆ ಜತೆ ಬಿಡುವುದು, ಠೂ ಬಿಡುವುದು ಎಂದು ಅರ್ಥ. ಪ್ರಹ್ಲಾದ ಮತ್ತು ರಾಮ ಎಂಬ ಗೆಳೆಯರಲ್ಲಿ ಮಕ್ಕಳಾಟದ ಮಾತು ಮಾತಿನಲ್ಲಿ ಬರುವ 'ಪಾಲಾಘೂ'- ಪ್ರಹ್ಲಾದನ ಸಾವಿನಲ್ಲಿ ಅಂತ್ಯವಾಗುತ್ತದೆ. ಆದರೆ ಅಂತಹ ಗೆಳೆಯನನ್ನು ಕಳೆದುಕೊಂಡೆನಲ್ಲ ಎಂಬ ಕೊರಗು ರಾಮನನ್ನು ಕಾಡುತ್ತದೆ. ಮಕ್ಕಳ ಮನಸ್ಸನ್ನು ಸಹಜವಾಗಿ ಕಾಡುವ ಭಾವನೆಗಳನ್ನು ಬೇಂದ್ರೆಯವರು ಉತ್ತಮವಾಗಿ ಚಿತ್ರಿಸಿದ್ದಾರೆ. ಹೀಗೆ ಅವರು ರಚಿಸಿರುವ ಕಥೆಗಳಲ್ಲಿ ಜೀವ ಭಾವವಿದೆ. ಸಹ ಜೀವನದ ನಾದವಿದೆ. ಇನ್ನಿತರ ಕಥೆಗಳಾದ 'ಕಥೆಗಳ ಕಥೆ' 'ಮಂಗಾಟ', 'ನಾಸ್ತಿಕ', 'ಏಕಾಕಿನಿ' ಯನ್ನು ಓದಿಯೇ ಸವಿಯಬೇಕು.

ಮೆಕ್ಕಿಕುನ್ನಿ : 'ಮೆಕ್ಕಿಕುನ್ನಿ' ಕಲಗಡಗಿ ಹಣಮಪ್ಪಾ', 'ಸಕ್ಕರಿಗಿಣಿ' ಎಂಬ ಮೂರುಕಥೆಗಳು ಬೇಂದ್ರೆಯವರ ಮಾನಸ ಕಥೆಗಳು. ಇವುಗಳನ್ನು ಆಧರಿಸಿ ಸಂಭಾಷಣೆಯ ರೂಪದಲ್ಲಿ ಕುತೂಹಲ ಉಂಟಾಗುವಂತೆ ವಾಮನಬೇಂದ್ರೆಯವರು ಪ್ರತ್ಯೇಕ ಸಣ್ಣಕಥೆಗಳಾಗಿ ಬರೆದಿದ್ದಾರೆ. ಮುಗ್ಧೆ ದ್ಯಾಮವ್ವನ ಕಥೆಯಾದ 'ಮೆಕ್ಕಿಕುನ್ನಿ' ಒಂದು ಮನಮಿಡಿಯುವ ಜೀವದಯಾಪರ ಕಥೆ. ತನ್ನ ಮೊಮ್ಮಕ್ಕಳ ಪ್ರಾಣ ಆ ನಾಯಿಕುನ್ನಿ- ಮೆಕ್ಕಿ ಕುನ್ನಿಯ ಮೇಲೆ. 'ಅವರು ಮೆಕ್ಕಿಕುನ್ನಿ ಅಂತಿದ್ದರು ಅಂತ ನಾನೂ ಅಂತೇನಿ'

ಎಂದು ಹೇಳುವ ದ್ಯಾಮವ್ವ ಗುಡಿಯ ಪೂಜಾರಿ ಶಿವಪಾದ ಸ್ವಾಮಿಗೆ 'ಪ್ರತಿ ಅಮಾಸಿ ಮಂಗಳವಾರ ಕುನ್ನಿ ಪೆಸರಲೇ ಒಂದು ದೀಪ ಬೆಳಗು' ಎಂದು ಹತ್ತು ರೂಪಾಯಿ ನೀಡುತ್ತಾಳೆ. ಕಾರಣ ಕೇಳುವ ಪೂಜಾರಿಗೆ ಹೇಳಿದ ಕಥೆ: ಮಳೆಯಲ್ಲಿ ತೊಯ್ದು ಬಂದ ಮೊಮ್ಮಕ್ಕಳು 'ಕುನ್ನಿನೂ ಒಳಗೆ ತಗೋ ಅಜ್ಜಿ' ಎಂದಾಗ, ಕೋಪಗೊಂಡ ಅಜ್ಜಿ ದ್ಯಾಮವ್ವ ಮೆಕ್ಕಿ ಕುನ್ನಿನ ಕಸಗೊಂಡು ಬೀದಿಗೆ ಬಿಟ್ಟಾಗ ಎಲ್ಲಿಂದೊ ಬಂದ ಟ್ರಕ್ಕು ಮೆಕ್ಕಿ ಕುನ್ನಿ ಮೇಲೆ ಹಾದು ಹೋಗುತ್ತದೆ. ಆ ತನ್ನ ತಪ್ಪಿನ ಒಪ್ಪು ದೇವರ ಮುಂದೆ ತೀರಿಸುವ ದ್ಯಾಮವ್ವನ ಚಿತ್ರ ಈ ಕತೆಯಲ್ಲಿದ್ದು; ಜೀವದ ಮಿಡಿತ ಹಾಡುವ ಕತೆ ಇದಾಗಿದೆ.

೩. ಸಾಹಿತ್ಯದ ವಿರಾಟ್ ಸ್ವರೂಪ

ಬೇಂದ್ರೆಯವರು ೧೯೪೩ರಲ್ಲಿ ಶಿವಮೊಗ್ಗದಲ್ಲಿ ನಡೆದ ೨೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮಾಡಿದ ಭಾಷಣ 'ಸಾಹಿತ್ಯದ ವಿರಾಟ್ ಸ್ವರೂಪ.' ಅದರಲ್ಲಿ 'ನಮ್ಮ ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಸಂಜೀವನವನ್ನುಣ್ಣದೆ ನಾವು ಕನ್ನಡಿಗರಾಗಲಾರೆವು. ಕರ್ನಾಟಕಸ್ಥರಾಗುವುದು ಬೇರೆ ಕನ್ನಡಿಗರಾಗುವುದು ಬೇರೆ. ನಮ್ಮ ಸಾಹಿತ್ಯ, ನಮ್ಮ ದಿನದ ಮಾತು, ಜನದಮಾತು, ಮನದಮಾತು ಆಗಬೇಕು.' ಎಂದು ಕರೆಕೊಟ್ಟರು. ಆ ಭಾಷಣದ ಲೇಖನವನ್ನೂ ಸೇರಿಸಿ ಒಟ್ಟು ೧೨೮ ಲೇಖನಗಳ ೧೧೯೯ ಪುಟಗಳ ಬೃಹತ್‌ಕೃತಿ ಅದು. ಅದರಲ್ಲಿ ದೃಷ್ಟಿ-ದರ್ಶನ, ಕವಿ-ಕೃತಿ, ಕರ್ನಾಟಕ-ಮಹಾರಾಷ್ಟ್ರ ಮತ್ತು ವಿಚಾರ ವಿವೇಕ ಎಂಬ ನಾಲ್ಕು ಭಾಗಗಳಿವೆ.

ಬೇಂದ್ರೆಯವರಿಗೆ ಮಾತು ಕಾವ್ಯದಷ್ಟೆ ತೀವ್ರ, ಕ್ರಿಯಾಶೀಲ, ಅರ್ಥಪೂರ್ಣ ಬದುಕಾಗಿತ್ತು. ಅವರ ನುಡಿ ಮುತ್ತಾಗಿ ಮಾತೆಲ್ಲ ಜ್ಯೋತಿಯಾಗಿ ಬೆಳಗಿತು. ಅವರ ಮಾತಿನ ಗಾರುಡಿಗೆ ಸೋಲದವರಿರಲಿಲ್ಲ. ಜನ ಪ್ರೀತಿಯಿಂದ ಕರೆದ ಕಡೆಗೆ ಹೋಗಿ ನಾಡುನುಡಿ, ಧರ್ಮ ಶಿಕ್ಷಣ, ಸಮಾಜ ವಿಚಾರ ಸಾಹಿತ್ಯದ ರಸಗಂಗೆಯನ್ನು ಮಾತಿನ ಝರಿಯಲ್ಲಿ ಅರ್ಪಿಸುತ್ತಿದ್ದರು. ಅವರ ಭಾಷಣಗಳು 'ಮಾತೆಲ್ಲ ಜ್ಯೋತಿ'ಯಾಗಿ ಪ್ರಕಟವಾಗಿದೆ. ಅವರ ಇನ್ನೊಂದು ವೈಚಾರಿಕ ಬರಹಗಳ ಕೃತಿ 'ವಿಚಾರಮಂಜರಿ'.

ooo

೧೩. ನಾಲ್ಕು ಕವಿತೆಗಳ ಅರಿವು

೧. ಭಾವಗೀತೆ

ದ.ರಾ.ಬೇಂದ್ರೆಯವರು ಮುಗದ ಗ್ರಾಮದಲ್ಲಿ ಇರುವ ಸಮಯದಲ್ಲಿ (೧೯೩೨-೩೩) ವೇದನೆಗೆ ಒಳಗಾಗಿ ದುಗುಡದಿಂದಿದ್ದರು. ಅವರು ಕಟ್ಟಿದ್ದ 'ಗೆಳೆಯರ ಗುಂಪು' ವಿಘಟನೆಯಾಗಿತ್ತು. ಬ್ರಿಟೀಷ್ ಸಾಮ್ರಾಜ್ಯವನ್ನು ಎದುರಿಸಿ ಜೇಲುವಾಸ ಅನುಭವಿಸಿ, ಸ್ಥಾನಬದ್ಧತೆಗೆ ಒಳಗಾಗಲು ಕಾರಣವಾದ ತಮ್ಮ ಕವಿತಾಶಕ್ತಿಯ ಬಗ್ಗೆ ಅವರಿಗೆ ಹೆಮ್ಮೆಯುಂಟಾಗಿತ್ತು. 'ನರಬಲಿ' ಕವನವು ಬಲಿಮಾಡಿತೆನ್ನನು ಹೆಳವನಿದ್ದಲ್ಲಿಗೆ ಹೊಳೆ ಬಂದಿತು - ಎಂಬ ಹಿರಿಮೆ ಅವರದಾಗಿತ್ತು. ವಿರುದ್ಧ ಭಾವಗಳ ತಾಕಲಾಟದ ಸಂಘರ್ಷದಲ್ಲಿ ಋಣಾತ್ಮಕ ಸಂಗತಿ ಸಂದರ್ಭಗಳ ನೆನಪು ಮನಸ್ಸಿನ ಭಾರವನ್ನು ಹೆಚ್ಚಿಸಿದಂತೆ, ಧನಾತ್ಮಕ ಆಲೋಚನೆ, ಕಾವ್ಯಕೃಷಿ ನೀಡುವ ಮಧುರ ಆನಂದ ಆಹ್ಲಾದದಿಂದ ಅವರ ಮನಸ್ಸು ಮತ್ತು ದೇಹ ಹಗುರಾಗುತ್ತಿದ್ದವು.

ನಿರಾಸೆ, ಆತಂಕ, ಅನಿಶ್ಚಯತೆಗಳ ಬಸುರಿನಿಂದಲೇ ಸ್ಥಿರ ಚಿಂತನೆಯ ಕಾವ್ಯ ಹುಟ್ಟಿಬರುತ್ತಿತ್ತು. ಮನಸ್ಸು ಆಗತಾನೆ ಬಂದ ಮಲ್ಲಿಗೆಯಂತೆ ತಾಜಾ ಕಂಪು ಸೂಸಿ ಉಲ್ಲಾಸವಾಗಿರುತ್ತಿತ್ತು. ಆ ಆಹ್ಲಾದವೇ 'ಭಾವಗೀತ' ವಾಗಿ ಸಹೃದಯರ ಉಲ್ಲಾಸ, ಕ್ರಿಯಾಶೀಲತೆಗೆ ಕಾರಣವಾಗುತ್ತಿದೆ ಎಂದು ತಿಳಿದ ಕವಿ ಬೇಂದ್ರೆ - ಆ ಎಲ್ಲ ಭಾವಕ್ಕೆ ಪ್ರತಿಮೆಯಾಗಿ 'ಭೃಂಗ'ವನ್ನು ಕಂಡು 'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ' ಎಂಬ 'ಭಾವಗೀತ' ರಚಿಸಿದರು.

'ಭೃಂಗ'ವು ಹೂವಿನ ಮಕರಂದ ಸಂಗ್ರಹದಿಂದ ಅದನ್ನು ಮಧುವಾಗಿಸುವವರೆಗಿನ ಒಂದು ಪೂರ್ಣಕ್ರಿಯೆ ಅವರಿಗೆ 'ಭಾವಗೀತ' ಸೃಷ್ಟಿಯ ರೂಪಕವಾಗಿ ಕಂಡಿತು. ಕವಿಯ 'ಭಾವಗೀತ' ತುಂಬಿಯಂತೆ ಸಹೃದಯನನ್ನು ಹೊಕ್ಕು ಅವನನ್ನು ಮಧುರ ಭಾವನೆಗೆ ಒಳಗಾಗಿಸಿ ಮಧುವಾಗಿಸುವ ಲೀಲೆಯೆನಿಸಿತು. ಆ ಲೀಲೆಯಲ್ಲಿ ರಸಿಕ ಸಹೃದಯ ತುಂಬಿಯಂತೆ ನಲಿದು ಲಯಾನ್ವಿತ ನರ್ತನ ನಡಿಗೆಯಲ್ಲಿ ನಾದಕ್ಕೆ ತಕ್ಕಂತೆ ಓಲಾಡಿ ತಣಿವುದೇ ಆಹ್ಲಾದ, ಕಾವ್ಯದ ಸಾರ್ಥಕತೆ ಎನಿಸಿತು.

* * *

ಬೇಂದ್ರೆಯವರ 'ಭಾವಗೀತ'ದ ಕಲ್ಪನಾ ವಿಲಾಸವು ಮಕ್ಕಳನ್ನು ನಲಿಸುವ 'ಹಾರಗುದರಿ ಬೆನ್ನ ಏರಿ' ಬಂದಿಲ್ಲ. ಆನೆಯ ಅಂಬಾರಿಯ ಮೇಲೆ ಕುಳಿತು ವಿಜೃಂಭಿಸಿಲ್ಲ. 'ಮಾತನಾಡುವ ಗಿಣಿ' 'ಸುಧೆಯ ಕುಡಿದ ಹಕ್ಕಿ' ಅಥವಾ ಗಾಳಿ, ಮೋಡಗಳ ಸವಾರಿ ಮಾಡುತ್ತಲೂ ಬಂದಿಲ್ಲ. ಅದು ಬಂದಿರುವುದು 'ಭೃಂಗದ ಬೆನ್ನೇರಿ.' ಅದು ಜೀವನಾನುಭವ ಸಂಸ್ಕಾರಗೊಂಡು ಮಧುವಾದುದರ ಪ್ರತೀಕ.

ಕನ್ನಡದ 'ತುಂಬಿ'ಯೇ 'ಭೃಂಗ'. 'ತುಂಬಿ' ಬೇಂದ್ರೆಯವರಿಗೆ ತುಂಬಾ ಪ್ರಿಯವಾದ ಪದ. ಅವರು 'ಈ ತುಂಬಿ ಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು' ಎಂಬ ಚಿಂತನೆಯನ್ನು ನೀಡಿ ತುಂಬಿ ಬಾಳಿನ ಸವಿಯನ್ನು ಈ ನೆಲದ ಜನ ಅನುಭವಿಸುವಂತೆ ತಿಳಿ ಹೇಳಿದ್ದಾರೆ.

ಬೇಂದ್ರೆಯವರ ಭಾವಭೃಂಗ ರೆಕ್ಕೆ ಕಟ್ಟಿಕೊಂಡು ಹಾಡುವುದು 'ಜೇಂಗೊಡ' ಕ್ಕೆ.

'ಹಾರಿದೆನು ಜೇಂಗೊಡಕ್ಕೆ, ಹೀರೆದೆನು ಬಾಯ್ಹುಚ್ಚಿ
ತೀರಿದರು ತಣ್ಣವಿಲ್ಲ ಮೈ ಮರೆಯೆ ಕುಡಿದರೂ
ಮನದಣಿಯಲಿಲ್ಲ ಕಡೆಗೂ' **(ಜೇನುಹುಟ್ಟು : ಸಖೀಗೀತ)**

ಭೃಂಗವು ಅಲ್ಪಾಯುಷಿ. ಆದರೆ ಅದರ ಜೀವಿತದ ಪ್ರತಿಕ್ಷಣವು ಕ್ರಿಯಾಶೀಲ. ಸುಂದರ ಹುಳುವು ಸದಾ ಲವಲಿಕೆಯಿಂದಿದ್ದು ಮಧು ಸಂಗ್ರಹಿಸಿ ಜೇನು ಹುಟ್ಟುಕಟ್ಟಿ ತನ್ನೆಲ್ಲರನ್ನೂ ಒಳಗೊಂಡು ಬದುಕುವುದು ಈ ನೆಲದ ಜನರಿಗೆ ಒಂದು ಆದರ್ಶ. ಅನಂತಶಕ್ತ ಭಗವಂತನನ್ನು ಬೇಂದ್ರೆಯವರು 'ಹುಟ್ಟದಹುಟ್ಟು' ಎಂದಿದ್ದಾರೆ.

ಮುಟ್ಟದ ಮಾಟದ
ಹುಟ್ಟದ ಹುಟ್ಟಿಗೆ
ಜೇನಿನ ಥಳಿಮಳಿ
ಸನಿಹ ಹನಿ. **(ನಾಕುತಂತಿ)**

'ಪರಬ್ರಹ್ಮನಿಗೆ ಆದಿಯೂ ಇಲ್ಲ ಅಂತ್ಯವೂ ಇಲ್ಲ. ಅಂದರೆ ಹುಟ್ಟೂ ಇಲ್ಲ, ಸಾವೂ ಇಲ್ಲ. ಅದನ್ನು ಬೇಂದ್ರೆಯವರು ಪ್ರತಿಮಾ ಪೂರ್ವಕವಾಗಿ 'ಮುಟ್ಟದ ಮಾಟದ, ಹುಟ್ಟದ ಹುಟ್ಟಿಗೆ' ಎಂದಿದ್ದಾರೆ. 'ಜೇನಿನ ಥಳಿ ಮಳಿ', ಸಿಹಿ ತಳಿಯ ಮಳೆ ಅರ್ಥಾತ್ ಅಮೃತವರ್ಷ. ಅದು ಹತ್ತಿರದಲ್ಲೆ 'ಸನಿಹ ಹನಿ' ಯಾಗಿ ಅಮೃತಧಾರೆಯ ಬಿಂದುಗಳನ್ನು ತೊಟ್ಟಿಕ್ಕುವ ಆನಂದ ವೃಷ್ಟಿ.

* * *

ಮನ್ಮಥನ ಕಬ್ಬಿನ ಬಿಲ್ಲಿಗೆ ತುಂಬಿಗಳ ಸಾಲೇ ಹೆದೆ (ದಾರ). ಅದನ್ನು ಝೇಂಕರಿಸಿದಾಗ ಎಂತಹ ಮುನಿಗಳೂ ಕಾಮನ ಸೆಳೆತಕ್ಕೆ ಒಳಗಾಗುವರು ಎಂಬುದು ಕವಿಸಮಯ. ಅಂತಹ ಎಲ್ಲರನ್ನೂ ತನ್ನತ್ತ ಸೆಳೆವ ತುಂಬಿಯ ಬೆನ್ನೇರಿ ಕಲ್ಪನಾ ವಿಲಾಸ ಹೊರಟಿದೆ!

ತನ್ನ ಜೀವನಾನುಭವದ ಮಧುರ ನೆನಪನ್ನು ಕಾವ್ಯವಾಗಿ ನೀಡಿ ಅದರ ಆನಂದದಲ್ಲಿ ಲೀನವಾಗುವ ಕವಿಯೂ ಒಂದು

ಭೃಂಗವೆ. ಭೃಂಗ ತನ್ನ ಗುಂಯ್ ಗುಡುವ ನಾದದೊಡನೆ ಒಂದು ಲಯಬದ್ಧ ನಡೆಯನ್ನು ಹೊಂದಿ, ಚಾಂಚಲ್ಯದ ನೋಟದೊಡನೆ ಬಣ್ಣ ಬೆಡಗನ್ನು ಪ್ರದರ್ಶಿಸುತ್ತ ಮರೆಯಾಗುತ್ತದೆ. ಆದರೂ ಅದರ ಮಿಂಚಿನ ಚಲನೆ ಮನದಲ್ಲಿ ಹಾಗೆಯೇ ಉಳಿಯುತ್ತದೆ. ಕವಿಯ ಸೌಂದರ್ಯದ ಆವಿಷ್ಕಾರವು ಭೃಂಗದಂತೆ ಗೋಚರಿಸಿ ತಕ್ಷಣ ಮಾಯವಾಗುವ ಒಂದು ಫ್ಲಾಷ್‌ನಂತಹದು.

ಬೆಳಕಿನಲ್ಲಿ ಸದಾ ಗುಂಯ್‌ಗುಡುತ್ತಾ ಹರಿದಾಡುವ ಕಪ್ಪು ಬಣ್ಣದ ದುಂಬಿ ಬೇಂದ್ರೆಯವರಿಗೆ ಹಗಲು ನಕ್ಷತ್ರದಂತೆ. ಅದು ಸರಿದಾಡುವುದೇ ಮಿಂಚು ಹರಿದಂತೆ. ಅದೊಂದು ನಗೆಯ ಅಲೆ: 'ಮಿಂಚಿ ಮಾಯವಾಗುತ್ತಿತ್ತು ಒಂದು ಮಂದಹಾಸ.'

ನೆಲದ ರಸಗಂಧವನ್ನು ಹೀರಿದ ತರುವಿನಿಂದ ಹೊಮ್ಮಿದ ಹೂವಿನ ಮಕರಂದ ಸವಿದ 'ತುಂಬಿ' ಗಗನಮುಖಿಯಾಗಿ, ನೆಲ ಬಾನುವಿನ ಮಧುರ ಬಾಂದವ್ಯದ ಸವಿಗೆ ಪ್ರತಿಮೆಯಾಗಿದೆ. ಈ ಕವನದ ನಾದವೇ ಮಧುಭಾವವನ್ನುಂಟು ಮಾಡುವುದನ್ನು ಎರಡನೆಯ ನುಡಿ ಧ್ವನಿಸುತ್ತದೆ. 'ತುಂಬಿ'ಯಲ್ಲಿಯ ಅಂತಃಶಕ್ತಿ ಚೇತನ ರಸಲಹರಿಯ ಪ್ರಕಟರೂಪ ಜೇನು! ಹಿಗ್ಗು! ವಿಕಾಸ! ಆಹ್ಲಾದ!

ಕಾವ್ಯದ ಪ್ರಯೋಜನ ಏನು? ಎಂಬ ಪ್ರಶ್ನೆಗೆ ಉತ್ತರ : ಕಾವ್ಯ ರಸಾಸ್ವಾದನೆಯ ಆಹ್ಲಾದ ಎಂಬುದಾಗಿದೆ. ಅದನ್ನು ಬೇಂದ್ರೆಯವರು ಪ್ರಶ್ನೋತ್ತರವಾಗಿ ತಿಳಿಸಿರುವ ರೀತಿ ಮಧುಮಯ.

'ಏನು? ಏನು?' ಪ್ರಶ್ನೆ ತನ್ನೊಳಗೆ ಉತ್ತರ ಅಡಗಿಸಿಟ್ಟಂತೆ ಮಾರ್ನುಡಿಯುತ್ತದೆ – 'ಜೇನು? ಜೇನು?'

ಕಾವ್ಯರ್ಷಿ ಬೇಂದ್ರೆಯವರಿಗೆ ತನ್ನ ತಪಸ್ಸು ಗೀತವಾಗಿ ಹರಿದು ಸಹೃದಯರನ್ನು ಅಲೌಕಿಕ ಭಾವಕ್ಕೆ ಕೊಂಡೊಯ್ಯುವ

ಸಮರ್ಥ ಸಾಧನವಾಗಿದೆ. ಎಂಬ ಹೆಮ್ಮೆ ಇದೆ. ಹಾಗಾಗಿ ನುಡಿದಿದ್ದಾರೆ : 'ಓಂಕಾರದ ಶಂಕನಾದಕಿಂತ ಕಿಂಚಿದೂನಾ.'

ಭೃಂಗದ ಗುಂಗು ನಾದದ ಇಂಪು, ಅದರ ವಿಶಿಷ್ಟ ಸಂಮೋಹನ ಬೆಡಗು ಬಿನ್ನಾಣದಲ್ಲಿ 'ಅಲೌಕಿಕ ರಸ' ಪ್ರವಹಿಸುತ್ತದೆ. ಆ ರಸಾನಂದದಲ್ಲಿ ಕವಿಯಂತೆ ಸಹೃದಯರು ಒಂದಾಗಿ ಹೋಗುತ್ತಾರೆ : 'ಕವಿಯ ಏಕತಾನ ಕವನದಂತೆ ನಾದಲೀನಾ.'

* * *

'ಭಾವಗೀತ'ದ ಕಲ್ಪನಾ ವಿಲಾಸವು ಜೀವನತತ್ತ್ವ, ಚಿಂತನೆ, ಸವಿಧ್ಯಾನವನ್ನು ಹೊಂದಿ ಭೃಂಗದ ಬೆನ್ನೇರಿ ಸಾಗಿದೆ. ಅದು ತನ್ನ ಹೃದಯದಲ್ಲಿ ಸಿಹಿಯಾದ ಮಧುವನ್ನು ತುಂಬಿಕೊಂಡು ಕ್ರಿಯಾಶೀಲವಾಗಿ, ಸದಾ ಚಟುವಟಿಕೆಯಿಂದಿರುವ ಮಧುಕರನ ಬೆನ್ನೇರಿ ಸಾಗಿದೆ. ಅದೊಂದು ರಹಸ್ಯ ಪೂರ್ಣವಾದ, ಬಣ್ಣಿಸಲಾಗದ ಬೃಹದ್ಭಾವಯಾನ. ಮಧುಸಂಗ್ರಹದ ಆನಂದ ಲಹರಿಯ ಪುನೀತ ಪಯಣ.

ಕಾವ್ಯ ಸೃಷ್ಟಿಯು ಅಂತಃಶ್ಚೇತನವಾಗಿ ಒಡಮೂಡಿ ಕಲಾತ್ಮಕವಾಗಿ ಹೊಮ್ಮಿ ಬರಬೇಕು ಎಂಬುದನ್ನು ಬೇಂದ್ರೆಯವರು 'ಒಡಲ ನೂಲಿನಿಂದ ನೇಯುವಂತೆ ಜೇಡ ಜಾಲಾ' ಎಂಬ ಪ್ರತಿಮೆಯಲ್ಲಿ ತಿಳಿಸಿದ್ದಾರೆ. ಅದು ಅವರ ಕಲ್ಪನೆ ಮತ್ತು ಆಲೋಚನೆ ಪ್ರಕೃತಿಯೊಡನೆ ಒಂದಾಗಿ ನಲಿದು ಸೃಷ್ಟಿಗೊಂಡ ರೀತಿ. 'ಉಸಿರಿನಿಂದೆ ಹುಡುಕುವಂತೆ ತನ್ನ ಬಾಳ ಮೇಲಾ' ಎಂಬುದು ತಾಪಸಿಯ ಧ್ಯಾನವನ್ನು ತಿಳಿಸುತ್ತಲೆ ಅವನು ತೇಜಸ್ವಿಯಾಗಿ ಪ್ರಕಾಶಿಸುವುದನ್ನು ಹೇಳಿದೆ. ಅದು ಏಕಾಗ್ರತೆ, ಸಾಧನೆ, ತನ್ನತನದಿಂದಲೇ ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳುವ ಕಸುವು, ಜಾಣ್ಮೆ, ಕಲೆಗಾರಿಕೆಯ ವಿಕಾಸ ಪಥ.

* * *

ಮಂತ್ರ ಮಾತು ಅಲ್ಲ. ಏನೋ ಹಿರಿದಾದುದು. ಅದು ದೈವಿ ಆಲೋಚನೆಯಲ್ಲಿ ಗಟ್ಟಿಗೊಂಡ ಮನಸ್ಸಿನ ಶಕ್ತಿ. ಅದು ಪ್ರಾಪಂಚಿಕ ಜಂಜಡದಿಂದ ಮುಕ್ತವಾಗಲು ಕೈಗೊಂಡ ದೈವಿಕತೆಯ ಆವಿಷ್ಕಾರ. ಉನ್ನತ ನೆಲೆಯ ಸ್ವತಂತ್ರ ಚಿಂತನೆ. ಪರಿಶುದ್ಧತೆಗೆ ಸಾಗುವ ವಿಶಿಷ್ಟ ತಂತ್ರ. ಮಂತ್ರ ಸಾಧನೆಯಂತೆ ಕಾವ್ಯದ ಅನುಸಂಧಾನ. ಕಾವ್ಯವು ನಾವು ಕಾಣುವ ಹೊರಜಗತ್ತು ಮತ್ತು ನಮ್ಮ ಅಂತರ್ಯಾದ ಒಳ ವಿಶ್ವದ ಸಂಯೋಗದಿಂದ ಸೃಷ್ಟಿಗೊಂಡರೂ ಅತಿ ಸ್ವತಂತ್ರವಾದದ್ದು. ಅದು ತನ್ನದೇ ಸತ್ಯದಿಂದ ಮೊಳಗುವ ವಿಶಿಷ್ಟ ಸ್ವತಂತ್ರ ಪ್ರಕಾಶ. ಅದು ತೂರ್ಯಾವಸ್ಥೆಯಲ್ಲಿಯ ಮೊಳಗು.

'ತಿರುಗುತಿತ್ತು ತನ್ನ ಸುತ್ತು ಮೂಕ ಭಾವ ಯಂತ್ರಾ
ಗರ್ಭಗುಡಿಯ ಗರ್ಭದಲ್ಲಿ ಪಡಿನುಡಿಯುವ ಮಂತ್ರಾ
ಮೂಡಿ ಮೂಡಿ ಮುಳುಗಿ ಮುಳುಗಿ ಮೊಳಗುವೊಲು ಸ್ವಾತಂತ್ರಾ'

* * *

ಸೃಷ್ಟಿದೇವಿಯ ಆರಾಧನೆಗೆ ಭೃಂಗದ ಬೆನ್ನೇರಿ ಹೊರಟ ಕಲ್ಪನಾ ವಿಲಾಸವು ಆ ಭವ್ಯ ಪ್ರಕೃತಿಯ ಲೀಲಾವಿಲಾಸದಲ್ಲಿ ಒಂದಾಗಿ ಹೋಗಿದೆ.

'ಧೂಪ ಧೂಮಾ ಲಹರಿ ಲಹರಿ ಕಂಪಬಳ್ಳಿ' ಯಲ್ಲಿ ತೊನೆದಾಡಿ ಕಂಪಿಡಿದು ಹೋಗಿದೆ. ಅದರ 'ಚಿತ್ತರಂಗ ಭೂಮಾ' ಆಗಿದೆ. 'ಯೋ ವೈ ಭೂಮಾ ತತ್ಸುಖಂ ನಾಲ್ಪೇಸುಖಮಸ್ತಿ' ಎಂಬ ಉಪನಿಷತ್ತಿನ ಋಷಿವಾಣಿಯಂತೆ ಯಾವುದು ಭೂಮವೋ ಅಂದರೆ ಮಹತ್ತಾದುದೋ ಅದೇ ಸುಖ. ಅಲ್ಪದರಲ್ಲಿ ಸುಖವಿಲ್ಲ ಎಂಬ ಅನುಭವದಲ್ಲಿದೆ. ಆಗ ಅಲ್ಲಿ ಅರಳಿದ್ದು ಪ್ರೇಮಾ. ಪ್ರೇಮಾ Creative force. 'ದಾಂಗುಡಿಗಳ ಬಿಡುತಲಿತ್ತು ಅರಳಲಿತ್ತು, ಪ್ರೇಮಾ'

ಪ್ರೇಮ ಭಾವಾಂಕುರವಾದ ಮೇಲೆ ಅದು ಸೃಷ್ಟಿ ಕ್ರಿಯೆಗೆ ತೊಡಗುತ್ತದೆ. ಅದು ಭಾವ ಭೃಂಗವು ಪದಪದವನ್ನು ಹೊಕ್ಕು ನೀರ ಹೀರುವ ಕ್ರಿಯೆ. ನೀರುಗಟ್ಟಿಸುವ, ನೀರು ನಿಲ್ಲಿಸುವ ಆನಂದ. ಅಲ್ಲಿಯ ಪ್ರೇಮ ಕ್ರಿಯೆಯಲ್ಲಿ ಎಲ್ಲವೂ ಫಲರೂಪಿಯಾಗಿರುವುದಿಲ್ಲ. ಅದು 'ಅಯ್ಯೊ ನೋವೆ! ಅಹಹ ಸಾವೆ! ವಿಫಲ ಸಫಲ ಜೀವಾ' ಎಂಬ ಸಹಸ್ರಾರು ವೀರ್ಯ ಬೀಜಗಳಲ್ಲಿ ಕೆಲವೇ ಸಫಲವಾಗುವ ರೀತಿಯದು. ಸಫಲ ಪದಗಳು ಪ್ರತಿಭೆಗೆ ದಕ್ಕಿದ ನಂತರ ಭಾವ ಆನಂದ ಲಹರಿಗೆ ಸಿಕ್ಕಿ ಸುಖಿಸುತ್ತದೆ. ಬಿದಿಗೆ ಚಂದ್ರನನ್ನು ಕಂಡು ಅವನಂತೆ ವಿಕಾಸಗೊಳ್ಳ ತೊಡಗುತ್ತದೆ. ಅದು ಸದಾಸ್ಮಿತವಾಗಿ ಮುಗಿಲ ಚಿಕ್ಕೆಯೊಡನೆ ಸ್ನೇಹವನ್ನು ಬೆಳೆಸಲು ಮುಗಿಲಿಗೆ ಹಾರತೊಡಗುತ್ತದೆ.

ಹೀಗೆ ಉನ್ಮುಖವಾಗಿ ಕವಿ ಪ್ರತಿಭೆ ಸಾಗಿದರೂ ಅದರ ಸಹಜ ಸುಖ ನೆಲದ್ದು. ಇಲ್ಲಿಯ ಮೋಹ, ಸೌಂದರ್ಯ, ಬೆಡಗಿನ ಸೆಳೆತದಲ್ಲಿಯೂ ಅಮರತ್ವವಿದೆ : 'ಅಲ್ಲು ಇಲ್ಲು ಚೆಲುವು ನಿಂತು ಹಾಕುತ್ತಿತ್ತು ತಾಳಾ'. ಅದರೊಡನೆ ತಾನೂ ತಾಳ ಹಾಕಿ, ಏನೇ ಎಡರುತೊಡರಿದ್ದರೂ 'ಪ್ರಾಣತಂತು ಹೆಣೆಯುತಿತ್ತು ಬಾಳಾ.' ಅದರ ನಿರಂತರ ಬೆಳವಣಿಗೆ ಉಲ್ಲಾಸ ಕಂಡು ಅನಂತಕಾಳನಾದ ಯಮ 'ಬಂತೆಲ್ಲಿಗೆ?' ಎಂದು ಪ್ರಶ್ನೆ ಕೇಳಿ ಮೌನವಾಗಿದ್ದಾನೆ! ಆ ಪ್ರಶ್ನೆಯಲ್ಲಿ–ಅವನೂ ಅದರ ಸುಖವನ್ನು ಅನುಭವಿಸುತ್ತಿರುವನು – ಎಂಬ ಭಾವವಿದೆ.

ನಾನಲ್ಲ
ನೀನಲ್ಲ
ನನಲ್ಲಿ ನೀನಿಲ್ಲ
ಸಾವಿನ ನೋವಿಲ್ಲ ॥ ಕುಣಿಯೋಣು ಬಾರs ॥
ಇದ್ದದ್ದು ಮರೆಯೋಣ

ಇಲ್ಲದ್ದು ತೆರೆಯೋಣ
ಹಾಲ್ಜೇನು ಸುರಿಸೋಣ ॥ ಕುಣಿಯೋಣು ಬಾರs ॥
(ಕುಣಿಯೋಣು ಬಾರs : ಗರಿ)

ಕುಣಿಯೋಣು ಬಾರ ಎಂದು ಕಾಳನೊಡನೆ ಹೆಜ್ಜೆ ಹಾಕಿ ಆಹ್ಲಾದದಿಂದ 'ಹಿಗ್ಗಲಿ ಸಿರಿಮುಖ' ಎಂದು ಕುಣಿದು ನಲಿಯುತ್ತದೆ!

ಆಗ ಅದರ ಹಿಗ್ಗು : 'ಮಾತು ಮಾತು ಮಥಿಸಿ ಬಂದ ನಾದದ ನವನೀತಾ'. ತನ್ನ ಹಿಗ್ಗನ್ನು ಇತರರಿಗೆ ಬೀರುತ್ತ, ಅದರ ಪ್ರತಿಫಲನವಾಗಿ ತಾನು ಮತ್ತೆ ಮತ್ತೆ ಹಿಗ್ಗಿ ವಿಕಾಸಗೊಳ್ಳುವ ಅನಂತ ಆಹ್ಲಾದ. ಅದು ರೂಪಾತೀತ, ಭಾವಾತೀತವಾದ ಆನಂದ. ಯಾವುದೇ ಸ್ವಾರ್ಥ ಕೇಂದ್ರಿತ ಆರ್ಥಿಕ ಲಾಭ ನಷ್ಟಗಳಿಂದ ಮುಕ್ತವಾದ ಸಂತೋಷ : 'ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ'. ತನ್ನ ಫಲವನ್ನು ತಾನೇ ಸಂಪಾದಿಸಿ ಇತರರಿಗೂ ಹಂಚುವ ನಿಧಿ 'ಭಾವಗೀತೆ'. ಅದೊಂದು ಬಗೆಯಲ್ಲಿ ಆತ್ಮೋದ್ಧಾರದ ಸುಖ. ಬೇಂದ್ರೆಯವರ ಜೀವನದ ಅತ್ಯುತ್ತಮ ಆವಿಷ್ಕಾರ. ವಿಶ್ವದ ಶ್ರೇಷ್ಠ ಕವನಗಳ ಸಾಲಿನಲ್ಲಿ ಹೊಳೆವ ಮಾಣಿಕ್ಯ.

೨. ನಾಕುತಂತಿ

ಬೇಂದ್ರೆ ಅವರ ಕಾವ್ಯವು ರಸ, ರಮಣೀಯತೆ, ಪ್ರೇಮ, ಆನಂದ ಎಂಬ ನಾಲ್ಕು ಬಗೆಯ ಅರಿವಿನಿಂದ ಕೂಡಿದೆ. ಅವರ ಕಾವ್ಯವು ಉತ್‌ಯೋಗ. ಆದುದರಿಂದ ಅವರು ಅದನ್ನು 'ಕಾವ್ಯೋದ್ಯೋಗ' ಎಂದು ಕರೆದು– ಯೋಗ ಸಾಧನೆಯನ್ನು ಕಾವ್ಯದಲ್ಲಿ ಕಂಡು ಕಾವ್ಯಯೋಗಿಯಾದರು. ಭಾವ, ಛಂದ, ಧ್ವನಿ ಮತ್ತು ಸಹೃದಯ ಸಾಕ್ಷಾತ್ಕಾರದಿಂದ ಕಾವ್ಯ ಸಾಧನೆಯನ್ನು ಮಾಡಿದರು. ಅವರ ಕಾವ್ಯವನ್ನು ಭವ, ಭಾವ, ಅನುಭವ, ಅನುಭಾವದ ಪಥ ಹಿಡಿದು ಅಧ್ಯಯನ ಮಾಡಬೇಕು. ಅವರದು

ಭವದ ಅನುಭವದೊಡನೆ ಅಚಿಂತ್ಯದ ಅನುಭಾವದೆಡೆಗೆ ಸಾಗಿದ ಕಾವ್ಯ. ಅದು ದೇಶ, ಕಾಲ, ನಿಮಿತ್ತವನ್ನು ಮೀರಿದ ಅನಂತಶಕ್ತನ ಅರಿವಿನತ್ತ ಸಾಗಿದ ಚಿಂತನೆ. ಅದು ಜಾತಿ, ಮತ, ಪಂಥ, ಧರ್ಮದ ಎಲ್ಲೆ ಮೀರಿದ ವಿಶ್ವ ಮಾನವ ನೆಲೆಯ ಆಲೋಚನೆ.

'ಭವವು ಬೇಕು, ಅನುಭವವು ಬೇಕು, ಅನುಭಾವ ಬೇಕು ಒಳಗೆ। ಸ್ವಯಂಭುತ್ವದಾ ಜ್ಞಾನ ಬೇಕು. ಆದೀ ಸಮಾಧಿ ಬೆಳಗೆ.

(ಅರಳು ಮರಳು)

ಟಾಲ್‌ಸ್ಟಾಯ್ ಅವರು 'without Mysticism there can be no poetry, without poetry mysticism is superstition' ಎಂದು ಹೇಳಿದ್ದಾರೆ. ಆಧ್ಯಾತ್ಮದ ಗೂಢವನ್ನು ಹೊಂದಿದ ಕಾವ್ಯ ಸಹೃದಯನನ್ನು ಚಿಂತನಶೀಲನನ್ನಾಗಿಸಿ ಅವನು ಅಂತರಾತ್ಮದ ಶೋಧಕ್ಕೆ ಒಳಗಾಗುವಂತೆ ಮಾಡುತ್ತದೆ. ಅಂತಹ ಜಿಜ್ಞಾಸು ಸಾಧನಾ ಮಾರ್ಗದಲ್ಲಿ ಸಾಗಲು ಬೇಕಾದ ಓಂಕಾರದ ಚಿಂತನೆಯನ್ನು ಬೇಂದ್ರೆಯವರು ಕನ್ನಡದಲ್ಲಿ 'ನಾಕುತಂತಿ'ಯಾಗಿ ನೀಡಿದ್ದಾರೆ.

ಆವು ಈವಿನ
ನಾವು ನೀವಿಗೆ
ಆನು ತಾನದ
ತನನನಾಃ

ನಾಕುತಂತಿಯ 'ಆವು' ಈ ಕವನದ ಕೀಲಿಕೈ. ಅದು ಗ್ರಾಮೀಣರಲ್ಲಿ 'ಕರಾವು' ಎಂಬ ಪದ ಬಳಕೆಯಲ್ಲಿದೆ. ತೆಲುಗಿನಲ್ಲಿ ಹಸುವಿಗೆ ಈಗಲು 'ಆವು' ಎಂದು ಕರೆಯುತ್ತಾರೆ. ಈ ಜಗತ್ತು ಎಂಬ ಕಾಮಧೇನು ಈದದ್ದರಿಂದ ನಾವು ನೀವು ಆಗಿದ್ದೇವೆ. ಅದನ್ನು ನಡೆಸುವ 'ಆನು' ಎಂಬ ಆಧಾರ ಪರಮಾತ್ಮ ಇದ್ದಾನೆ

ಎಂಬ ಅರಿವು ಉಂಟಾದಾಗ ಈ ಬದುಕು 'ತನನನಾಃ' ಸಂಗೀತದಂತೆ ಮಧುರವಾಗಿ ಸುಖಮಯವಾಗುತ್ತದೆ. ಕವಿಯು ಈ ಕವನದ ಎರಡನೆ ಭಾಗದಲ್ಲಿ

ಗೋವಿನ ಕೊಡುಗೆಯ
ಹಡಗದ ಹುಡುಗಿ
ಬೆಡಗಿಲೆ ಬಂದಳು
ನಡು ನಡುಗಿ

ಎಂದು ಹೇಳಿದ್ದಾರೆ. 'ಹಡಗದ ಹುಡುಗಿ' ಕಟ್ಟುಮಸ್ತಾದ ಎತ್ತರದ ನಿಲುವಿನ ಹೆಣ್ಣು. She is like a ship ಎಂಬ ಹಡಗಿನಂತಹವಳು. ಜನಪದರ ನುಡಿಗಟ್ಟಿನಲ್ಲಿ ಈ ಪದದ ಬಳಕೆ ಹೀಗಿದೆ : 'ಗಂಡ ಕೊಡವಿ ಹೋದ ರೆಂಬೆ ಅಂಗವ್ನೆ. ಹೆಂಡ್ತಿ ಹಡಗು ಇದ್ದಂಗವ್ಳೆ.' ನಾನು ಆ ಹೆಣ್ಣನ್ನು ಜ್ಞಾನಕನ್ಯೆ ಎಂದು ಕರೆದಿದ್ದೇನೆ.

ಆತ್ಮಜ್ಞಾನದ ಶೋಧದಲ್ಲಿ ಒಂದಾದ ಯೋಗಿ ಷಟ್‌ಚಕ್ರಗಳ ಉನ್ಮೀಲನೆಗೆ ಒಳಗಾದ ಪ್ರತಿಮೆಗಳು ಈ ಭಾಗದಲ್ಲಿವೆ. ಮೂಲಾಧಾರ, ಅಧಿಷ್ಠಾನ, ಮಣಿಪುರ, ಅನಾಹುತ, ವಿಶುದ್ಧಿ, ಆಜ್ಞಾಚಕ್ರದ ಮೂಲಕ ಸಹಸ್ರಾರದಲ್ಲಿ ಬೆಳಕು ಕಂಡ ಯೋಗಿಯ ಅನುಭವ ಇಲ್ಲಿ ಕಾವ್ಯವಾಗಿ ಹರಿದಿದೆ.

ನಾಡಿಯ ನಡಿಗೆಯ
ನಲುವಿನ ನಾಲಿಗೆ
ನೆನೆದಿರೆ ಸೋಲುವ
ಸೊಲ್ಲಿನಲಿ;

ಮುಟ್ಟದ ಮಾಟದ
ಹುಟ್ಟದ ಹುಟ್ಟಿಗೆ
ಜೇನಿನ ಥಳಿಮಳಿ
ಸನಿಹ ಹನಿ;

ಬೆಚ್ಚಿದ ವೆಚ್ಚವು
ಬಸುರಿನ ಮೊಳಕೆ
ಬಚ್ಚಿದಾವುದೊ
ನಾ ತಿಳಿಯೆ.

'ನಾಡಿಯ ನಡಿಗೆಯ' ಎಂಬುವದು ಉನ್ಮುಖಗೊಂಡ ಕುಂಡಲಿನೀ ಶಕ್ತಿ ಇಡಾ ಪಿಂಗಳಾ ನಾಡಿಗಳ ಮೂಲಕ ಸುಷುಮ್ನಾ ನಾಡಿಯನ್ನು ಸೇರಿ ಊರ್ಧ್ವ ಮುಖವಾಗುವುದರ ಸೂಚನೆ. ಅದು 'ನಲುವಿನ ನಾಲಗೆ' ಯಾಗಿದೆ. ಅಂದರೆ ಇಲ್ಲಿ ನಾಲಿಗೆ ಕುಂಡಲಿನೀ (ಸರ್ಪ) ಶಕ್ತಿಯನ್ನು ಪ್ರತಿಮಿಸುತ್ತದೆ. 'ನೆನೆದಿರೆ ಸೋಲುವ' ಎಂಬುದು–ಸಹಸ್ರಾರ ಸೇರಿದಾಗ ಸ್ರವಿಸುವ ಅಮೃತ ಪಾನದಿಂದ ತೊಯ್ದಿರಲು–ಅರ್ಥಾತ್ ಜೀವಾತ್ಮ ಮತ್ತು ಪರಮಾತ್ಮ ಒಂದಾದಾಗ ಮೌನ ಆವರಿಸುವ ಭಾವವನ್ನು ಪ್ರತಿಮಿಸುತ್ತದೆ. ಅದು ನಾಮ ಸ್ಮರಣೆಯ ಮಾತು ('ಸೊಲ್ಲು') ಸೋಲುವುದರ (ನಿಲ್ಲುವುದರ) ಸೂಚನೆಯಾಗಿದೆ.

ಪರಬ್ರಹ್ಮನಿಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಅಂದರೆ ಹುಟ್ಟೂ ಇಲ್ಲ, ಸಾವೂ ಇಲ್ಲ. ಅದನ್ನು ಬೇಂದ್ರೆಯವರು ಪ್ರತಿಮಾಪೂರ್ವಕವಾಗಿ 'ಮುಟ್ಟದ ಮಾಟದ, ಹುಟ್ಟದ ಹುಟ್ಟಿಗೆ' ಎಂದಿದ್ದಾರೆ. ಅದು ಜೇನುಹುಟ್ಟಿನಂತಹ ಸೃಷ್ಟಿ. ಅಂತಹದರ ಫಲವೆಂದರೆ 'ಜೇನಿನ ಥಳಿ ಮಳಿ' ಸಿಹಿ ತಳಿಯ ಮಳೆ ಅರ್ಥಾತ್ ಅಮೃತ ವರ್ಷ. ಅದು ಹತ್ತಿರದಲ್ಲೇ 'ಸನಿಹ ಹನಿ'ಯಾಗಿ ಅಮೃತಧಾರೆಯ ಬಿಂದುಗಳನ್ನು ತೊಟ್ಟಿಕ್ಕುವ ಆನಂದ ವೃಷ್ಟಿ. ಅಂತಹ ಬ್ರಹ್ಮಸೃಷ್ಟಿಯಲ್ಲಿ ಬೆಸುಗೆಗೊಂಡ ಜೀವಾತ್ಮಗಳು ('ಬೆಚ್ಚಿದ ವೆಚ್ಚವು') ಮುಕ್ತಿಯ ಅಥವಾ ಸಾಕ್ಷಾತ್ಕಾರಕ್ಕಾಗಿ ಅಂಕುರಗೊಂಡಿವೆ ('ಬಸುರಿನ ಮೊಳಕೆ') ಅಂಥ ಸಾಕ್ಷಾತ್ಕಾರದ ದಿವ್ಯಕ್ಷಣದಲ್ಲಿ ಬಚ್ಚಿಟ್ಟಿದ್ದೇನು, ಮುಚ್ಚಿಟ್ಟಿದ್ದೇನು ಎಂಬ ಯಾವ ಪರಿವೆಯೂ

ಜೀವಾತ್ಮನಿಗೆ ಇರುವುದಿಲ್ಲ. ಅಂದರೆ ಅವನು ಆನಂದ ತುಂದಿಲನಾಗಿರುತ್ತಾನೆ, ಸಚ್ಚಿದಾನಂದ ಸ್ವರೂಪಿಯಾಗಿರುತ್ತಾನೆ. ಎಂಬ ಭಾವ ಮೇಲಿನ ನುಡಿಗಳಲ್ಲಿದೆ.

ಈ ಕವನದ ಭಾಗ ಮೂರು ಸವಾಲು ಜವಾಬಿನ ರೀತಿಯಲ್ಲಿದೆ. ಅಲ್ಲಿ ಸ್ವಾಮಿ (ಸಾವೀ)ಯ ಮಗಳಾದ ಜ್ಞಾನಕನ್ಯೆ, ಭಾವಿ (ಮುಂದೆ ಆಗಲಿರುವ) ಮಗಳಾದ ಮೋಕ್ಷ ಕನ್ಯೆಯರ ದಿಗಿಲು ಹುಟ್ಟಿಸುವ ಎಚ್ಚರಿಕೆಯ ಮಾತಿಗೆ ಜೀವಿ (ಕವಿ) ಕೊಟ್ಟ ಉತ್ತರವಿದೆ.

‘ಚಿತ್ತೀ ಮಳಿ, ತತ್ತೀ ಹಾಕತಿತ್ತು
ಸ್ವಾತಿ ಮುತ್ತಿನೊಳಗ
ಸತ್ತಿ ತಯೊ ಮಗನ್ಯ
ಅಂತ ಕೂಗಿದರು
ಸಾವೀ ಮಗಳು, ಭಾವೀ ಮಗಳು ಕೂಡಿ.

ಸಾಧಾರಣ ಮನುಷ್ಯನಾಗಿದ್ದ ವ್ಯಕ್ತಿ ಯೋಗಿಯಾದದ್ದು ಸ್ವಾತಿ ಮಳೆಯ ಹನಿ ಚಿಪ್ಪಿನಲ್ಲಿ ಬಿದ್ದು ಮುತ್ತು ಆದಂತೆ. ಅದನ್ನು ಮತ್ತೆ ನೀರಿಗೆ ಹಾಕಿದರೆ ನೀರು ಆಗುವುದಿಲ್ಲ. ಹಾಗೆ ಷಟ್‌ಚಕ್ರದ ಉನ್ಮೀಲನೆಗೆ ಒಳಗಾದಯೋಗಿ ಸತ್, ಚಿತ್, ಆನಂದದ ‘ಸತ್’ ಆಗಿಹೋದ ಎಂಬುದನ್ನು ಸಾವೀ ಮಗಳು ಭಾವೀ ಮಗಳು ಕೂಡಿ ಹೇಳುತ್ತಿದ್ದಾರೆ.

ಅರಿಸ್ಟಾಟಲ್‌ನಿಂದ ಡಾ.ಎಸ್. ರಾಧಾಕೃಷ್ಣನ್‌ವರೆಗೆ ಈ ನೆಲದ ಅಧ್ಯಾತ್ಮಿಕ ಚಿಂತಕರು ಆಲೋಚಿಸಿದ–ಈ ಲೋಕದಲ್ಲಿ ಮನುಷ್ಯ ಜನ್ಮದ ಅರ್ಥ ಮತ್ತು ಸಾರ್ಥಕತೆಯನ್ನು ಬೇಂದ್ರೆ ‘ನಾಕುತಂತಿ’ಯಾಗಿ ಕನ್ನಡದಲ್ಲಿ ಓಂಕಾರದಂತೆ ಮಿಡಿದಿದ್ದಾರೆ.

ಈ ‘ನೀನು’ ಎಂಬ ಶರೀರದಲ್ಲಿರುವ ‘ನಾನು’ ಎಂಬ ‘ಅಹಂಕಾರ’ ಸಂಕುಚಿತ, ಸ್ವಾರ್ಥವನ್ನು ಹೊಂದಿದೆ. ಅದನ್ನು

ನುಡಿಸುತ್ತ ಅದರ ಮಿತಿಯನ್ನು ಅರಿತು ಅದನ್ನು ತಹಬದಿಗೆ ತಂದುಕೊಂಡಾಗ ಮನಸ್ಸಿನ ಆಲೋಚನೆ ವಿಶಾಲವಾಗಿ ಕುಟುಂಬ, ದೇಶ, ಕಾಲದ ಮಿತಿಯನ್ನು ಮೀರಿ ವಿಶ್ವವ್ಯಾಪಿಯಾಗಿ ವಿಶ್ವಸಂಗ್ರಹಾತ್ಮಕವಾಗುತ್ತದೆ. ಇಂದ್ರಿಯ ಸೇವಕನಾಗಿದ್ದ 'ನೀನು' ಎಂಬ ಶರೀರ ಹೊಂದಿದ ವ್ಯಕ್ತಿ ಬುದ್ಧಿಯ ಉಪಾಸಕನಾಗಿ 'ತಾನು' ಎಂಬ ಆತ್ಮದ ಆಧಾರದಿಂದ 'ಆನು' ಎಂಬ ಪರಮಾತ್ಮನ ಶೋಧಕ್ಕೆ ತೊಡಗುತ್ತಾನೆ. ಆಗ ಅದು ಲೋಕ ಸಂಗ್ರಹಾತ್ಮಕವಾಗಿ 'ಆನು' ವಿನ ನಿಜರೂಪದ ಅನುಭವವಾಗಿ ಆ ಅನುಭಾವದ ನೆಲೆಯಲ್ಲಿ ಶಾಂತಿಯನ್ನು ಕಾಣುತ್ತ ಆನಂದಮಯವಾಗುತ್ತಾನೆ. ಆ ಆನಂದವೇ 'ಆನು'. ವ್ಯಕ್ತಿ ಸತ್ಯ ಶೋಧಕನಾಗಿ, ನಿರ್ಭಯದ ಆಯುಧ ವಿಡಿದು ಹೊರಟು ಸಮಷ್ಟಿಯ ಶಾಂತಿ ಸುಖವನ್ನು ವ್ಯಷ್ಟಿಯ ನೆಲೆಯಿಂದ ಸಾಧಿಸುತ್ತಾನೆ.

ಈ ರೀತಿ ಮರ್ತ್ಯಜೀವಿ ಎಂಬ ವೀಣೆಗೆ ನಾಕೇ ನಾಕುತಂತಿ. ಅದನ್ನು 'ಸೊಲ್ಲಿಸಿದರು' ಎಂದರೆ ನುಡಿಸಿದರು; 'ನಿಲ್ಲಿಸಿದರು' ಅಂದರೆ ನುಡಿಸುವುದನ್ನು ಬಿಟ್ಟರು ಆ ನಾಕುತಂತಿ ಹಾ ಓಂ ದಂತಿ'ಯನ್ನು ನೆನಪಿಸುವ 'ಓಂಕಾರವಾಗಿದೆ. ಪ್ರಣವನಾದವಾಗಿದೆ.

ಅದು ಕನ್ನಡದ ನಾಕುತಂತಿ. ವಿಶ್ವದ ನೆಲೆಗೆ ಕೊಂಡೊಯ್ಯುವ ಶಾಂತಿ ಸಾಧಕ ಮಂತ್ರ, ಅದು 'ಅಂಬಿಕಾತನಯದತ್ತ' ನ ತಪಸ್ಸಿನ ಫಲ.

'ನಾನು' 'ನೀನು'
'ಆನು' 'ತಾನು'
ನಾಕೆ ನಾಕುತಂತಿ.
ಸೊಲ್ಲಿಸಿದರು ನಿಲ್ಲಿಸಿದರು ಹಾ ಓಂ ದಂತಿ!

೩. ಪಾತರಗಿತ್ತಿ ಪಕ್ಕ

ಬೆಡಗು ಬಿನ್ನಾಣದ ಆಕರ್ಷಕ ಚಿಟ್ಟೆಯನ್ನು ಕಂಡು ನಲಿದ ಮುಗ್ಧ ತಂಗಿಯ ಉತ್ಸಾಹವನ್ನು ಕವಿ ದ.ರಾ. ಬೇಂದ್ರೆ 'ಪಾತರಗಿತ್ತಿ'

ಕವನವಾಗಿ ರಚಿಸಿದ್ದಾರೆ. ಅವರ ನವನವೀನ ಬಣ್ಣನೆಯಲ್ಲಿ ನಮಗೆ ಗೊತ್ತಿರುವ ಚಿಟ್ಟೆಯ ಅಪರಿಚಿತ ಆಯಾಮಗಳನ್ನು ತಿಳಿದಾಗ ಮನಸ್ಸು ಮುದಗೊಳ್ಳುತ್ತದೆ. ತಂಗಿಯು ಅಕ್ಕನಿಗೆ ಕೇಳುತ್ತಿದ್ದಾಳೆ :

'ಪಾತರಗಿತ್ತಿ ಪಕ್ಕಾ । ನೋಡಿದೇನಽ ಅಕ್ಕಾ!'

ತಂಗಿಯು ತಾನು ಪಾತರಗಿತ್ತಿಯ ಪಕ್ಕ (ರೆಕ್ಕೆ)ದಲ್ಲಿ ಕಂಡ ಬೆರಗನ್ನು ಅಕ್ಕನಿಗೆ ಹೇಳುತ್ತ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಿದ್ದಾಳೆ. ಆ ತಂಗಿಗೆ ಪಾತರಗಿತ್ತಿಯ ರೆಕ್ಕೆಯ ಮೇಲಿರುವುದು ಹಳ್ಳಿಯ ಜನಗಳ ಮೈ ಮುಖದ ಮೇಲೆ ಕಂಡ ಹಚ್ಚೆಯ ಪ್ರತಿ ರೂಪ. ಅವಳು ಆ ದೇಸಿಕಲೆಯನ್ನು – ಹಸಿರು ಗಿಡಮೂಲಿಕೆಗಳಿಂದ ತಯಾರಿಸಿದ ರಸವನ್ನು ಹಚ್ಚಿ, ಹಚ್ಚೆ ಚುಚ್ಚುವುದನ್ನು ಕಂಡಿದ್ದಾಳೆ. ಆ ಚುಚ್ಚಿದ ಭಾಗಕ್ಕೆ ನಂಜು ಆಗದಿರಲು ಅರಿಷಿಣ ಹಚ್ಚುವುದನ್ನು ನೋಡಿದ್ದಾಳೆ. ಹಣೆ, ಗಲ್ಲ, ಮುಂಗೈ, ತೋಳುಗಳ ಮೇಲೆ ಚಿತ್ತಾರಗೊಂಡ ಹೂವು, ನಕ್ಷತ್ರ, ಸೀತೆ ಸೆರಗು, ಮುತ್ತಿನ ಬಳ್ಳಿ, ಒಡವೆ, ಶಿವನ ಬಾಸಿಂಗ, ಬಾಳೆಗಿಡ ಚಿತ್ತಾರಗಳ ಕಲೆಯನ್ನು ಮೈ ಮನಗಳಲ್ಲಿ ತುಂಬಿಕೊಂಡಿದ್ದಾಳೆ. ಜೀವಂತ ಚೇತನವಾದ ಪಾತರಗಿತ್ತಿಯ ರೆಕ್ಕೆಗಳಿಗೆ ಅನಂತಶಕ್ತ ಹಚ್ಚೆ ಹಚ್ಚಿರುವುದನ್ನು ಕಂಡು ಅಚ್ಚರಿಗೊಂಡಿದ್ದಾಳೆ. ಅದರ ಬಣ್ಣ, ಬೆಡಗು ಲವಲವಿಕೆಗೆ ಸರಿಸಾಟಿಯಾಗಿ ಓಡಿ, ಪಾತರಗಿತ್ತಿಯನ್ನು ಹಿಡಿದು ನೋಡಿ ಅಕ್ಕನಿಗೆ ಹೇಳುತ್ತಿದ್ದಾಳೆ – ಅದನ್ನು ಮುಟ್ಟಿ ನೋಡಿದೆ ಕೈ ಎಲ್ಲ ಅರಿಷಿಣವಾಯಿತು. ಅದಕ್ಕೆ ಸೃಷ್ಟಿಕರ್ತ 'ಹಸಿರು ಹಚ್ಚೆ ಚುಚ್ಚಿ! ಮೇಲಕರಿಷಿಣ ಹಚ್ಚಿ' ಕಳುಹಿಸಿದ್ದಾನೆ!

ಚಿಟ್ಟೆಯ ರೆಕ್ಕೆಯ ಮೇಲೆ ಹುರುಪೆಗಳಿವೆ. ಆ ಮೋಹಕ ಲಾವಣ್ಯದ 'ಪಕ್ಕ' ಹಿಡಿಯಲು ಹೋದರೆ ನಮ್ಮ ಕೈಗೆ ಹುರುಪೆ

ಅಂಟಿಕೊಳ್ಳುತ್ತದೆ. ಹಾಗೆ ಅಂಟಿಕೊಳ್ಳಲು ಅದರಲ್ಲಿರುವ ವಿವಿಧ ವರ್ಣದ್ರವ್ಯವೇ ಕಾರಣ. ಅದು ಬೆಳಕಿನ ಕಾರಣದಿಂದ ಹಲವು ಬಣ್ಣಗಳನ್ನು ಹೊಮ್ಮಿಸುತ್ತದೆ. ಆ ಹುರುಪೆಯನ್ನು ನಾವು ಹೆಚ್ಚು ಅದುಮಿ ಅಲುಗಾಡಿಸಿ ಹಿಂಸಿಸಿದಾಗ ರೆಕ್ಕೆಗಳ ಸಮತೋಲನಕ್ಕೆ ಧಕ್ಕೆಯಾಗುತ್ತದೆ.

ತಂಗಿಯ ಕುತೂಹಲದ ಹಚ್ಚೆ ಪಾತರಗಿತ್ತಿಯ ರೆಕ್ಕೆಯ ಮೇಲೆ ತನ್ನ ವರ್ಣವೈಭವದ ಚಿತ್ತಾರದಲ್ಲಿ ಮೌನದಲ್ಲಿ ಕಂಗೊಳಿಸುತ್ತಿದೆ. ಹೀಗೆ ಮೌನದ ಪ್ರತಿಮೆಯಂತೆ ಹಚ್ಚೆ ಅಲ್ಲಿರುವುದನ್ನು ಕಾವ್ಯ ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಅದು ಕವಿಯ ಕಲ್ಪನಾ ಸಾಮರ್ಥ್ಯದಲ್ಲಿ ಒಂದಾದ ಕಾವ್ಯ ರಚನಾ ಕುಶಲತೆ. ಸ್ಥಾವರವಾದ ದೇಸಿಕಲೆ ಹಚ್ಚೆ ಜಂಗಮವಾಗಿ ಪಾತರಗಿತ್ತಿಯಲ್ಲಿ ಹರಿದಾಡಿ ಸಹೃದಯನಿಗೆ ಕಚಗುಳಿ ಇಡುತ್ತದೆ.

ಪಾತರಗಿತ್ತಿಯ ರೆಕ್ಕೆಯನ್ನು ನೋಡುತ್ತಿದ್ದರೆ ಅದರ ರಚನೆಯಲ್ಲಿ ಸುತ್ತಲೂ ಹೊನ್ನ ಚಿಕ್ಕಿ ಚಿಕ್ಕಿಯ ಹೊಳಪಿದೆ. ಮಧ್ಯದಲ್ಲಿ ಬೆಳಗುವ ಬೆಳ್ಳಿಯಂತಹ ಕಣ್ಣು (ಅಕ್ಕಿ=ಅಕ್ಷಿ) ಇದೆ.

'ಹೊನ್ನ ಚಿಕ್ಕಿ ಚಿಕ್ಕಿ। ಇಟ್ಟು ಬೆಳ್ಳಿ ಅಕ್ಕಿ'

ಹೆಣ್ಣು ಮಕ್ಕಳು ಕಾಡಿಗೆ ಹಚ್ಚಿಕೊಂಡು ನಲಿದ ಸೊಬಗನ್ನು ತಂಗಿಯು ಪಾತರಗಿತ್ತಿಯಲ್ಲಿ ನೋಡಿ ಅಕ್ಕನಿಗೆ ಹೇಳುತ್ತಿದ್ದಾಳೆ : **'ಸುತ್ತೂ ಕುಂಕುಮದೆಳಿ। ಎಳೆದು ಕಾಡಿಗೆ ಸುಳಿ'.**

* * *

'ನನ್ನ ಚಿತ್ರಕ ಶಕ್ತಿ ಉತ್ಪ್ರೇಕ್ಷೆಯನೇರಿ
ಬಣ್ಣಬಣ್ಣದ ಬಣ್ಣನೆಗೆ ಒಲಿದಿತು;

ಎಂದು ಹೇಳುವ ಬೇಂದ್ರೆಯವರ ಉತ್ಪ್ರೇಕ್ಷೆಯು 'ಪಾತರಗಿತ್ತಿ'ಯಲ್ಲಿ ಚೆಲ್ಲುವರಿದಿದೆ. ಅವರ ಚಿತ್ರಕಶಕ್ತಿ ತಂಗಿಯ

ಕುತೂಹಲದಲ್ಲಿ ಗರಿಗೆದರಿದೆ. ಜನಪದರ ಅನುಭವ ಜಾಣತನದಿಂದ ಧ್ವನಿಯಾಗಿ ಹೊಮ್ಮುವುದೇ ನುಡಿಗಟ್ಟು. ಅದರ ಭಾವತೀವ್ರತೆ ವರ್ಣನಾತೀತ. ಅಂತಹುದೇ ನುಡಿಗಟ್ಟು 'ಗಾಳಿಕೆನೆ'ಯನ್ನು ಬೇಂದ್ರೆಯವರು ಪಾತರಗಿತ್ತಿಯನ್ನು ಬಣ್ಣಿಸಲು ಬಳಸಿದ್ದಾರೆ. ಪಾತರಗಿತ್ತಿಯ ಶುಭ್ರತೆ, ನುಣುಪು, ರಂಗು, ಕಾಂತಿಗೆ ಮಾರುಹೋದ ತಂಗಿಯು – 'ಇದನ್ನು ಗಾಳಿಯ ಕೆನೆಯಲ್ಲಿ ಮಾಡಿದ್ದಾರಲ್ಲವೆ!' ಎಂದು ಅಕ್ಕನನ್ನು ಪ್ರಶ್ನಿಸುತ್ತಾಳೆ : **'ಗಾಳಿಕೆನೀಲೇನs । ಮಡಿದ್ದಾರ ತಾನ!'**

ಕಣ್ಣು ಹರಿದಷ್ಟು ದೂರ ಅನಿರ್ಬಂಧಿತವಾಗಿ ಈ ಕೊನೆಯಿಂದ ಆ ಕೊನೆಯವರೆಗೆ (ಆರು ಪಾರು) ಹಾರಾಡುತ್ತಿರುವ, ಗುಂಪು ಗುಂಪಾಗಿ ಹಾರಾಡುತ್ತಿರುವ ಅಗಣಿತ ಪಾತರಗಿತ್ತಿಯನ್ನು ವೀಕ್ಷಿಸುತ್ತ ತಂಗಿ ಅಕ್ಕನನ್ನು ಪ್ರಶ್ನಿಸುತ್ತಾಳೆ; **'ನೂರು ಆರು ಪಾರು । ಯಾರು ಮಾಡಿದ್ದಾರು!'**

ತಂಗಿಯ ಪ್ರಶ್ನೆ ಅಕ್ಕನಿಗೂ ಪ್ರಶ್ನೆಯಾಗಿಯೇ ಉಳಿಯುತ್ತದೆ. ಅದರ ರೆಕ್ಕೆಯ ಮೇಲೆ ವಿವಿಧ ಬಣ್ಣಗಳ ಮೆರವಣಿಗೆಯಿದ್ದರೂ ಮಧ್ಯದಲ್ಲಿ ನವಿಲುಗಣ್ಣು ಚಿತ್ರಿತವಾಗಿದೆ. ಇಷ್ಟೆಲ್ಲ ವರ್ಣವೈಭವದ ಹಚ್ಚೆ ಹೊಂದಿದ ಅದರ ತೇಜವಾದ ರೆಕ್ಕೆ ರೇಷ್ಮೆಯಷ್ಟು ನಯವಾಗಿದೆ. ಅದರ ಸೂಕ್ಷ್ಮತೆಯ ಕಾರಣ ಅದನ್ನು ಮುಟ್ಟಲು ತನಗೆ ಭಯ ಎಂದು ತಂಗಿ ಹೇಳುವಲ್ಲಿ – ಅವಳ ಮರುಕ ಹಾಗೂ ತನ್ನ ಹಿಡಿತದಿಂದ ಅದು ಹರಿಯುವುದೆಂಬ ನೋವು ಕಾಡಿದೆ.

> 'ಏನು ಬಣ್ಣ ಬಣ್ಣ
> ನಡುವೆ ನವಿಲಗಣ್ಣ!
> ರೇಷಿಮೆ ಪಕ್ಕ ನಯ
> ಮುಟ್ಟಲಾರೆ ಭಯ!'

ಹಾರಾಡುವ ಹೂವಿನಂತಿರುವ ಪಾತರಗಿತ್ತಿಯು ಹೂವಿನ ಬಳಿ ಹೋಗಿ ಗಲ್ಲಾ ತಿವಿಯುವುದನ್ನು ಗಮನಿಸಿದ ತಂಗಿಗೆ ಆದ ಮುದವು ಸಹೃದಯರ ಮನಸ್ಸನ್ನು ಅರಳಿಸುತ್ತದೆ.

'ಹೂವಿನ ಪಕಳಿಗಿಂತ
ತಿಳಿವು ತಿಳಿವು ಅಂತ?
ಹೂವಿಗೆ ಹೋಗಿ ತಾವ
ಗಲ್ಲಾ ತಿವಿತಾವ.'

* * *

ಚಿಟ್ಟೆಗಳು ಚೆಲ್ಲುವರಿದು, ಚೆಲ್ವುವರಿದು (ಅಂದವಾಗಿ ಓಡು) ಇರುವ ಪ್ರಾಕೃತಿಕ ಎಡೆಗಳಾದ ಹುಲ್ಲುಗಾವಲು, ತೋಟ, ಕಳ್ಳಿ, ನಾಯಿಕೊಡೆ, ರುದ್ರಗಂಟಿ ಹೂ, ಗುಲಬಾಕ್ಷಿ ಹೂ, ಸೀಗಿಬಳ್ಳಿ, ಗೊರಟಿಗೆ ಹೂ, ಮಾಲಿಂಗನ ಬಳ್ಳಿಗಳಲ್ಲಿ ಓಡಾಡಿರುವುದು ಅವುಗಳ ಬದುಕಿನ ರೀತಿಯ ಸೂಕ್ಷ್ಮ ವಿಶ್ಲೇಷಣೆಯಾಗಿದೆ. ತಂಗಿಯು ಪಾತರಗಿತ್ತಿಯ ಹುಲ್ಲುಗಾವಲದಲ್ಲಿಯ ಚೆಲ್ಲಾಟವನ್ನು, ಹೆಣ್ಣು ಮಕ್ಕಳ ಹುಡುಗಾಟಿಕೆಗೆ ಹೋಲಿಸಿಕೊಂಡು ಪ್ರಟಪಡಿಸಿರುವ ಸಹಜಾಭಿವ್ಯಕ್ತಿ – ರಸಿಕ ನಿಂತು ನೋಡುವಂತಿದೆ.

'ಹುಲ್ಲುಗಾವುಲದಾಗ
ಹಳ್ಳೀ ಹುಡುಗೀ ಹಾಂಗ –
ಹುಡದೀ ಹುಡದೀ ಭಾಳ
ಆಟಕ್ಕಿಲ್ಲ ತಾಳ'

(ಮರಾಠಿ ಮೂಲದ ಹುಡದಿ ಪದದ ಅರ್ಥ: ೧. ಗೊಂದಲ; ಗಲಾಟೆ. ೨. ಹುಡುಗಾಟಿಕೆ; ಚೆಲ್ಲಾಟ.)

ಮದಗುಣಿಕಿ ವಿಷದ ಗಿಡ. ಅದರ ಎಲೆಯನ್ನು ಕುಟ್ಟಿ ಮಜ್ಜಿಗೆಯಲ್ಲಿ ಕಲಸಿ ಕಡಲೆಗೆ ಹಚ್ಚಿ ಬೀಜೋಪಚಾರ ಮಾಡಿ

ರೈತರು ಬಿತ್ತುತ್ತಾರೆ. ಅದರಲ್ಲಿ ರೋಗ ನಿರೋಧಕ ಶಕ್ತಿಯಿದೆ. ಪಾತರಗಿತ್ತಿಯು ಅದನ್ನು ಹುರುಪಿಗಿಷ್ಟು ಮೇಯುತ್ತದೆ! ಎಲೆಯ ತುದಿ ಚೂಪಾಗಿ ಮುಳ್ಳು ಹೊಂದಿರುವ ಗಿಡ ಗೊರಟಿಗೆ. ಅದರ ಬಣ್ಣದ ಹೂವನ್ನು ಪೂಜೆಗೆ ಬಳಸುತ್ತಾರೆ. ಪಾತರಗಿತ್ತಿಯು ಅದಕ್ಕೆ ದೂರದಿಂದಲೆ ನಮಸ್ಕರಿಸುತ್ತದೆ! ಇದು ಅದರ ಜಾಣ, ಎಚ್ಚರದ ನಡೆ.

ಮದಗುಣಿಕಿಯ ಮದ್ದು
ಹುರುಪಿಗಿಷ್ಟು ಮೆದ್ದು

* * *

ಗೊರಟಿಗೆಗೆ ಶರಣ;

ಮಾಡಿ ದೂರಿಂದಽನ

ದೀಪಾವಳಿಯಲ್ಲಿ ತಂಗಿಯು ತಾನು ಬಿಸಿನೀರು ಸ್ನಾನ ಮಾಡುವಾಗ ಹಂಡೆಗೆ ಸುತ್ತಿದ ಮಾಲಿಂಗನ ಬಳ್ಳಿಯನ್ನು ನೆನೆದು, ಹೊರಗೆ ಸುಖದ ಸೊಬಗಿನಲ್ಲಿ ಪಾತರಗಿತ್ತಿ ಅದರ ಮೇಲೆ ತೂಗಾಡುವುದನ್ನು ವರ್ಣಿಸಿದ್ದಾಳೆ. ಮಾಲಿಂಗನ ಬಳ್ಳಿಯಲ್ಲಿರುವ ಕಾಯಿಗಳು ಲಿಂಗಾಕೃತಿಯಲ್ಲಿದ್ದು ರೋಗ ನಿರೋಧಕ ಶಕ್ತಿಯನ್ನು ಹೊಂದಿವೆ.

'ಮಾಲಿಂಗನ ಬಳ್ಳಿ
ತೂಗೂ ಮಂಚದಲ್ಲಿ,
ತೂಗಿ ತೂಗಿ ತೂಗಿ,
ದಣಿಧಾಂಗ ಆಗಿ.

ಚಿಟ್ಟೆಗಳು ಹೂಗಳ ಪರಾಗಸ್ಪರ್ಶ ಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಪಾತರಗಿತ್ತಿಯು ಗುಲಬಾಕ್ಷಿ ಹೂವಿನ ಕುಶಲ ವಿಚಾರಿಸುತ್ತ ಗಂಡು ಹುಡಿಯಲು ಹಾರೈಸಿ ಸಾಗುವುದನ್ನು ಕವಿ-ಪ್ರಕೃತಿಯ ವಿಸ್ಮಯ ಮಾತಾಡಿದಂತೆ ಬಣ್ಣಿಸಿದ್ದಾರೆ.

‘ಗುಲಬಾಕ್ಷಿಯ ಹೂವ
ಕುಶಲ ಕೇಳತಾವ;
ಹುಡಿಯ ನೀರಿನಾಽಗ
ತುಳುಕಿಸುತ್ತ ಬ್ಯಾಗ
ಹಡಿಯೆ ಬೀಜಗಂಡು
ಹಾರ ಹರಕಿ ಎಂದು.

‘ಗುಲಬಾಕ್ಷಿ’ ಎನ್ನುವುದು ಬಹುಬಣ್ಣದ ಹೂವುಗಳನ್ನು ಬಿಡುವ ಜಾತಿಗೆ ಸೇರಿದ ಸಸ್ಯ. ಅಲ್ಲಲ್ಲಿ ಗನ್ನುಗಳನ್ನು, ಗೆಲ್ಲುಗಳನ್ನು ಹೊಂದಿ ಮಟ್ಟಸ ಎತ್ತರಕ್ಕೆ ಬೆಳೆಯುತ್ತದೆ. ಇದರಲ್ಲಿ ಬಿಳಿ, ಕೇಸರಿ, ಗುಲಾಬಿ, ಹಳದಿ ಇತ್ಯಾದಿ ಹೂವುಗಳನ್ನು ಬಿಡುವ ಪ್ರಭೇದಗಳಿವೆ. ಇಳಿ ಹೊತ್ತಿನ ಸಮಯದಲ್ಲಿ ಸಂಜೆಯ ಹೂ ಬಿಸಿಲಿಗೆ ಈ ಹೂವು ಅರಳುತ್ತವೆ; ತುಂಬ ಮನೋಹರವಾಗಿರುತ್ತವೆ.

‘ಪಾತರಗಿತ್ತಿ’ ಶಿಶುಗೀತವು ಜಾನಪದ ದ್ವಿಪದಿಯಲ್ಲಿ ಅಂಶ ಛಂದಸ್ಸಿನಲ್ಲಿದೆ. ಪ್ರತಿ ಸಾಲು ಮೂರು ತಾಳಕ್ಕೆ ದುಡಿಯುತ್ತ; ಅಂತ್ಯಪ್ರಾಸವು ದೇಸಿಗತ್ತಿಗೆ, ಹಾಡಿನ ಮಟ್ಟಿಗೆ ಕುಣಿಯುತ್ತದೆ. ಇಲ್ಲಿಯ ಕಾವ್ಯಭಾಷೆ ಮಗುವಿನ ಸಹಜ ಸರಳ ನುಡಿಯಲ್ಲಿ ಪಾತರಗಿತ್ತಿಯ ಮೋಹಕ ಲಾವಣ್ಯದಂತಿದೆ.

‘ತಾಳ ಚವ್ವ ಚಕ್ಕ
ಕುಣಿತ ತಕ್ಕ ತಕ್ಕ’

ಪಾತರಗಿತ್ತಿ ನಿಸರ್ಗದ ಶ್ರೇಷ್ಠ ಕೊಡುಗೆ. ಅದರ ಬಗ್ಗೆ ಅರಿವು ಮೂಡಿಸುತ್ತ, ಅದರ ಉಳಿವಿನಲ್ಲಿ ಈ ನೆಲದ ಸೊಗಸು ಇದೆ ಎಂದು ನಿರೂಪಿಸುವ ಅತ್ಯುತ್ತಮ ಪರಿಸರ ಪೋಷಕ ಕವನ ಇದಾಗಿದೆ. ಈ ಜಗದ ಸೃಷ್ಟಿ ಸೌಂದರ್ಯ ಮೂಡುವ

ಬಗೆ ಹೇಗೆ ಗೂಢವೊ, ಅದು ನಿಸರ್ಗದಲ್ಲಿ ಒಂದಾಗಿ ಹೋಗುವುದು ಅಷ್ಟೇ ನಿಗೂಢ ಎಂಬುದನ್ನು ಈ ಕವನದ ಕೊನೆಯ ಭಾಗ ಧ್ವನಿಸುತ್ತದೆ.

ಕಾಣದೆಲ್ಲೊ ಮೂಡಿ
ಬಂದು ಗಾಳಿ ಗೂಡಿ,
ಇನ್ನು ಎಲ್ಲಿಗೋಟ?
ನಂದನದ ತೋಟ!

೪. ಜೋಗಿ

ಬೇಂದ್ರೆಯವರ 'ಜೋಗಿ' ಕವನದ ಜೋಗಿ ಸ್ವಯಂ ಕವಿಯೆ ಆಗಿ, ಅಲ್ಲಿ ತನ್ನ ಆತ್ಮದ ಸಂಭಾಷಣೆಯೊಂದಿಗೆ ಪರಮಾತ್ಮನನ್ನು ಅರಿಯುವ ಪ್ರಯತ್ನ ಮಾಡುವ ಒಂದು ಜೀವ ಸಂವಾದ ನಡೆದಿದೆ. ಕನ್ನಡ ವಿಶ್ವವಿದ್ಯಾನಿಲಯ, ಹಂಪಿ 'ಜೋಗಿ'ಯನ್ನು ಶತಮಾನದ ಕವಿತೆ ಎಂದು ಕರೆದಿದೆ. ಒಟ್ಟು ೧೨ ನುಡಿಗಳಿರುವ ಈ ಕವನದಲ್ಲಿ ಮೊದಲ ಐದು ನುಡಿಗಳು ವ್ಯಕ್ತಿಯು ಕಾಣುವ, ನೇರವಾಗಿ ಅರ್ಥವಾಗುವ ಬದುಕಿನ ಹಾಗೂ ಧಾರ್ಮಿಕ ನಂಬಿಕೆಯ ಸಮೃದ್ಧಿ ಮತ್ತು ಭಯಾನಕತೆಯ ಚಿತ್ರವನ್ನು ನೀಡುತ್ತದೆ.

'ಊರ ತುದಿಯ ಆ ಮೂರು ಬಟ್ಟೆ, ಮುಗಿದಲ್ಲಿ ಕೊಳ್ಳವೆಲ್ಲಿ
ಹಳ್ಳ ಅಡಗಿ ಹರಿದಲ್ಲಿ, ತುಡುಗು-ದನ ತೊಂಡು ಮೇಯುವಲ್ಲಿ
ದಿಕ್ಕು ತಪ್ಪತಾರ ತಪ್ಪಿ ಹೊಕ್ಕರs ಕಕ್ಕಾವಿಕ್ಕಿಯಾಗಿ
ಇರುಳು ಅಂತನs ಹಗಲs ಗೂಕತಾವ ಅಲ್ಲಿ ಜೋಡಗೂಗಿ'

(ಗಂಗಾವತರಣ)

ಎಂಬಲ್ಲಿ 'ಊರು ಹೋಗು ಅನ್ನುತ್ತಿದೆ, ಕಾಡು ಬಾ ಅನ್ನುತ್ತಿದೆ' ಅನ್ನುವ ಭಾವದ ಮನಸ್ಸಿಗೆ ಪಕ್ಕಾದ ಜೋಗಿ ಊರ ತುದಿಯ ಆ ಮೂರು ದಾರಿ ಸೇರುವಲ್ಲಿನ ಕೊಳ್ಳ, ಅಲ್ಲಿ ಹಳ್ಳ ಅಡಗಿ ಹರಿದು, ತುಡುಗುದನ ತೊಂಡು ಮೇಯುವುದು; ಅಲ್ಲಿ ಹಗಲೇ ಕತ್ತಲಂತಿರುವುದರಿಂದ ಜೋಡುಗೂಗಿಗಳು ಗೂಕು ಹಾಕುತ್ತ, ದಿಕ್ಕುತಪ್ಪಿ ಹೋದವರು ಕಕ್ಕಾವಿಕ್ಕಿಯಾಗುವುದು ಮುಂತಾದ ಸಂಕೇತವಿದೆ. ಆ ಸಂಕೇತ ಅವನ ಮನದ ಭಾವದ ಚಿತ್ರಣವೂ ಆಗಿ ಬಿಂಬಿಸುತ್ತದೆ.

ಅದನ್ನು ದಾಟಿ ಹೋದಾಗ ಶ್ಮಶಾನ ಸಿಗುತ್ತದೆ. ಅದರ ಎಡಗಡೆ ಒಟ್ಟು ಆಸೆಯ ಕುತೂಹಲದ, ಆಕರ್ಷಣೆಯ 'ಕಾಮ ತನ್ನ ಹಚ್ಚಂಗಿ ಹಾಸಿಧಾಂಗೆಲ್ಲಿ ನೀರ ಪಾಚಿ। ಹೊಚ್ಚಿ ಹೊಂಡವನು ಮೆಚ್ಚ ಮಾಡತಾವೂ ಕಂಡ ಕಣ್ಣುಗಳಿಗೆ' ಎಂಬ ಕಾಮದ ಮೆಚ್ಚುತನ ತನ್ನ ಹಸುರು ಪಾಚಿ ಚಾಚಿರುವುದನ್ನು ಬಣ್ಣಿಸುತ್ತ ಎಚ್ಚರಿಕೆಯ ಗಂಟೆ ಬಾರಿಸುತ್ತದೆ. 'ಪಾಚಿ ಸರಿಸಿದಾಗ ಕಪ್ಪು ನೀರು ಕರಿತಾವ ಒಳಗೆ ಬಳಿಗೆ.' ಇದು ಇಷ್ಟೆ ಎಂದು ಕಾಮದಲ್ಲಿಯೇ ಪೂರ್ಣ ಆಸಕ್ತನಾದವನನ್ನು ಸಾವು ಬಳಿಗೆ ಕರೆಯುತ್ತದೆ. ಅದನ್ನು ಮೀರುವ ಬಲ ರೂಢಿಸಿಕೊಳ್ಳಬೇಕೆಂಬ ಮನೋಸ್ಥೈರ್ಯ ಹೊಂದಿದವನು ಮುಂದೆ ಸಾಗುವನೆಂದು ಆ ಸ್ಥೈರ್ಯ ಪಡೆಯಬೇಕೆಂಬ ಭಾವವು ಈ ಕಾವ್ಯದಲ್ಲಿದೆ.

ಅದರ ಮುಂದೆ ಬಲಕ್ಕೆ ಎಂಬ ಮಾತಿನಲ್ಲಿ ಬಲಭಾಗವೂ ಆಗಿ ನಮ್ಮ ಉಪ ಸಂಸ್ಕೃತಿಯ ಹರಹನ್ನು ತೋರಿಸುತ್ತ; ಸಂಸ್ಕೃತಿಯ ಒಟ್ಟು ಅನುಭವಕ್ಕೆ ಆ ಹೊಲದ ನಟ್ಟನಡುವಿರುವ ಹುಣಸಿಮರ ಏರಿ ನೋಡಬೇಕೆನ್ನುತ್ತದೆ. ಆಗ ದೂರದಲ್ಲಿ ಸಣ್ಣ ಏರಿಯ ಮೇಲೆ ಹತ್ತು ಗಿಡದ ಗುಂಪೊಂದು ಕಾಣಿಸುತ್ತದೆ.

'ಅಲ್ಲಿ ತೊಗಲ ಬಾವಲೀ ಚೀರತಾವ ಭರತಿ ಹಗಲಿನೊಳಗ
ಹಿಂಡು ಪಾರಿವಾಳ ಹೊಕ್ಕ ಹೊರಡತಾವ ಮತ್ತ ಒಳಗ ಹೊರಗ,
ಅಲ್ಲಿ ಹಬ್ಬಿ ಹರುಹ್ಯsದ ಬೇವಿಗೇ ಸುತ್ತ ಅಮೃತ ಬಳ್ಳಿ,
ಹಾಲ ಸುರವತಾವ ಆಲ, ಅಲ್ಲಿ-ಅಲ್ಲಾಡತಾವ ಅಳ್ಳಿ.

ಆ ಹತ್ತು ಗಿಡದ ಗುಂಪಿನಲ್ಲಿ ರಕ್ತ ಹೀರುವ ನಡುಹಗಲಲ್ಲಿ ಚೀರುವ ಬಾವಲಿ; ಶಾಂತಿಯ ಸಂಕೇತ ಸಾರುವ ಪಾರಿವಾಳ; ಬೇವಿನ ಮರ, ಅದರ ಸುತ್ತ ಹಬ್ಬಿರುವ ಅಮೃತಬಳ್ಳಿ; ಹಾಲುಸುರಿಸುವ ಆಲ, ಜೊತೆಗೆ ಅಲ್ಲಿಯೇ ಅಲ್ಲಾಡುವ ಅಳ್ಳಿ – ಇವು ಸಮೃದ್ಧಿ ಮತ್ತು ಭಯಾನಕತೆ ಎರಡೂ ಏಕೀಭವಿಸಿರುವ ಚಿತ್ರವನ್ನು ನೀಡುತ್ತವೆ. ಅನಂತರ ಆ ವಾತಾವರಣದಲ್ಲಿಯ ಆಕರ್ಷಣೆ ಮತ್ತು ಭಯಾನಕತೆ ಇನ್ನೂ ಗಟ್ಟಿಗೊಳ್ಳುತ್ತ ಸಾಗುತ್ತದೆ :

'ಅತ್ತಿ ಗಿಡಕ ಹತ್ಯಾವ ಹಲಸಿನ್ಹಾಂಗ ಬುಡಕು ಕೆಂಪು ಹಣ್ಣು
ಜೇನು ತುಂಬಿ ತೊಟಗುಟ್ಟತಾವ, ಅದ ಬಯಸತಾವ ಕಣ್ಣು
ಆ ತೋಪಿನ್ಯಾಗ ಬೆಳದsದ ಹ್ಯಾಂಗೋ ಮೂಲ್ಯಾಗ ತಪ್ಪಿ ಮಾವು
ಅದರಡಿಗೆ ಹುತ್ತ, ಅದರಾಗ ಐತೆ ಒಂದೇಳ ಹೆಡೆಯ ಹಾವು'

ಆ ಗಿಡದ ಗುಂಪಿನಲ್ಲಿರುವ ಅತ್ತಿಗಿಡದ ಬುಡಕ್ಕೆ ಹತ್ತಿದ ಜೇನು ತುಂಬಿ ತೊಟಗುಟ್ಟುವ ಹಣ್ಣು ಆಕರ್ಷಿಸುತ್ತದೆ. ಅತ್ತಿಗಿಡದ ಆ ಕೆಂಪು ಹಣ್ಣು ಮರದ ಬುಡಬುಡಕು ಹಲಸಿನ ಹಾಗೆ ಹತ್ತಿದರೂ ಹಲಸಿನ ತೂಕವಿಲ್ಲ, ಹಲಸಿನಂತೆ ಜೇನು ಜೇನಲ್ಲ. ಆದರೆ ರುಚಿಯಿಲ್ಲದೆ ಇಲ್ಲ. ಜೊತೆಗೆ ಗೊನೆಯ ಕೆಂಪು ಹಣ್ಣಿನ ತುಂಬ ತುಂಬುಹುಳುವಿದೆ. ಕವಿಗೆ ಭಯಾನಕತೆಯ ಮಧ್ಯೆ ಗೋಚರಿಸುವ ಹ್ಯಾಂಗೋ ತಪ್ಪಿ ಹುಟ್ಟಿದ ಮಾವಿನ ಮರ ಕಂಡಾಗ ಆ ಗಿಡದ ಗುಂಪು ಈ ತೋಪು ಆಗುತ್ತದೆ. ಆತ್ಮೀಯತೆ ಹುಟ್ಟುತ್ತದೆ. ಆದರೆ ಅದರಡಿಯಲ್ಲಿ ಏಳು ಹೆಡೆಯ ಹಾವಿರುವ ಹುತ್ತವಿದೆ. ಅಂದರೆ ಆತ್ಮೀಯತೆಯ ಸಾಹಸ ಗಾಥೆಗೆ ಏಳು ಹೆಡೆ ಸರ್ಪದಾಟಿ ಹೋಗಬೇಕೆಂಬ ಸೂಚನೆಯಿದೆ.

ಅನಂತರದ ನಾಲ್ಕು ನುಡಿಗಳು ಕನ್ನಡ ಕಾವ್ಯ ಪರಂಪರೆಯ ಉತ್ತಮ ಧ್ವನಿಯಾಗಿ ಕವಿಯ ಆತ್ಮ ಮಾತನಾಡುವ ವಾಕ್ಕು ಆಗಿ; ಕವಿಯ, ಕವಿಯ ಆತ್ಮದ ಸಂಭಾಷಣೆಯಾಗಿದೆ.

'ಆ ಮಾವಿನೊಳಗ ಈ ಸುಗ್ಗಿಯೊಳಗ ಬಂದsದ ಕೋಗಿಲೊಂದು
ತನ್ನ ಜೋಡಿ ಕರೆದ್ಹಾಂಗ ಕರಿತsದ ನನ್ನ ಬಾರs ಅಂದು
ಕೂಗೇ ಕೂಗತsದ ಕೂಗೆ ಕೂಗತsದ ಗಿರಣಿ ಕರೆಯೊ ಹಾಂಗ
ತೆರಪು ಇಲ್ಲ ಒಂದಳತಿ ಕೂಗತsದ ಬ್ಯಾಸರಿಲ್ಲಧಾಂಗ

ಈ ಬದುಕಿನ ಎಲ್ಲ ಜಂಜಾಟದಲ್ಲಿ ಸದಾ ಆತ್ಮದ ಕರೆಗೆ ಎಚ್ಚರವಾಗಬೇಕು. ಆ ಎಚ್ಚರ ಬರುವುದು ಆತ್ಮದ ಸುಗ್ಗಿಯಕಾಲ. ಆ ಮಾವಿನಲ್ಲಿ ಈ ಸುಗ್ಗಿಯಲ್ಲಿ ಒಂದು ಕೋಗಿಲೆ ಬಂದು ತನ್ನ ಜೋಡಿಗಾಗಿ ನನ್ನನ್ನು ಬಾ ಎಂದು ಕರೆಯುತ್ತಿದೆ – ಅದು ನಿರಂತರ ಕೂಗಾಗಿ 'ಒಂದಳತಿ ಕೂಗತsದ ಬ್ಯಾಸರಿಲ್ಲಧಾಂಗ'. ಆ ಕೂಗಿನ ನಿರಂತರತೆ ಗಿರಣಿ ಕರೆಯುವ ಕೂಗಿನಂತೆ ಒಂದಳತಿ ಕೂಗುವ – ಬ್ಯಾಸರಿಲ್ಲದ ಕೂಗಾಗಿದೆ. ಆ ಕೂಗು ಆತ್ಮದ ಕರೆ, ಕರ್ತವ್ಯದ ಕರೆಯೆಂಬಂತೆ ಇದ್ದು – ಆತ್ಮದ ಕರ್ತವ್ಯ ಪರಮಾತ್ಮನತ್ತ ನಡೆಯಲು ಆ ಕೂಗಿಗೆ ಓಗೊಡುವುದು ಎಂಬುದನ್ನು ಧ್ವನಿಸುತ್ತದೆ.

ಆ ಅಂತರಾತ್ಮದ ಕರೆಗೆ ಓಗೊಟ್ಟಾಗ ತಿಳಿಯದ ಯಾವುದೋ ಕಂಪು ಆ ಆತ್ಮವನ್ನು ಎಳೆಯುತ್ತದೆ. ಅದು ತುಂಬಿಯಾಗಿ ಆ ಕಂಪಿನ ಸೆಳೆತಕ್ಕೆ ಸಿಕ್ಕು ಹುಚ್ಚಾಗಿ ದಿಕ್ಕು ತೋಚದಂತಾಗಿ ಕಂಪಿನ ಕರೆಯಿಂದ ಕಂಪಿನ ಸುತ್ತು ತಿರುಗುವುದೇ ಆಗಿದೆ. ಆ ಕಂಪು ಮಾವಾಗಿ ಕೋಗಿಲೆಯಾಗಿ 'ಬಂತು ಸುಗ್ಗಿ ಬಂದsದ ಸುಗ್ಗಿ ಬರತದ ಸುಗ್ಗಿ' ಎಂದು ಕೂಗಿ ಕೂಗಿ ಹೇಳುತ್ತದೆ. ಆ ಕೂಗಿನಲ್ಲಿರುವ ಕ್ರಿಯಾಪದದ ಬಳಕೆಯ ಗತಿ; ಬಂತುಸುಗ್ಗಿ, ಬಂದsದ ಸುಗ್ಗಿ, ಬರತsದ ಸುಗ್ಗಿ ಎಂಬುದು ವರ್ತಮಾನ, ಭೂತ,

ಭವಿಷ್ಯತ್ತಿನಲ್ಲಿದ್ದು – ಕವಿಯ ಮನದ ಏಕಬಿಂದುವಿನಲ್ಲಿ ಸಂಧಿಸುತ್ತಿರುವ ಸೂಚನೆಯಾಗಿದೆ.

'ತಾರ ಪಂಚಮದಾಗ ಕೋಗಿಲಾ ಕೂಗತsದೊ ಜೋಗಿ
ಯಾವ ಬಣ್ಣ ಅದಕಾವ ಕಣ್ಣು ನಾ ನೋಡಲೇನು ಹೋಗಿ?
ತೋಟವೆಲ್ಲ ಹೂವಾಗಿ ನಿಂತು ತೊಂಗೆಲ್ಲ ಗೊಂಚಲಾಗಿ
ಪಾಡು ಆಗತಾವ, ಹಣ್ಣು ಆಗತಾವ ಅದರ ಲಯಕೆ ತೂಗಿ'

ಎಂಬಲ್ಲಿ ಕವಿಯ ಆತ್ಮ, ಪರಮಾತ್ಮನ ಕೋಗಿಲ ಕರೆಗೆ ಓಗೊಡುತ್ತ ಅದು ಕವಿಯಾದ ಜೋಗಿಗೆ ಕೇಳುತ್ತದೆ : 'ತಾರ ಪಂಚಮದಾಗ ಕೋಗಿಲಾ ಕೂಗತsದೊ ಜೋಗಿ । ಯಾವ ಬಣ್ಣ ಅದಕಾವ ಕಣ್ಣು ನಾ ನೋಡಲೇನು ಹೋಗಿ?'

ಆ ತಾರ ಪಂಚಮದ ಕೋಗಿಲೆಯ ಪರಮಾತ್ಮನ ಕೂಗಿಗೆ – ತನ್ನ ಮನದ ತೋಟವೆಲ್ಲಾ ಹೂವಾಗಿ, ತೊಂಗೆಲ್ಲಾ ಗೊಂಚಲಾಗಿ ಪಾಡಾಗಿ, ಹಣ್ಣಾಗಿ ಅದರ ಲಯಕ್ಕೆ ತೂಗುತ್ತಿದೆ. ಅದು ಆ ಕರೆಗೆ ತೂಗುಯ್ಯಲಿಡುವ ಆತ್ಮವು ಪರಮಾತ್ಮನ ಜೊತೆಗೆ ಬೆರೆಯಲು ತೂಗುವ ಸ್ಥಿತಿಯ ಸಮರ್ಥ ಬಣ್ಣನೆ. ಅದು ವ್ಯಕ್ತಿ, ತನ್ನ ವೈಯಕ್ತಿಕ ಜೀವನದಲ್ಲಿ ಆಧ್ಯಾತ್ಮಿಕ ಎತ್ತರಕ್ಕೇರುವ ಮಾನಸಿಕ ಊರ್ಧ್ವಗಾಮಿತ್ವ ಸೂಚಿ.

ಕವಿಯ ದೇಹವನ್ನು ಬಿಟ್ಟು ಆತ್ಮ ಪರಮಾತ್ಮನೊಡನೆ ತೂಗುವ ತೂಗುಯ್ಯಾಲೆಯ ಸಮರ್ಥ ಅಭಿವ್ಯಕ್ತಿ 'ತೊಂಗೆಲ್ಲ ಗೊಂಚಲಾಗಿ ಪಾಡು ಆಗತಾವ' ಎಂಬ ನುಡಿಯಲ್ಲಿದೆ. ಈ ಪಾಡು ಎಂಬ ಪದ ಆತ್ಮದ ಪರಿಪಕ್ವತೆಯ ಸ್ಥಿತಿಯನ್ನು ಧ್ವನಿಸುತ್ತದೆ. ಕಾಯಿಯಿದ್ದದ್ದು ಪಾಡಾಗಿ ಬಂದ ಪರಿಯನ್ನು ಅಭಿವ್ಯಕ್ತಿಸುತ್ತದೆ. ಮಾವಿನ ಮರದ ಸಂಕೇತ, ಅಲ್ಲಿನ ಕೋಗಿಲೆಯ ಕರೆ, ಏಳು

ಹೆಡೆ ಸರ್ಪದ ಹುತ್ತ ಏರಿಹೋದ ಧೈರ್ಯ – ಆತ್ಮನನ್ನು ಮಾವಿನ ಹಣ್ಣಿನ ಪಕ್ವತೆಯ ಸ್ಥಿತಿಗೆ ತಂದಿದೆ. ಉತ್ತರ ಕರ್ನಾಟಕದಲ್ಲಿ ಮಾವು ದೋರುಗಣ್ಣಿನ ಹಂತ ದಾಟಿ ಪಕ್ವತೆಯ ಹಂತ ತಲುಪಿದ ಸ್ಥಿತಿಯನ್ನು 'ಪಾಡು' ಎನ್ನುವರು. ಆಗ ಅದನ್ನು ಕಿತ್ತು ಅಡೆಹಾಕಬೇಕಾಗುತ್ತದೆ ಹಣ್ಣಾಗಲು. ಅಂತಹ Ripeness and readyness to be gathered ನ ಸ್ಥಿತಿಗೆ ತಲುಪಿದ್ದ ಆತ್ಮದ ಏರು ಸ್ಥಿತಿ ಬಂದಿದೆ. ಅದೇ ಸಂದರ್ಭದಲ್ಲಿ ಆತ್ಮ ಪರಮಾತ್ಮನನ್ನು ತಲುಪಲು ನಡೆಸಿದ ಹೋರಾಟ ಅದರ ಪಾಡನ್ನು ಅಂದರೆ Suffering, trouble ಅನ್ನು; proper state, fitnessಗೆ ತಲುಪಿದ ಹಂತವನ್ನೂ ಸೂಚಿಸುತ್ತದೆ. ಅದು 'ಪಟ್ಟ ಪಾಡೆಲ್ಲವೂ ಹುಟ್ಟು ಹಾಡಾಗುತ । ಹೊಸದಾಗಿ ರಸವಾಗಿ ಹರಿಯುತಿದೆ' ಎಂಬ ಸ್ಥಿತಿಯೂ ಆಗುತ್ತದೆ. ಅಂತಹ ಪಾಡು ಆತ್ಮ ಪರಮಾತ್ಮನನ್ನು ಸೇರುವ, ತೂಗಿ ತೊನೆವ ಸಮರ್ಥ ಚಿತ್ರಣವಾಗಿದೆ.

ಅಂತರಾತ್ಮದ ಕರೆಗೆ ಓಗೊಟ್ಟ ಕವಿಯ ಆತ್ಮ ಇರುವ ಹಂಗನ್ನೆಲ್ಲ ಬಿಟ್ಟು ಪರಮಾತ್ಮನ ಕರೆಗೆ ತೂಗುತ್ತ, ಆ ಕರೆಯಿಂದ ತಲೆಕಾವಿನಲ್ಲಿ ಇಮ್ಮಾವಿನಲ್ಲಿ ಬಿಸಿಗಾಲ ನೂಗಿದಂತಾಗುತ್ತದೆ. ಆ ಕರೆಯ ಝುಳದಲ್ಲಿರುವ ಆತ್ಮ ಅದರಿಂದ ತಪ್ಪಿಸಿಕೊಳ್ಳಲಾಗದ ತನ್ನ ಸ್ಥಿತಿಯಿಂದ ಮತ್ತೆ ಜೋಗಿಯನ್ನು ಕೇಳುತ್ತದೆ :

'ಕೊಳಲ ನುಡಿಸಿಧಾಂಗ ಕುಹೂ ಹುಹೂಹೂ ಉಲಿತsದೊ ಜೋಗಿ
ಬೇರೆ ಕೆಲಸದಾಗ ಮನಸು ತೊಡಗದೋ ನೋಡಲೇನು ಹೋಗಿ?'

ಕೋಗಿಲೆಯ ಕರೆ ಇಹದ ಕೊಳಲ ನುಡಿಯಂತಾದಾಗ ಈ ಇಹದ ಕೆಲಸದಲ್ಲಿ ಮನಸ್ಸು ತೊಡಗದೆ 'ನೋಡಲೇನು

ಹೋಗಿ' ಎಂದು ಜೋಗಿ ಕವಿಯನ್ನು – ಅವನ ಅಂತರಾತ್ಮ ಕೇಳುತ್ತದೆ. ಅನಂತರದ ನುಡಿ ಕವಿಯ ಆತ್ಮವು ಜೋಗಿ ಹೇಳಿದ ಎಂದು ಅವನು ಹೇಳಿಕೊಟ್ಟ ನಾಮ ಜಪಿಸುವಾಗ ಆದ ಪರಿಣಾಮವನ್ನು ಕಾವ್ಯವಾಗಿಸುತ್ತದೆ :

'ಬಂದೆ ಜೋಗಿ ಬಾ, ಬಾರೊ ಜೋಗಿ ಬಾ, ಏನು ಹೊತ್ತು ಬಂದಿ
ನೀನೆ ಹೇಳಿದಾ ನಾಮ ಜಪಿಸುವಾಗ ಬಂತೋ ಸುಗ್ಗಿ ಸಂಧಿ
ತಲೆಯ ಯಾವುದೋ ನಾಡಿಯೊಳಗ ಸುರುವಾತು ಸುಗ್ಗಿಸೊಲ್ಲು
ಮುಂದೆ ಕೇಳಿದರ ಅದs ತುಂಬಿತೋ ಮೂಲೆ ಮೂಲೆಯಲ್ಲು'

ಇಲ್ಲಿಯವರೆಗೆ ಸಂಭಾಷಣೆಯಲ್ಲಿ ಕೇಳುತ್ತಿದ್ದ ಜೋಗಿ ಪ್ರತ್ಯಕ್ಷವಾಗುತ್ತಾನೆ. ಕವಿಯ ಆತ್ಮ ಕವಿಯನ್ನು 'ಬಂದೆ ಜೋಗಿ ಬಾ. ಬಾರೊ ಜೋಗಿ ಬಾ, ಏನು ಹೊತ್ತು ಬಂದಿ' ಎಂದು ಎಚ್ಚರಿಕೆಯಿಂದ ಅವನನ್ನು ಸ್ವಾಗತಿಸುತ್ತ; ನಿನ್ನ ನಿರೀಕ್ಷೆಯಲ್ಲಿಯೇ ಇರುವಾಗ ನಿನ್ನ ಅಗತ್ಯ ಇರುವಾಗ ಬಂದೆ. ನೀನು ಹೇಳಿದ ಆತ್ಮ ಸಾಧನೆಯ ನಾಮ ಜಪಿಸುವಾಗ ಆ ಪರಮಾತ್ಮನ ಸುಗ್ಗಿ ಸಂಧಿ ಬಂತು. ಆ ಸುಗ್ಗಿಯ ಸೊಲ್ಲು ತಲೆಯ ಯಾವುದೋ ನಾಡಿಯಲ್ಲಿ ಸುರುವಾಗಿ ಕೇಳುತ್ತ ಕೇಳುತ್ತ ಅದೇ ಮೂಲೆ ಮೂಲೆಯಲ್ಲಿ ತುಂಬಿತು :

'ಗುಡಿಗೆ ನಾನು ಹೊರಟಾಗ ಕರೀತsದ ಕುಹುಕ್ಕುಹೂ ಎಂದು
ಮನದ ಜಪದ ನಡುನಡುವೆ ನಡೀsತsದ ಓಂ ಕುಹೂ ಎಂದು
ಕನಸಿನೊಳಗ ನಾ ಸ್ವರಾ ಕೇಳಿ ಮಾಮರಾ ಆಗತೇನೋ
ಅಂತ ಭ್ರಮಾ ಆಗ್ಯsದ ಮನಕ ನೀ ಬಂದೆ ಜೋಗಿ ಏನೋ।'

ಎಂದು ಭಗವಂತನ ಸಾನ್ನಿಧ್ಯ ದೊರೆತ ಭಾವವನ್ನು ಆ ಕೂಗು ತಾನು ಗುಡಿಗೆ ಹೊರಟಾಗ ಕುಹೂಕ್ಕುಹೂ ಎಂದು ಕರೆಯುತ್ತದೆ. ನನ್ನ ಮನದ ಜಪದ ನಡುನಡುವೆ ಓಂಕುಹೂ

ಎಂದು ನುಡಿಯುತ್ತದೆ. ಆಗ 'ಕನಸಿನೊಳಗ ನಾ ಸ್ವರಾ ಕೇಳಿ, ಮಾಮರಾ ಆಗತೇನೋ' ಎಂಬ ಭ್ರಮೆ ಮನಸ್ಸಿಗಾಗಿದೆ.

ಮನದ ಕೋಗಿಲೆ ಓಂ ಕುಹೂ ಎಂದಾಗ ಮೈಯಾದ ಮಾಮರ ಜುಮ್ಮೆಂದಿದೆ. ಇಲ್ಲಿ ಗುಡಿ ಮತ್ತು ಮೈ ಭೌತವಾಗಿ ಮನಸ್ಸು ಆತ್ಮಧ್ಯಾನಭಾವದಲ್ಲಿ ಲೀನವಾಗಿ 'ನೀ ಬಂದೆ ಜೋಗಿ ಏನೋ!' ಎಂದು ಆಶ್ಚರ್ಯ ವ್ಯಕ್ತಪಡಿಸುವ ಸಂಭ್ರಮವಾಗುತ್ತದೆ. ಆ ಭ್ರಮೆಯ ಸಂದರ್ಭದಲ್ಲಿ ಆತ್ಮ ಕವಿಯಾದ ಜೋಗಿಯನ್ನು – ಗೊಂದಲ ನಿವಾರಣೆಗಾಗಿ ಪ್ರಶ್ನಿಸುವಂತೆ 'ಯಾವ ಸ್ವರ ಇದು, ಯಾವ ಕೋಗಿಲ, ಯಾವ ಮರವೊ ಏನೋ ಯಾಕೆ ಹೀಗೆ ಒಂದೇ ಸಮನೆ ಕೂಗುತ್ತಿದೆ, ಇದಕ್ಕೇನು ಬೇನೆ?' ಎಂದು ಕೇಳುತ್ತದೆ. ಆ ಕೂಗಿನಲ್ಲಿ ಒಟ್ಟು ಪರಿಸರ ಸುತ್ತಲಗುಡ್ಡ ಆ ಅಂತರಾತ್ಮನ ಕರೆಗೆ ನುಗ್ಗಾಗಿ ಹೋಗಿರುವಾಗ ಅಂದರೆ – ಇಡೀ ಪ್ರಕೃತಿ ಪರಮಾತ್ಮನಲ್ಲಿ ಲೀನವಾದಾಗ ಬಿಸಿಕಾವು ಬೆವತು ತಣ್ಣಗಾದ ಹಾಗೆ, ಆತ್ಮವಾದ ತಾನು ಸಾಧನೆಯ ಸಿದ್ಧಿ ಪಡೆದ ಭಾವ ಹೊಂದಿದೆ ಎಂದು ಕವಿಯ ಆತ್ಮ ನುಡಿಯುತ್ತದೆ. 'ಬಿಸಿಲು ಕುಣಿದು ಬೆವತsದ ಈಗ ಬಂದsದ ಮಳಿಯ ಹದಕs'.

ಹೀಗೆ 'ಜೋಗಿ' ಕವನ ತನ್ನ ತೆಕ್ಕೆಯಲ್ಲಿ ಅನುಭಾವವನ್ನು ಹಿಡಿದಿಟ್ಟುಕೊಂಡು ಓದುಗರ ಅಳವಿಗೆ ತಕ್ಕಷ್ಟನ್ನು ಹಂಚಿಕೊಡುವ ಶ್ರೇಷ್ಠ ಕವನವಾಗಿದೆ.

೦೦೦

ಅನುಬಂಧ - ೧

ದ.ರಾ. ಬೇಂದ್ರೆಯವರ ಕೃತಿಗಳು

೧. ಕಾವ್ಯ	ಪ್ರಥಮ ಮುದ್ರಣ
೧. ಕೃಷ್ಣಾಕುಮಾರಿ	೧೯೨೨
೨. ಗರಿ	೧೯೩೨
೩. ಮೂರ್ತಿ ಮತ್ತು ಕಾಮಕಸ್ತೂರಿ	೧೯೩೪
೪. ಸಖೀಗೀತ	೧೯೩೭
೫. ಉಯ್ಯಾಲೆ	೧೯೩೮
೬. ನಾದಲೀಲೆ	೧೯೩೮
೭. ಕನ್ನಡ ಮೇಘದೂತ	೧೯೪೩
೮. ಹಾಡು-ಪಾಡು	೧೯೪೬
೯. ಗಂಗಾವತರಣ	೧೯೫೧
೧೦. ಮುಕ್ತಕಂಠ	೧೯೫೬
೧೧. ಸೂರ್ಯಪಾನ	೧೯೫೬
೧೨. ಹೃದಯ ಸಮುದ್ರ	೧೯೫೬
೧೩. ಚೈತ್ಯಾಲಯ	೧೯೫೭
೧೪. ಜೀವಲಹರಿ	೧೯೫೭
೧೫. ನಮನ	೧೯೫೮
೧೬. ಸಂಚಯ	೧೯೫೯
೧೭. ಉತ್ತರಾಯಣ	೧೯೬೦
೧೮. ಮುಗಿಲ ಮಲ್ಲಿಗೆ	೧೯೬೧
೧೯. ಯಕ್ಷ-ಯಕ್ಷಿ	೧೯೬೨
೨೦. ನಾಕುತಂತಿ	೧೯೬೪
೨೧. ಮರ್ಯಾದೆ	೧೯೬೬
೨೨. ಶ್ರೀಮಾತಾ	೧೯೬೮

೬. ನಾಟಕಗಳು

೭. ಸಂಪಾದನೆ

೮. ಪತ್ರಿಕೆಗಳು, ಸಂಪಾದನೆ

೯. ಅನುವಾದ

೮. ಗುರುಗೋವಿಂದ ಸಿಂಗ್ ೧೯೭೬
(ವಾಮನ ಬೇಂದ್ರೆ ಮತ್ತು
ಕೆ.ಎಸ್. ಶರ್ಮಾ ಅವರ ಜೊತೆ)

೧೦. ಇಂಗ್ಲಿಷ್ ಗ್ರಂಥ

1. A Theory of Immortality 1977

೧೧. ಮರಾಠಿ ಕೃತಿಗಳು

೧. ಸಂತ ಮಹಂತಾಂಚಾ
ಪೂರ್ಣಶಂಭೋವಿಠ್ಠಲ ೧೯೬೩
೨. ಸಂವಾದ : ಕವನ ಮತ್ತು ವಿಮರ್ಶೆ,
ಲೇಖನ ಇವುಗಳ ಸಂಗ್ರಹ ೧೯೬೫
೩. ವಿಟ್ಠಲ ಸಂಪ್ರದಾಯ, ಒಂದು ಭಾಷಣ ೧೯೬೫
೪. ಶಾಂತಲಾ
(ಕನ್ನಡ ಮೂಲ : ಕೆ.ವಿ. ಅಯ್ಯರ್) ೧೯೭೨
೫. ಉಮಾಳ (ಕವನ ಸಂಗ್ರಹ) ೧೯೯೧

೧೨. ವರಕವಿ ದ.ರಾ. ಬೇಂದ್ರೆಯವರ ಜೀವನ
ಮಹಾಕಾವ್ಯ "ಔದುಂಬರ ಗಾಥೆ"
ಅಂಬಿಕಾತನಯದತ್ತರ ಸಮಗ್ರಕಾವ್ಯ
ಸಂಪಾದಕರು – ಡಾ॥ ವಾಮನಬೇಂದ್ರೆ ೨೦೦೩

ಸಂಪುಟ ೧. ನಮನ
ಸಂಪುಟ ೨. ದರ್ಶನ
ಸಂಪುಟ ೩. ವಿಕಾಸ
ಸಂಪುಟ ೪. ವಿನ್ಯಾಸ
ಸಂಪುಟ ೫. ತತ್ತ್ವ
ಸಂಪುಟ ೬. ಸಿದ್ಧಾಂತ
ಸಂಪುಟ ೭. ಶ್ರೀಮಾತಾರವಿಂದ ಜ್ಞಾನಪ್ರಕಾಶ
ಸಂಪುಟ ೮. ಸಮಗ್ರ 'ಸಖೀಗೀತ'

ಅನುಬಂಧ - ೨

ದ.ರಾ. ಬೇಂದ್ರೆಯವರ ಜೀವನದ ಪ್ರಮುಖ ಘಟ್ಟಗಳು

೩೧-೧-೧೮೯೬	ಜನನ, ಮಾಘವದ್ಯ ಪ್ರತಿಪದೆ, ಗುರು ಪ್ರತಿಪದೆ. ಮನ್ಮಥನಾಮ ಸಂವತ್ಸರ, ಧಾರವಾಡದ ಪೋತ್ನೀಸ ಓಣಿ, ಗುಣಾರಿಯವರ ಮನೆಯಲ್ಲಿ
೧೮೯೮	ತಮ್ಮ ಚಿದಂಬರ ಹುಟ್ಟಿದ, ತೀರಿಕೊಂಡ.
೧೯೦೨	ಕನ್ನಡ ಶಾಲೆ ಬಿನ್ ಇಯತ್ತೆ, ೧ನೆಯ ಇಯತ್ತೆ ೩ ತಿಂಗಳಲ್ಲಿ ಪಾಸು. ಶ್ರೀಧರ ಖಾನೋಳಕರ ಗೆಳೆತನ. ಶ್ರೀ ಗೊಂದಾವಲೇಕರ ದರ್ಶನ, ತಮ್ಮ ರಾಘೂನ ಜನನ ಕಾಮನ ಕಟ್ಟೆಯ ಗೋಖಲೆಯವರ ಮನೆಯಲ್ಲಿ.
೧೯೦೩	೨ನೆ ಇಯತ್ತೆ ಮುಗಿಯಿತು. ತಮ್ಮ ಕೃಷ್ಣನ ಜನನ.
೧೯೦೭	ಇಂಗ್ಲಿಷ್ ೨ನೆ ಇಯತ್ತೆ, ನವಂಬರದಲ್ಲಿ ತಂದೆ ರಾಮಚಂದ್ರ ಬೇಂದ್ರೆ ತೀರಿಕೊಂಡರು
೧೯೧೦	ರಾಘೂ ತೀರಿಕೊಂಡ.
೧೯೧೩	ಮ್ಯಾಟ್ರಿಕ್ ಪಾಸಾಯಿತು. ಅಜ್ಜಿ ಗೋದೂಬಾಯಿಯ ಮರಣ.
೧೯೧೪	ಪುಣೆಯ ಫರ್ಗ್ಯೂಸನ್ ಕಾಲೇಜಿಗೆ ಸೇರಿದ್ದು.
೧೯೧೮	ಬಿ.ಎ. ಪಾಸಾಯಿತು, 'ತುತ್ತೂರಿ', 'ಕೋಗಿಲೆ ಕೋಗಿಲೆ ಎಂದು ಬಂದೆ ನೀ ಹೇಳೆ ಹೇಳೆ ಗೆಳತಿ' ಕವನಗಳ ರಚನೆ. ನಾಲ್ಕನೆಯ ಕನ್ನಡ ಸಾಹಿತ್ಯಸಮ್ಮೇಳನ ಪ್ರಸಂಗದಲ್ಲಿ ಕವಿತಾ ವಾಚನ. ಜೂನ್ ೪ ರಿಂದ ವಿಕ್ಟೋರಿಯಾ ಹೈಸ್ಕೂಲು-ಧಾರವಾಡದಲ್ಲಿ ಶಿಕ್ಷಕ ವೃತ್ತಿಯ ಪ್ರಾರಂಭ.
೧೯೧೯	ಲಕ್ಷ್ಮೀಬಾಯಿ (ರಂಗೂತಾಯಿ) ಇವರೊಂದಿಗೆ ವಿವಾಹ, ಹುಬ್ಬಳ್ಳಿಯಲ್ಲಿ.

೧೯೨೧ ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಕ.

೧೯೨೨ 'ಕೃಷ್ಣಾಕುಮಾರಿ' ಕಥನ ಕವನದ ಪ್ರಕಟಣೆ. ಗೆಳೆಯರ ಗುಂಪಿನ ಕನಸು. ಮೊದಲ ಮಗ ಕ್ಷೇಮೇಂದ್ರನ ಜನನ. ದಾವಣಗೇರಿ ಸಾಹಿತ್ಯ ಸಮ್ಮೇಳನಕ್ಕೆ ಹೋದದ್ದು.

೧೯೨೩ ಮೇದಲ್ಲಿ ಕ್ಷೇಮೇಂದ್ರ ತೀರಿಕೊಂಡ. 'ಜಯಕರ್ನಾಟಕ' ಪತ್ರಿಕೆಯೊಂದಿಗೆ ಸಂಬಂಧ. ವಿಜಾಪುರ ಸಾಹಿತ್ಯಸಮ್ಮೇಳನಕ್ಕೆ ಹೋದದ್ದು.

೧೯೨೪ ತಾಯಿ ತೀರಿದಳು. ಎರಡನೆಯ ಮಗ-ರಾಮನ ಜನನ.

೧೯೨೫ ಮತ್ತೆ ನ್ಯೂ ಇಂಗ್ಲಿಷ್ ಸ್ಕೂಲಿನಲ್ಲಿ (ಮೊದಲಿನ ವಿಕ್ಟೋರಿಯಾ ಹೈಸ್ಕೂಲೇ ಇದು) ಶಿಕ್ಷಕ.

೧೯೨೬ ನಾಡಹಬ್ಬ ಪ್ರಾರಂಭಿಸಿದ್ದು. 'ಸ್ವಧರ್ಮ' ಪತ್ರಿಕೆ ಕೈಕೊಂಡದ್ದು.

೧೯೨೭ ಮೂರನೆಯ ಮಗ-ಭಾಸ್ಕರ ಹುಟ್ಟಿದ್ದು; ತೀರಿದ್ದು.

೧೯೨೮ ನಾಲ್ಕನೆಯ ಮಗ - ಪಾಂಡುರಂಗನ ಜನನ. ಉಪನಿಷದ್ ರಹಸ್ಯ ಪ್ರಕಟಣೆ. 'ನನ್ನದು ಈ ಕನ್ನಡ ನಾಡು' ಕೃತಿ ಗೆಳೆಯರ ಗುಂಪಿನಿಂದ ಪ್ರಕಟಣೆ.

೧೯೨೯ ಚಿಕ್ಕಪ್ಪ, ಚಿಕ್ಕಮ್ಮ - ಸಾಧನಕೇರಿಯಲ್ಲಿ ಮನೆಯನ್ನು ಕೊಡಿಸಿದ್ದು. ಬೆಳಗಾವಿ ಸಾಹಿತ್ಯ ಸಮ್ಮೇಳನದಲ್ಲಿ ಹಕ್ಕಿ ಹಾರುತಿದೆ ಕವನ ವಾಚನ. ಆಲೂರು ವೆಂಕಟರಾಯರು 'ಜಯಕರ್ನಾಟಕ' ಪತ್ರಿಕೆಯನ್ನು ಗೆಳೆಯರ ಗುಂಪಿಗೆ ವಹಿಸಿಕೊಟ್ಟಿದ್ದು.

೧೯೩೦ 'ಹಕ್ಕಿ ಹಾರುತಿದೆ' ಕವನ ಸಂಗ್ರಹ ಗೆಳೆಯರ ಗುಂಪಿನಿಂದ ಪ್ರಕಟಣೆ. ಮೈಸೂರು ಲೇಖಕರ ಗೋಷ್ಠಿಯ ಅಧ್ಯಕ್ಷ.

೧೯೩೧ ಕಾರವಾರ ಸಾಹಿತ್ಯ ಸಮ್ಮೇಳನಕ್ಕೆ ಹೋದದ್ದು.

೧೯೩೨ 'ಗರಿ' ಕವನ ಸಂಕಲನದ ಪ್ರಕಟಣೆ. 'ನರಬಲಿ' ಕವನ ರಚಿಸಿದ ಕಾರಣದಿಂದ ಹಿಂಡಲಗಿ ಜೇಲುವಾಸ. ಮುಗದ ಗ್ರಾಮದಲ್ಲಿ ನಜರಬಂದಿ.

೧೯೩೩ ಎಂ.ಎ., ಅಭ್ಯಾಸ ಪುಣೆಯಲ್ಲಿ

೧೯೩೪ ಮಗಳು – ಲಲಿತ ಹುಟ್ಟಿದಳು; ತೀರಿದಳು. 'ಮೂರ್ತಿ ಮತ್ತು ಕಾಮಕಸ್ತೂರಿ' ಪ್ರಕಟಣೆ.

೧೯೩೫ ಎಂ.ಎ., ಪಾಸು ಆಗಿದ್ದು, ಮಗ – ವಾಮನನ (ಬಾಳ) ಜನನ. ಮುಂಬೈ ಕವಿ ಸಮ್ಮೇಳನದ ಅಧ್ಯಕ್ಷ.

೧೯೩೬ ರಿಂದ ೧೯೪೪ ಸ್ಥಿರ ನೌಕರಿ ಇಲ್ಲದೆ ಅಲೆದಾಡಿದ್ದು.

೧೯೩೭ ಮಗಳು – ಪ್ರೇಮಳ ಜನನ. 'ಸಖೀಗೀತ', 'ಸಾಹಿತ್ಯ ಮತ್ತು ವಿಮರ್ಶೆ' ಪ್ರಕಟಣೆ.

೧೯೩೮ 'ನಾದಲೀಲೆ', 'ಉಯ್ಯಾಲೆ' ಪ್ರಕಟಣೆ. 'ಜೀವನ' ಪತ್ರಿಕೆಯ ಸಂಪಾದಕತ್ವ

೧೯೩೯ ಮಗಳು – ಮಂಗಲಳ ಜನನ. 'ನಿರಾಭರಣ ಸುಂದರಿ', 'ಸಾಹಿತ್ಯ ಮತ್ತು ಸಂಶೋಧನೆ' ಪ್ರಕಟಣೆ.

೧೯೪೦ ಧಾರಾವಾಡದಲ್ಲಿ ಸಾಹಿತ್ಯ ಸಮ್ಮೇಳನ.

೧೯೪೧ ಗದಗಿನ ವಿದ್ಯಾದಾನ ಸಮಿತಿ ಹೈಸ್ಕೂಲ್‌ಗೆ ಹೆಡ್‌ಮಾಸ್ಟರ್ ಆಗಿ ಹೋದದ್ದು.

೧೯೪೨ ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಸ್ಕೂಲಿಗೆ ಶಿಕ್ಷಕ.

೧೯೪೩ ಪಾಂಡಿಚೆರಿ – ಶ್ರೀ ಮಾತಾರವಿಂದರ ದರ್ಶನ. ಪೂನಾದ ಬಿ.ಎಂ.ಸಿ.ಸಿ., ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರು. 'ಕನ್ನಡ ಮೇಘದೂತ' ಪ್ರಕಟಣೆ. ಡಿಸೆಂಬರ್ ೨೬ ರಂದು ಶಿವಮೊಗ್ಗದಲ್ಲಿ ನಡೆದ ೨೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೪೪ ಸೊಲ್ಲಾಪುರದ ಡಿ.ಎ.ವಿ., ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರು. ಮಗ–ಆನಂದ ಹುಟ್ಟಿದ್ದು; ತೀರಿಕೊಂಡಿದ್ದು. ಮಗ – ರಾಮ ತೀರಿಕೊಂಡದ್ದು.

೧೯೪೬ ಧಾರಾವಾಡ ಸಾರ್ವಜನಿಕರಿಂದ ೫೦ನೆಯ ಹುಟ್ಟುಹಬ್ಬದ ಆಚರಣೆ - ಸನ್ಮಾನ. ೧೦ ಸಾವಿರ ನಿಧಿ ಅರ್ಪಣೆ. 'ಹಾಡು-ಪಾಡು' ಪ್ರಕಟಣೆ.

೧೯೫೧ 'ಗಂಗಾವತರಣ' ಪ್ರಕಟಣೆ.

೧೯೫೬ ಡಿ.ಎ.ವಿ., ಕಾಲೇಜು ಸೊಲ್ಲಾಪುರ ಕನ್ನಡ ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತಿ. ಆಕಾಶವಾಣಿ, ಧಾರವಾಡ ಕೇಂದ್ರದ ಸಾಹಿತ್ಯ ಸಲಹೆಗಾರ. ಸೊಲ್ಲಾಪುರ, ಪುಣೆಯಲ್ಲಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಬೆಂಗಳೂರಿನಲ್ಲಿ ೬೦ನೆಯ ಹುಟ್ಟುಹಬ್ಬದ ಆಚರಣೆ - ಸನ್ಮಾನ.

೧೯೫೯ 'ಅರಳು-ಮರಳು' ಕವನ ಸಂಗ್ರಹ ಗುಚ್ಛಕ್ಕೆ ೧೯೫೮ರ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ.

೧೯೬೨ ತುಮಕೂರಿನ ಪುರಸಭೆಯಿಂದ ಸನ್ಮಾನ.

೧೯೬೪ ಮೈಸೂರು ದಸರಾ ಮಹೋತ್ಸವದ ಸಮಿತಿಯವರಿಂದ ಸನ್ಮಾನ.

೧೯೬೫ ಮರಾಠಿ 'ಸಂವಾದ' ಗ್ರಂಥಕ್ಕೆ ಮಹಾರಾಷ್ಟ್ರದ ಕೇಳಕರ ಪ್ರಶಸ್ತಿ.

೧೯೬೬ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ. ಶಿರಹಟ್ಟಿಯಲ್ಲಿ ೭೦ನೆಯ ಹುಟ್ಟುಹಬ್ಬದ ಸನ್ಮಾನ. ಕರ್ನಾಟಕ ಸರಕಾರದಿಂದ ಆ ಜನ್ಮ ವಿಶ್ರಾಂತ ವೇತನ ಗೌರವ. ಹೈದರಾಬಾದಿನ ಹಿಂದಿ ಪ್ರಚಾರ ಸಭಾ ಅವರಿಂದ ಸಾಹಿತ್ಯ ಆಚಾರ್ಯ ಪ್ರಶಸ್ತಿ. ಆಗಸ್ಟ್ ೧೭ ರಂದು ಪತ್ನೀ ವಿಯೋಗ.

೧೯೬೮ 'ಪದ್ಮಶ್ರೀ' ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ.

೧೯೬೯ ಫೆಲೊ, ಸಾಹಿತ್ಯ ಅಕಾಡೆಮಿ (ದೆಹಲಿ) ಗೌರವ.

೧೯೭೨ 'ಕರ್ನಾಟಕ ಕವಿಕುಲತಿಲಕ' ಪ್ರಶಸ್ತಿ - ಶ್ರೀ ಅದಮಾರು ಮಠ - ಉಡುಪಿ ಪರ್ಯಾಯ.

೭೫ನೇ ಹುಟ್ಟುಹಬ್ಬದ ಸನ್ಮಾನ – ಸೊಲ್ಲಾಪುರ ಮತ್ತು ಪುಣೆಯಲ್ಲಿ. ಕರ್ನಾಟಕ ಸರಕಾರದಿಂದ ಸಾಕ್ಷ್ಯ ಚಿತ್ರ ನಿರ್ಮಾಣ.

೧೯೭೪ 'ನಾಕುತಂತಿ' ಕವನ ಸಂಗ್ರಹಕ್ಕೆ ೧೯೭೩ರ ಜ್ಞಾನಪೀಠ ಪ್ರಶಸ್ತಿ.

೧೯೭೪ ಕಾಶೀ ವಿದ್ಯಾಪೀಠ, ವಾರಣಾಸಿ – ಇವರಿಂದ ಗೌರವ ಡಾಕ್ಟರೇಟ್ ಪದವಿ.

೧೯೭೭ ಆಕಾಶವಾಣಿ ಪ್ರಸಾರದ ಸುವರ್ಣ ಮಹೋತ್ಸವದ ಸನ್ಮಾನ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ವಜ್ರ ಮಹೋತ್ಸವದ ಸನ್ಮಾನ. 'ಇಳಿದು ಬಾ ತಾಯಿ' ಅಭಿನಂದನ ಗ್ರಂಥ ಪ್ರಕಟಣೆ.

೨೬-೧೦-೧೯೮೧ ಮುಂಬೈ, ಹರಿಕಿಶನ್‌ದಾಸ್ ಆಸ್ಪತ್ರೆಯಲ್ಲಿ ದುರ್ಮತಿ ಸಂವತ್ಸರ, ಆಶ್ವಯುಜ ಬಹುಳ, ದೀಪಾವಳಿ, ನರಕ ಚತುರ್ದಶಿಯ ದಿವಸ ನಿರ್ವಾಣ.

w.o.3158-mupp-2,100 copies-16-7-2018

PRASARANGA : UNIVERSITY OF MYSORE
BOOK NAME: BENDREKAVYA - 331
AUTH NAME: DR. G. KRISHNAPPA
PRICE: 20 RS
112068

₹ 20/-

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
2018